ಓಂ


ಶ್ರೀ ಪರಮಾತ್ಮನೇ ನಮಃ

# ಗೀತಾಯೋಗ

## ಕನ್ನಡ ಭಗವದ್ಗೀತೆ

(ಯೋಗ ಷಟ್ಪದಿ)

(ಕಂಠಸ್ಥ ಮಾಡಿ ಹಾಡಬಹುದಾದ ಕೃತಿ)




ಕರ್ತೃ

ಅಮೃತ ಚನ್ನಶಾಮ



ಅಂತರ್ಜಾಲ ಆವೃತ್ತಿ

2022

ಓಂ

ಶ್ರೀ ಪರಮಾತ್ಮನೇ ನಮಃ

# ಗೀತಾಯೋಗ

## ಕನ್ನಡ ಭಗವದ್ಗೀತೆ

(ಯೋಗ ಷಟ್ಪದಿ)

ಲೇಖಕರು :

**ಅಮೃತ ಚನ್ನಶಾಮ**

Om

Sree Paramatmane Namaha

# GEETHA YOGA

## KANNADA BHAGAVAD GEETHA

**(YOGA SHATPADI)**

Author :

**Amritha Channa Shama**

Vidvan A. C.Shamanna, MA., LL.M.,
Nrisimha Kripa, 3135, P.H.Colony, Tumkur

# GEETHA YOGA

– by Vidvan A. C.Shamanna,

Published by : C.S. Suranjana
67, MCHS layout, 5th 'A' Cross,
16th Main, BTM II Stage,
Bengaluru - 560076.

Copy right : Dr. C.S. Sunandana
Second Edition (Internet Edition) : 2022
Pages : XVI + 114 = 130
Price : Rs. 100
Book Size : Demi 1/8th

ಹಕ್ಕುಗಳು : ಡಾ. ಸಿ.ಎಸ್. ಸುನಂದನ
ಎರಡನೇ ಮುದ್ರಣ (ಅಂತರ್ಜಾಲ ಆವೃತ್ತಿ) : 2022
ಪುಟಗಳು : XVI + 114 = 130
ಬೆಲೆ : 100–00 (ನೂರು ರೂಪಾಯಿಗಳು)
ಪುಸ್ತಕದ ಆಕಾರ : 1/8 ಡೆಮ್ಮಿ ಅಳತೆ

ಪ್ರಕಾಶಕರು :
**ಸಿ.ಎಸ್. ಸುರಂಜನ**
ನಂ. 67, ಎಂ.ಸಿ.ಹೆಚ್.ಎಸ್. ಲೇಔಟ್, 5ನೇ 'ಎ' ಅಡ್ಡರಸ್ತೆ,
16ನೇ ಮುಖ್ಯರಸ್ತೆ, ಬಿಟಿಎಂ 2ನೇ ಹಂತ,
ಬೆಂಗಳೂರು – 560 076

ವಿನ್ಯಾಸ ಮತ್ತು ಮುದ್ರಣ :
**ಸುಹಾಸ್ ಗ್ರಾಫಿಕ್ಸ್**
ಬೆಂಗಳೂರು
ದೂ: 080–41672195 / 98453 55509

# ಅರ್ಪಣೆ

ಹೇವಿಳಂಬಿ ಸಂವತ್ಸರದ
ಆಷಾಢ ಬಹುಳ ದ್ವಾದಶಿ
ಬುಧವಾರ (24–7–1957) ದಿನ
ಪರಂಧಾಮವೈದಿದ
ಪಿತೃಪೂಜ್ಯನ
ಪರಮ ಪವಿತ್ರ
ಪಾದಪದ್ಮಂಗಳಲ್ಲಿ

ಓಂ

– ಶ್ರೀ ಪರಮಾತ್ಮನೇ ನಮಃ –



# ಗೀತಾಯೋಗ

— ಕನ್ನಡ ಭಗವದ್ಗೀತೆ —

(ಯೋಗ ಷಟ್ಪದಿ)

ಅಮೃತ ಚನ್ನಶಾಮ

(ಎಲ್ಲಾ ಹಕ್ಕುಗಳು ಗ್ರಂಥಕರ್ತನವು)

ಪ್ರಥಮ ಮುದ್ರಣ

ಗ್ರಂಥಕರ್ತ :

ವಿದ್ವಾನ್ ಎ.ಸಿ.ಶಾಮಣ್ಣ ಎಂ.ಎ.,ಎಲ್‌ಎಲ್.ಬಿ.,

ನೃಸಿಂಹ ಕೃಪ,

3135, ಪೂರ್‌ಹೌಸ್ ಕಾಲೋನಿ, ತುಮಕೂರು

ಬೆಲೆ : 12 ರೂ.

# ಭಗವದ್ಗೀತಾ ಮಹತ್ವ
## (1988)

ಮಹಾಭಾರತ ಗ್ರಂಥವು । ವ್ಯಾಸರಚಿತ ಮಹಾಕೃತಿ
ಹೃದಯವದರದು ಅಲ್ಲಿಯೆ । ಭಗವಂತ ಗೀತೆಯು ತತ್ವವು ॥ ೧ ॥

ಕೃಷ್ಣ ಪೇಳಿದ ಪಾರ್ಥಗೆ । ಎಂಬ ಮಾತಂತಿರಲದು
ಕೃಷ್ಣ ಪಾರ್ಥರ ವ್ಯಕ್ತಿ ಚಿತ್ರಣ । ವ್ಯಾಸ ಕೌಶಲ ಕಾರ್ಯವು ॥ ೨ ॥

ಬುದ್ಧಿ–ಗುರುವೆ ಕೃಷ್ಣ ತತ್ವವು । ಪಾರ್ಥ ತಾ ಮನ–ಶಿಷ್ಯನು
ಶಿಷ್ಯ–ಗುರು ಸಂವಾದದದ್ಭುತ । ವಿಷಯವೇ ಈ ಗೀತವು ॥ ೩ ॥

ಕೃಷ್ಣ ಶಕ್ತಿಯು ತಾನದು । ಈಶ್ವರ ನಿರಾಕಾರವು
ಯಾವ ಹೆಸರಿಂದಾದರು । ಸರಿಯೆ ತಾನದ ಕರೆದರು ॥ ೪ ॥

ತತ್ವದಾ ಭಂಡಾರ ಕೀಲಿಯು । ವ್ಯಾಸರಿಗೆ ತಾ ದೊರಕಿತು
ಈಶಕೃಪೆಯಿಂ ವ್ಯಾಸರಿಂದಲೆ । ಜ್ಞಾನ ಕೋಶವು ತೆರೆಯಿತು ॥ ೫ ॥

ಜ್ಞಾನಕೋಶವು ತಾನದೆ । ಗ್ರಂಥ ಭಗವದ್ಗೀತೆಯು
ಲೋಕ ತತ್ವಜ್ಞಾನವದರೊಳು । ಹೇಳಿ ಇದೆ ತಾ ನಿತ್ಯವು ॥ ೬ ॥

ನಿತ್ಯ ಸತ್ಯ ಗ್ರಂಥವು । ಚಂದ್ರ ಸೂರ್ಯರ ಹಾಗೆಯೆ
ಯಾರು ಏನನೆ ಹೇಳಲಿ । ಸತ್ಯಕದು ಸಟೆ ಬರುವುದೆ? ॥ ೭ ॥

ಸಕಲ ತತ್ವಜ್ಞಾನದಿಂ । ಸರ್ವ ಮಾನವ ಗ್ರಂಥವು
ಪೂರ್ಣ ಮಾನವ ಧರ್ಮದ । ವಿಶದ ವರ್ಣನವದರೊಳು ॥ ೮ ॥

ಗೀತೆಯಾ ಅನುವಾದವು । ವಿಶ್ವ ಭಾಷೆಯೊಳಾಗಿದೆ
ಅದರಿ ತಾನೀ ಗ್ರಂಥದ । ಭವ್ಯತೆಯು ತಾ ತಿಳಿವುದು ॥ ೯ ॥

ಧರ್ಮ ಹೇಳಿದೆ ಸರ್ವಕು । ಭಕ್ತಿ, ಕರ್ಮ, ಜ್ಞಾನವ
ಯೋಗ, ಬುದ್ಧಿ, ತ್ಯಾಗ ವೈ । ರಾಗ್ಯ, ಲೋಕ ಜ್ಞಾನವ ॥ ೧೦ ॥

ನೀತಿ, ನಿಷ್ಠಾನಿಯಮವ । ಆತ್ಮದಾ ಕಲ್ಯಾಣವ
ಶ್ರದ್ಧಾ, ವಿವೇಕ, ಪ್ರಜ್ಞೆಯ । ದೇವ ರಾಕ್ಷಸ ಭಾವವ ॥ ೧೧ ॥

ಪೂಜ್ಯ ಭಗವದ್ಗೀತೆಯು । ಜ್ಞಾನತೃಷೆಗದು ಜೀವನ
ಸರ್ವರಿಂಗದು ಸರ್ವಕಾಲಕು । ಸರ್ವಸುಖಕದು ಸಾಧನ ॥ ೧೨ ॥

# ಕೃತಜ್ಞತೆಗಳು

೧೯೬೪ರಲ್ಲಿ ಮೊದಲು ಪ್ರಕಟಗೊಂಡ ನಮ್ಮ ತೀರ್ಥರೂಪರವರ ಗೀತಾಯೋಗ (ಕನ್ನಡ ಭಗವದ್ಗೀತೆ) ಕೃತಿಯನ್ನು ಈ ಸಂದರ್ಭದಲ್ಲಿ ಅಂತರ್ಜಾಲ ಆವೃತ್ತಿಯನ್ನು ತರಲು ಶ್ರೀ ಕೃಷ್ಣನ ಪ್ರೇರಣೆಯಿಂದ ನಿರ್ಧರಿಸಲಾಗಿದೆ. ಈ ಪ್ರಯತ್ನವನ್ನು ಕಾರ್ಯರೂಪಕ್ಕೆ ತರುವಲ್ಲಿ ಹಲವಾರು ಚೇತನಗಳ ಯೋಗದಾನ ಇದೆ. ಇವರಲ್ಲಿ ಕೆಲವರ ಹೆಸರುಗಳನ್ನು ತೆಗೆದುಕೊಳ್ಳಲಾಗಿದೆ.

ಈ ಪುಸ್ತಕವನ್ನು ಮರು ಮುದ್ರಿಸಿ, ಅಂತರ್ಜಾಲ ಜ್ಞಾನ ಕೋಶಕ್ಕೆ ಅಳವಡಿಸಲು ಹೊರಟಾಗ ಸೂಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಪರಿಚಯಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳ ಕಛೇರಿಯ ಶ್ರೀಮತಿ ಶ್ವೇತಾ ಅವರಿಗೆ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ನೆರವಾದ ಶ್ರೀ ರಮೇಶ್ ಚಂದ್ರಶೇಖರ್ ಮತ್ತು ಮರು ಬೆರಳಚ್ಚು ಮಾಡಿ ಕರಡು ತಿದ್ದುವಿಕೆಯಲ್ಲಿ ಶ್ರಮಿಸಿದ ಶ್ರೀ ಸ. ಹರೀಶ್ ಅವರಿಗೆ ಹಾಗೂ ಪುಸ್ತಕವನ್ನು ಅಂದಗೊಳಿಸಿ, ಮುದ್ರಿಸಿಕೊಟ್ಟ ಸುಹಾಸ್ ಗ್ರಾಫಿಕ್ಸ್‌ನ ಸಿಬ್ಬಂದಿಗಳಿಗೆ ನೆನಕೆಗಳು ಸಲ್ಲುತ್ತವೆ.

**ಶ್ರೀಕೃಷ್ಣಾರ್ಪಣಮಸ್ತು.**

**ಡಾ. ಸಿ.ಎಸ್. ಸುನಂದನ,** ಪಿಹೆಚ್.ಡಿ
ಹೈದರಾಬಾದ್ ಕೇಂದ್ರಿಯ ವಿಶ್ವವಿದ್ಯಾಲಯದ
ನಿವೃತ್ತ ಪ್ರಾಧ್ಯಾಪಕರು

**ಸಿ.ಎಸ್. ಸುರಂಜನ,** ಐ.ಎ.ಎಸ್.
ಕರ್ನಾಟಕ ಸರ್ಕಾರದ ನಿವೃತ್ತ ಅಪರ
ಮುಖ್ಯ ಕಾರ್ಯದರ್ಶಿ

**ಸೂಚನೆ :**

ಈ ಗ್ರಂಥದಲ್ಲಿ ಪದ್ಯಸಾಲುಗಳ ಕೊನೆಯಲ್ಲಿ ಕೊಟ್ಟಿರುವ ಇಂಗ್ಲೀಷ್ ಸಂಖ್ಯೆ ಮೂಲಗ್ರಂಥದ ಶ್ಲೋಕ ಸಂಖ್ಯೆಯನ್ನು ಸೂಚಿಸುತ್ತದೆ. ಆದಷ್ಟು ಮಟ್ಟಿಗೆ ಮೂಲದ ಭಾವಕ್ಕೆ ಕುಂದುಂಟಾಗದಿರಲೆಂದು ಮೂಲದ ಶಬ್ದಗಳನ್ನೆ ಉಳಿಸಿಕೊಂಡಿದೆ. ಉದಾಹರಣೆಗೆ ಆತ್ಮ ಶಬ್ದಕ್ಕೆ ತಾನು, ಜೀವಾತ್ಮ, ಪರಮಾತ್ಮ, ಬುದ್ಧಿ, ಇಂದ್ರಿಯಗಳು ಎಂಬ ಹೆಚ್ಚು ಅರ್ಥಗಳು ಇವೆ. ಈ ಶಬ್ದವನ್ನು ಆದಷ್ಟು ಕಡೆ ಇದ್ದ ಹಾಗೆಯೇ ಹೊಂದಿಸಿಕೊಂಡಿದೆ. ಇದನ್ನು ಪ್ರಸಂಗಕ್ಕೆ ತಕ್ಕಂತೆ ಅರ್ಥ ಮಾಡಿಕೊಳ್ಳಬೇಕು. ಇದಕ್ಕಾಗಿಯೇ ಶಬ್ದಾರ್ಥವನ್ನು ಸೂಕ್ತ ಸ್ಥಳದಲ್ಲಿ ಕೊಟ್ಟಿದೆ.

– ಗ್ರಂಥಕರ್ತ

# ಮೊದಲ ಮಾತು

ಲೋಕದಲ್ಲಿ ಭಾರತ ದೇಶವು ಆಧ್ಯಾತ್ಮಿಕ ವಿದ್ಯೆಗೆ ತವರ್ಮನೆ. ಆರ್ಷೇಯ ಋಷಿಗಳು ಪರಮಾತ್ಮ ಸಾಕ್ಷಾತ್ಕಾರ ಪಥದಲ್ಲಿ ತಾವು ಕಂಡುಂಡ ಸತ್ಯವಿಚಾರಗಳನ್ನು ಮಾನವರ ಉದ್ಧಾರಕ್ಕೋಸ್ಕರವೂ, ಜಗತ್ತಿನ ಕಲ್ಯಾಣಕ್ಕೋಸ್ಕರವೂ ಉಪದೇಶ ಮಾಡಿದ್ದಾರೆ. ಈ ಉಪದೇಶಗಳು ಧರ್ಮಗ್ರಂಥಗಳಲ್ಲಿಯೂ ಶಾಸ್ತ್ರಗ್ರಂಥಗಳಲ್ಲಿಯೂ ಅಡಗಿವೆ. ಮೂಲಗ್ರಂಥಗಳು ಸಂಸ್ಕೃತದಲ್ಲಿವೆ. ಇವುಗಳಲ್ಲಿರುವ ಮಾತುಗಳು ಸಾಮಾನ್ಯವಾಗಿ ಶ್ಲೋಕ ಸೂತ್ರ ರೂಪದಲ್ಲಿವೆ. ಇವುಗಳ ವಿವರಣೆಯು ವಿದ್ವಾಂಸರುಗಳಿಂದ ಟೀಕಾ ತಾತ್ಪರ್ಯ ವ್ಯಾಖ್ಯಾನಗಳಿಂದ ಕೊಡಲ್ಪಟ್ಟಿದೆ. ಅವುಗಳನ್ನು ಅರ್ಥ ಮಾಡಿಕೊಂಡು ಅರಗಿಸಿಕೊಳ್ಳಲು ವಿಶೇಷ ಪಾಂಡಿತ್ಯವಿರಬೇಕಲ್ಲದೆ ಮೂಲದ ಪರಿಚಯವೂ ಸಾಕಷ್ಟಿರಬೇಕಾಗುತ್ತದೆ.

ಇಂದಿನ ಭಾರತದ ಪರಿಸ್ಥಿತಿಯಲ್ಲಿ ಸಂಸ್ಕೃತವು ವ್ಯವಹಾರಿಕ ಭಾಷೆಯಾಗಿಲ್ಲ. ಅದು ಗ್ರಾಂಥಿಕ ಭಾಷೆಯಾಗಿದ್ದು, ಕೆಲವು ಮಂದಿ ಸಂಸ್ಕೃತ ಭಾಷಾ ವಿದ್ವಾಂಸರ ಸ್ವತ್ತಾಗಿದೆ. ಭಾರತದ ಹಲವಾರು ವ್ಯಾವಹಾರಿಕ ಭಾಷೆಗಳ ನಡುವೆ ಸಂಸ್ಕೃತ ಗ್ರಂಥಗಳನ್ನು ಅಭ್ಯಸಿಸುವವರು ತೀರಾ ಕಡಿಮೆಯೆಂದೇ ಹೇಳಬಹುದು. ದೇಶೀಯ ಭಾಷಾ ಜನರ ಪ್ರಯೋಜನಕ್ಕಾಗಿ ಸಂಸ್ಕೃತ ಗ್ರಂಥಗಳ ಅನುವಾದಗಳೂ, ಟೀಕಾ ತಾತ್ಪರ್ಯ ವ್ಯಾಖ್ಯಾನಗಳೂ ದೇಶಭಾಷೆಗಳಲ್ಲಿ ಅವತರಿಸಿದುವು. ಆದರೂ ಮೂಲಗ್ರಂಥವನ್ನು ಅರ್ಥವತ್ತಾಗಿ ಅಭ್ಯಸಿಸಿ ಪಡೆಯುವಷ್ಟು ಮಟ್ಟಿನ ಪ್ರಯೋಜನವು ಇವುಗಳಿಂದುಂಟಾದೀತೆಂದು ಹೇಳಬರುವುದಿಲ್ಲ.

ಧರ್ಮ ವಿಷಯಗಳೂ ಶಾಸ್ತ್ರ ವಿಷಯಗಳೂ ಶ್ಲೋಕ ಸೂತ್ರ ರೂಪದಲ್ಲಿರುವುದರ ಮುಖ್ಯ ಉದ್ದೇಶ, ವಿಷಯವು ಸುಲಭವಾಗಿ ಕಂಠಸ್ಥವಾಗಲೆಂಬುದೇ ಆಗಿದೆ. ಕಂಠಸ್ಥವಾಗುವುದರಿಂದ ಮತ್ತೆ ಮತ್ತೆ ಪಠಿಸಿಕೊಳ್ಳಲೂ, ಪಠಿಸಿದ್ದನ್ನು ಮನನ ಮಾಡಲೂ, ಮನನ ಮಾಡಿದುದನ್ನು ಕುರಿತು ವಿಚಾರ ಮಾಡಲೂ, ವಿಚಾರ ಮಾಡಿದುದರಲ್ಲಿನ ಸತ್ಯಾಂಶವನ್ನು ವಿವೇಕ ದೃಷ್ಟಿಯಿಂದ ಅರಿತುಕೊಳ್ಳಲೂ ಬರುತ್ತದೆ. ಇದರಿಂದ ಜ್ಞಾನ ಸಾಧನವಾಗುವುದಲ್ಲದೆ ಧ್ಯಾನ ತಪಸ್ಸುಗಳೂ ಸಾಧಿತವಾಗುತ್ತವೆ. ಐಹಿಕಾಮುಷ್ಮಿಕಫಲಗಳೂ ಸಿದ್ಧಿಸುವುವೆಂದು ಬೇರೆ ಹೇಳಬೇಕಾಗಿಯೇ ಇಲ್ಲ. ರಾಮಚಾರಿತ್ರ ಪಠನಾಭ್ಯಾಸಯೋಗದಿಂದ ಕುಶಲವರಿಗುಂಟಾದ ಫಲದಂತೆ ಫಲವುಂಟಾಗುವುದು.

ಸಂಸ್ಕೃತವನ್ನು ಚೆನ್ನಾಗಿ ಬಲ್ಲವರು ಮೂಲಪಾಠವನ್ನು ಕಂಠಸ್ಥವಾಗಿಸಿ ಕೊಳ್ಳಬಹುದು, ಚೆನ್ನಾಗಿ ತಿಳಿಯದವರು ಕಂಠಸ್ಥವಾಗಿಸಿಕೊಳ್ಳುವುದು ಕಷ್ಟವಾಗುವುದಿಲ್ಲವೆ? ಒಂದು ವೇಳೆ ಕಂಠಸ್ಥವಾಗಿಸಿಕೊಂಡರೂ ಅರ್ಥ ಸ್ಫುರಿಸೀತೆ? ಹಾಗಾದರೆ ಹೆಚ್ಚು ಮಂದಿ ಹಾಗೆ ಮಾಡಲು ಸಾಧ್ಯವೆ? ಮನಸ್ಸಿಟ್ಟು ಶ್ರದ್ಧಾಬುದ್ಧಿಗಳಿಂದ ಮಾಡಿದ ಕೆಲಸವಾವುದಾದರೂ ಸಾಧ್ಯವಾಗುತ್ತದೆ. ಸಂಸ್ಕೃತ ಬಲ್ಲವರಲ್ಲಿ ಅನೇಕರು ನಾಮಮಾತ್ರವಾಗಿ ಗ್ರಂಥಾಭ್ಯಾಸ ಮಾಡಿರುವವರೂ ಇಲ್ಲದೆ ಇಲ್ಲ, ಬಾರದವರಲ್ಲಿಯೂ ಕೆಲವು ಮಂದಿ ಮೂಲಪಾಠವನ್ನು ಅರ್ಥವತ್ತಾಗಿ ಅಭ್ಯಾಸ ಮಾಡಿ ಮನನ ಮಾಡಿರುವವರೂ ಇಲ್ಲದೆ ಇಲ್ಲ. ಆದರೆ ಬಹುಪಾಲು ಜನರಿಗೆ ಈ ರೀತಿಯ ಸೌಲಭ್ಯವಿರುವುದಿಲ್ಲ. ಅವರವರಿಗೆ ಅವರವರ ಭಾಷೆಯಲ್ಲಿಯೇ ವಿಷಯವನ್ನರಿಯುವ ಅನುಕೂಲವಿರಬೇಕಾದುದು ಅಗತ್ಯ.

ಆಧ್ಯಾತ್ಮಿಕ ವಿವೇಕದಿಂದಲೇ ಅತ್ಮೋನ್ನತಿ ಸಾಧ್ಯವಾಗುತ್ತದೆ. ಆಧ್ಯಾತ್ಮಿಕ ಗ್ರಂಥದ ಮೂಲಪಾಠವನ್ನು ಆದಷ್ಟು ಸರಳವಾಗಿ ದೇಶಭಾಷಾ ಜನತೆಯು ಅಭ್ಯಸಿಸಲು ಅನುಕೂಲವಾಗುವಂತೆ ಅವರ ನುಡಿಯಲ್ಲಿಯೇ ಬರೆಯಬೇಕಾದುದು ವಿದ್ವಾಂಸರು ಮಾಡಬೇಕಾದ ಮುಖ್ಯ ಸೇವಾಕಾರ್ಯ.

ಇದು ಅನೇಕ ವಿಧದಲ್ಲಿ ಈಗಾಗಲೇ ನಡೆಯುತ್ತಿದೆ. ಈ ರೀತಿ ಮಾಡುವಾಗ ಮೂರು ಮುಖ್ಯ ವಿಷಯಗಳನ್ನು ಗಮನದಲ್ಲಿ ಇಡಬೇಕಾಗುವುದು:–

೧. ಕಂಠಸ್ಥವಾಗಲು ಅನುಕೂಲವಾದ ಒಂದೇ ಪದ್ಯ ರೀತಿಯ ಬಳಕೆ;

೨. ಸಾಧ್ಯವಿದ್ದ ಮಟ್ಟಿಗೂ ಮೂಲಕ್ಕೆ ಅನುಸಾರವಾಗಿರುವಿಕೆ;

೩. ಸರಳತೆ.

ಭಗವದ್ಗೀತೆಯು ಜಗತ್ತಿನಲ್ಲೇ ಅತ್ಯಂತ ಚಿಕ್ಕದಾದ ಆಧ್ಯಾತ್ಮಿಕ ಗ್ರಂಥವೂ ಹಿಂದೂ ಧರ್ಮಗ್ರಂಥವೂ ಆಗಿದೆ. ಇದು ಲೌಕಿಕ ಗ್ರಂಥವೂ ಹೌದು. ನಿರಾಸಕ್ತಿ, ಬುದ್ಧಿ, ಕರ್ಮ, ಜ್ಞಾನ, ಸದಸದ್ವಿವೇಕ, ರಾಜವಿದ್ಯೆ, ಭಕ್ತಿ, ಯೋಗ, ವೈರಾಗ್ಯಗಳನ್ನು ಬೋಧಿಸುತ್ತದೆ. ಅಲ್ಲದೆ ಲೌಕಿಕರಿಗೂ ಇವುಗಳ ಯುಕ್ತ ರೀತಿಯ ಆಚರಣೆಯನ್ನು ನಿರ್ದೇಶಿಸುತ್ತದೆ. ಈ ಭಗವದ್ಗೀತೆಯು ಜಗತ್ತಿನ ಅನೇಕ ಭಾಷೆಗಳಲ್ಲಿ ಭಾಷಾಂತರಗೊಂಡಿರುವುದಲ್ಲದೆ ಭಾರತದ ಪ್ರಾದೇಶಿಕ ಭಾಷೆಗಳೆಲ್ಲದರಲ್ಲಿಯೂ ಸಮೃದ್ಧಿಯಾಗಿ ಭಾಷಾಂತರಗೊಂಡಿದೆ. ಇದರ ಮೇಲಿನ ಟೀಕಾತಾತ್ಪರ್ಯ ವ್ಯಾಖ್ಯಾನಗಳೂ ಬೇಕಾದಷ್ಟು ಇವೆ. ಆದರೇನು? ಭಾರತದ ಜನಸಂಖ್ಯೆಯ ಶತಾಂಶದಲ್ಲಿ ಎಷ್ಟು ಜನಕ್ಕೆ ಗೀತೆಯ ಸ್ವಾರಸ್ಯದ ನಿಜವಾದ ಅರಿವು ಉಂಟಾಗಿದೆ? ಅತ್ಯಲ್ಪಕ್ಕೆಂದೇ ಹೇಳಬೇಕು. ಇದೊಂದು ಕೊರತೆಯಲ್ಲವೆ? ನಾಡುನುಡಿಗಳ ಉದ್ಧಾರದ ಜೊತೆಯಲ್ಲಿ ಬಹುಪಾಲು ಜನತೆಯ ಆತ್ಮೋದ್ಧಾರವೂ ಆಗಬೇಡವೆ? ದೇಶದ ಪ್ರತಿಯೊಬ್ಬರೂ ಅವರವರ ಭಾಷೆಯಲ್ಲಿ ಇದನ್ನು ಕಂಠಸ್ಥವಾಗಿಸಿಕೊಂಡರೆ ಅದರಿಂದ ಮೇಲೆ ಹೇಳಿದ ಫಲವನ್ನು ಪಡೆಯಲಾಗುವುದಿಲ್ಲವೆ?

ಆಧ್ಯಾತ್ಮಿಕ ದೃಷ್ಟಿ, ಧಾರ್ಮಿಕ ಭಾವನೆ, ಲೌಕಿಕ ಸದ್ವ್ಯವಹಾರ ಇವು ಮೂರೂ ಸಾರ್ವತ್ರಿಕವಾಗಿ ವ್ಯಕ್ತಿಯಲ್ಲಿ ಮುಪ್ಪುರಿಗೊಂಡು ಸಾಮರಸ್ಯ ಪಡೆದಾಗಲೇ ವ್ಯಕ್ತಿಯ ಉದ್ಧಾರ, ಕುಟುಂಬ ಸಂಸ್ಕರಣ, ಸಮಾಜದ ಕಲ್ಯಾಣ, ರಾಷ್ಟ್ರದ ಉನ್ನತಿಗಳು ಸಿದ್ಧಿಸುತ್ತವೆಯೆಂಬುದರಲ್ಲಿ ಸಂದೇಹವೇ ಇರಲಾರದು.

ಕನ್ನಡ ನಾಡಿನ ಜನತೆಯ ಸೇವೆಗಾಗಿ ಇಂಥ ವಿನಮ್ರ ಪ್ರಯತ್ನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಭಗವದ್ಗೀತೆಯ ಪದ್ಯಾನುವಾದವು ಕನ್ನಡದಲ್ಲಿ ಈಗಾಗಲೇ ಕೆಲವಾರು ಇವೆ. ೧) ಕನ್ನಡ ಭಾರತದಲ್ಲಿರುವ ಗೀತಾರ್ಥಪ್ರಕಾಶಿಕೆ. ೨) ನಾಗರಸ ವಿರಚಿತ ಕರ್ಣಾಟಕ ಭಗವದ್ಗೀತೆ. ಇವೆರಡೂ ಭಾಮಿನಿ ಷಟ್ಪದಿಯಲ್ಲಿವೆ. ಇವು ಪೂರ್ವ ಕವಿ ವಿರಚಿತವಾದುವು. ಅಲ್ಲದೇ ಈಚಿನ ಕೆಲವು ಕರ್ತೃಗಳಿಂದ ಷಟ್ಪದಿ,ಸಾಂಗತ್ಯ, ಲಾವಣಿ ಮತ್ತು ಹೊಸಗನ್ನಡದ ವಿವಿಧ ಛಂದೋಪದ್ಯಗಳಿಂದಲೂ ಭಗವದ್ಗೀತೆಯು ಅನುವಾದಗೊಂಡಿದೆ. ಭಗವದ್ಗೀತಾಧ್ರುವ ಜಲಸರಸ್ಸಾರಾಮೃತವನ್ನು ಯಾರು ಬೇಕಾದರೂ ತಮತಮಗೆ ಶಕ್ಯವೂ ಯೋಗ್ಯವೂ ಎನಿಸಿದ ಕುಂಭಗಳಿಂದ ತುಂಬಿಕೊಂಡು ಬೇಕಾದವರಿಗೆ ಪಾನ ಮಾಡಿಸಬಹುದು. ಕೆಲವರು ರತ್ನಮಯ ಸ್ವರ್ಣಕುಂಭಗಳಿಂದಲೂ, ಇನ್ನು ಕೆಲವರು ರಜತಕುಂಭಗಳಿಂದಲೂ ಮತ್ತೆ ಕೆಲವರು ಇತರ ಪಾತ್ರ ವಿಶೇಷಗಳಿಂದಲೂ ತುಂಬಿಕೊಳ್ಳಬಹುದು. ಒಟ್ಟಿನಲ್ಲಿ ಉದ್ದೇಶ ಒಂದೇ ಆಗಿರುತ್ತದೆ. ಪ್ರಸ್ತುತ ಪ್ರಯತ್ನದಲ್ಲಿ ಮಾತ್ರ ಮೃಣ್ಮಯ ಕುಂಭದಿಂದಲೇ

ತುಂಬಲಾಗಿದೆ. ಅಂದರೆ ಸಾಧ್ಯವಿದ್ದ ಮಟ್ಟಿಗೂ ಸಾಮಾನ್ಯ ಜನತೆಗೆ ಸುಗಮವೂ, ಸುಲಭವೂ ಆದ ಪದ್ಯರೀತಿಯ ಬಳಕೆಯಿಂದ ಅನುವಾದವನ್ನು ಕೈಗೊಳ್ಳಲಾಗಿದೆ.

ಅಂತೆಯೇ ಭೋಗಷಟ್ಪದಿಯನ್ನು ಸ್ವಲ್ಪ ಮಾರ್ಪಡಿಸಿ ನಾಲ್ಕು ಸಾಲಾಗಿ ಪ್ರತಿ ಸಾಲಿಗೂ ಪ್ರಾಸವಿಟ್ಟು ಯೋಗಷಟ್ಪದಿಯನ್ನಾಗಿ ಮಾಡಿ ಈ ಅನುವಾದವನ್ನು ರಚಿಸಲಾಗಿದೆ. ಪದ್ಯವು ಕಂಠಸ್ಥವಾಗಲು ಪ್ರಾಸದಿಂದ ಅನುಕೂಲವಾಗುವುದು. ಈ ಷಟ್ಪದಿಯನ್ನು ಬಳಸಿಕೊಳ್ಳಲು ಹಿಂದಿನ ಕಾಲದಲ್ಲಿ ಮನೆಯ ಹೆಣ್ಣು ಮಕ್ಕಳು ಹೇಳಿಕೊಳ್ಳುತ್ತಿದ್ದು ಕೆಲವೆಡೆ ಇಂದೂ ಹೇಳಿಕೊಳ್ಳುತ್ತಿರಬಹುದಾದ ಸುಧಾಮಚರಿತ್ರೆ ಹಾಡಿನಿಂದ ಸ್ಫೂರ್ತಿ ದೊರೆಯಿತು. ನಾಡಿನ ಪ್ರತಿ ಹೆಣ್ಣೂ ಗೀತಾಭ್ಯಾಸ ಮಾಡಿದರೆ ನಾಡಿಗೆ ನಾಡೇ ಉನ್ನತಿ ಹೊಂದುವುದರಲ್ಲಿ ಸಂದೇಹವಿರಲಾರದು. ಭಾಮಿನೀ ಷಟ್ಪದಿಯು ಕಂಠಸ್ಥವಾಗಿಸಿಕೊಳ್ಳಲು ದೊಡ್ಡದಾಗುವುದು. ಭೋಗ ಅಥವ ಯೋಗ ಷಟ್ಪದಿಯು ಈ ಕೊರತೆಯನ್ನು ನಿವಾರಿಸುವುದೆಂದು ಭಾವಿಸಲಾಗಿದೆ.

ಪರಮಾತ್ಮ ಪ್ರೀತ್ಯರ್ಥವಾಗಿ ಪರಮಾತ್ಮ ಪ್ರೇರಣೆಯಿಂದಲೇ ಕೈಗೊಂಡಿರುವ ಈ ಪ್ರಯತ್ನದಿಂದ ನಾಡಿನ ಹೆಣ್ಣು ಗಂಡು ಜನತೆಗೆ ಕಿಂಚಿತ್ತಾದರೂ ಪ್ರಯೋಜನವಾಗುವುದೆಂದು ಆಶಿಸಲಾಗಿದೆ. ಹಾಗಾದರೆ ಲೇಖಕನ ಶ್ರಮ ಸಾರ್ಥಕ.

ಶಕವರ್ಷ ೧೮೮೭ ಮಾರ್ಗಶೀರ್ಷ ಶುದ್ಧ
ಏಕಾದಶೀ ಮಂಗಳವಾರ
'ಶ್ರೀ ಗೀತಾಜಯಂತಿ'
ತಾರೀಖು ೧೫-೧೨-೬೪

**ಅಮೃತ ಚನ್ನಶಾಮ**
ತುಮಕೂರು

ಓಂ

# ಶ್ರೀ ಪರಮಾತ್ಮನೇ ನಮಃ

ನಮಿಸಿ ನಾರಾಯಣನ ಮತ್ತೆ । ನರನನಾ ನರೋತ್ತಮನ
ವಿಮಲದೇವಿ ಸರಸ್ವತಿಯ ವ್ಯಾಸಕವಿಯನು ।
ಸುಮನಶುದ್ಧ ಬುದ್ಧಿಯಿಂದ । ಭಕ್ತಿಭಾವದಿಂದ ಮುದದೆ
ಸಮವುರಹಿತ ಜಯವ ಬಳಿಕ ಪೇಳಿ ಕೇಳ್ವುದು ॥

ಎಲ್ಲಿ ಯೋಗೀಶ ಕೃಷ್ಣ । ಎಲ್ಲಿ ಧನುರ್ಧರನು ಪಾರ್ಥ
ಎಲ್ಲಿ ಇಬ್ಬರೆಡೆಯಬಿಡದೆ ನೆಲಸಿ ಇರುವರು ।
ಅಲ್ಲಿ ಶ್ರೀಯು ವಿಜಯಭೂತಿ । ಪರಮ ಐಸಿರಿಗಳು ತಾವು
ಎಲ್ಲವಚಲವಿರ್ಪುವೆನ್ನ ನೀತಿಮತಿಯೊಳು ॥

# ಅನುಕ್ರಮಣಿಕೆ


| ಅಧ್ಯಾಯ | ವಿಷಯ | ಪುಟ |
|---|---|---|
| ಭಗವದ್ಗೀತಾ ಮಹತ್ವ | ಭಗವದ್ಗೀತಾ ಮಹತ್ವ | V |
| ಪೀಠಿಕೆ | ಪೀಠಿಕೆ | XV |
| ಒಂದು | ಅರ್ಜುನ ವಿಷಾದ ಯೋಗ | 1 |
| ಎರಡು | ಸಾಂಖ್ಯ ಯೋಗ | 7 |
| ಮೂರು | ಕರ್ಮ ಯೋಗ | 17 |
| ನಾಲ್ಕು | ಜ್ಞಾನ ಕರ್ಮ ಸಂನ್ಯಾಸ ಯೋಗ | 23 |
| ಐದು | ಕರ್ಮ ಸಂನ್ಯಾಸ ಯೋಗ | 29 |
| ಆರು | ಆತ್ಮ ಸಂಯಮ ಯೋಗ | 34 |
| ಏಳು | ಜ್ಞಾನವಿಜ್ಞಾನ ಯೋಗ | 42 |
| ಎಂಟು | ಅಕ್ಷರ ಬ್ರಹ್ಮ ಯೋಗ | 47 |
| ಒಂಭತ್ತು | ರಾಜವಿದ್ಯಾ ರಾಜಗುಹ್ಯ ಯೋಗ | 52 |
| ಹತ್ತು | ವಿಭೂತಿ ಯೋಗ | 58 |
| ಹನ್ನೊಂದು | ವಿಶ್ವರೂಪದರ್ಶನ ಯೋಗ | 65 |
| ಹನ್ನೆರಡು | ಭಕ್ತಿಯೋಗ | 74 |
| ಹದಿಮೂರು | ಕ್ಷೇತ್ರ ಕ್ಷೇತ್ರಜ್ಞ ವಿಭಾಗ ಯೋಗ | 78 |
| ಹದಿನಾಲ್ಕು | ಗುಣತ್ರಯ ವಿಭಾಗ ಯೋಗ | 84 |
| ಹದಿನೈದು | ಪುರುಷೋತ್ತಮ ಯೋಗ | 89 |
| ಹದಿನಾರು | ದೈವಾಸುರ ಸಂಪದ್ಯೋಗ | 93 |
| ಹದಿನೇಳು | ಶ್ರದ್ಧಾತ್ರಯ ವಿಭಾಗ ಯೋಗ | 97 |
| ಹದಿನೆಂಟು | ಮೋಕ್ಷ ಸಂನ್ಯಾಸ ಯೋಗ | 102 |

# ಪೀಠಿಕೆ

ಈಶಪುತ್ರನನ್ನು ನಮಿಸಿ । ಶಾರದೇಯ ಮನದಿ ಸ್ಮರಿಸಿ
ನಾಶರಹಿತನಾದ ಅಜನ ಬಿಡದೆ ವಂದಿಸಿ ।
ಈಶ ಸೃಷ್ಟಿಯಲ್ಲಿ ಸ್ವಲ್ಪ । ನಾಗಿ ಜ್ಞಾನದಿಚ್ಛೆಯಿಂದ
ಆಶೆರಹಿತ ಜ್ಞಾನಿಗುರುವ ಸದಾ ಭಜಿಸುತ ॥ ॥ ೧ ॥

ಸ್ವಾಮಿ ಕೃಷ್ಣಚಂದ್ರಮೂರ್ತಿ । ಪಾರ್ಥಗೊರೆದ ತತ್ವಸಾರ
ಪ್ರೇಮದಿಂದ ಬರೆವೆ ಶ್ರೀ ಕೃಷ್ಣಗೀತವ ।
ನೇಮದಿಂದ ಈ ಗೀತ । ಪೇಳಿದರಿಗೆ ಕೇಳಿದರಿಗೆ
ಶ್ರೀಮಹಾಸಿದ್ಧಿಯಹುದು ಸಿರಿಯು ಬರುವುದು ॥ ॥ ೨ ॥

ಕವಿಯ ಕೀರ್ತಿಬಯಕೆಯಿಲ್ಲ । ಕವಿಯ ಗಣಕೆ ಕೊರತೆಯಿಲ್ಲ
ಕವೀಂದ್ರ ವ್ಯಾಸವಾಲ್ಮೀಕಿಗೆದುರು ಇರುವರೆ ।
ಕವಿವರೇಣ್ಯರೆನಿಬರುಂಟು । ದೇವದೇಶಭಾಷೆಯಲ್ಲಿ
ಅವರಿಗೆಲ್ಲ ವಿನಯದಿಂದ ತಲೆಯ ಬಾಗಿಪೆ ॥ ॥ ೩ ॥

ಅಂತರಾತ್ಮ ಪ್ರೇರಿಸಿದನು । ನಾಡಜಾನಪದಕೆ ಬರೆಯೆ
ಎಂತಲೇ ಬರೆವೆನಿದನು ಅವರಿಗಾಗಿಯೆ ।
ಇಂತು ಇದನು ಹಾಡಿ ಪೇಳೆ । ಮನೆಯ ಪೆಣ್ಣು ಜನಕೆ ಒಪ್ಪು
ಎಂತಲೇ ಬರೆವೆನಿದನು ಪೆಣ್ಣಿಗಾಗಿಯು ॥ ॥ ೪ ॥

ನೀರಕ್ಷೀರ ನ್ಯಾಯದಂತೆ । ಎಲ್ಲ ಓದುವವರು ಇದರ
ಸಾರವನ್ನೆ ಕೊಂಡು ಬಾಳಬೆಳಕುಗೆಯ್ವುದು ।
ನೀರಕೊಂಡು ಕೋರೆ ಗೈವ । ಜನಕೆ ಮರುಗದನ್ಯವಿಲ್ಲ
ಸರ್ವರಕ್ಷ ಸಕಲರನ್ನು ಪಾರುಗೈಯಲಿ ॥ ॥ ೫ ॥
ಕರ್ತೃಭಾವವಿದರೊಳಿಲ್ಲ । ಇದಕೆ ಕರ್ತೃವಿಲ್ಲದಿಲ್ಲ
ಕರ್ತೃವಮೃತನವನ ಸೇವಿ ಚನ್ನಶಾಮನು ।
ಮರ್ತ್ಯರಲ್ಲಿ ಒಬ್ಬನೆನಿಸಿ । ಅಮೃತಪುರಿಯನೆನಿಪನಹಂ
ಕರ್ತೃಭಾವವಿಲ್ಲದಮೃತಚನ್ನಶಾಮನು ॥ ॥ ೬ ॥

ಎಲ್ಲ ಉಪನಿಷತ್ತ ಕೂಡಿ । ಹಸನನಾದ ಹಸುವ ಮಾಡಿ
ಫುಲ್ಲನಯನ ಗೊಲ್ಲಕೃಷ್ಣ ಹಾಲಕರೆಯಲು।
ಅಲ್ಲಿ ಪಾರ್ಥ ಕರುವೆ ಆಗಿ । ಸೊದೆಯ ಪಾಲ ಪೀರಲಾಗ
ಸಲ್ಲಲಿತದ ಗೀತೆಯಮೃತ ಧರೆಯೊಳುದಿಸಿತು ॥ ॥ ೭ ॥

ಒಂದೆ ಶಾಸ್ತ್ರವದುವೆ ಗೀತ । ವೊಬ್ಬದೇವನವನೆ ಯೋಗಿ
ಯಿಂದು ದೇವಕೀಯ ಪ್ರೀಯತನಯ ಕೃಷ್ಣನು ।
ಒಂದೆ ಮಂತ್ರವಾವುದೆಂದ । ರವನ ನಾಮಧ್ಯಾನಪಠನ
ವೊಂದೆ ಕರ್ಮವದುವೆ ದೇವನವನ ಸೇವೆಯು ॥ ॥ ೮ ॥

ಗೀತೆಯಾ ಸುಗೀತವದುವು । ಕರ್ತವ್ಯವಾಗಿ ಇಹುದು
ಗೀತೆಗಿಂತಲೇನು ಅನ್ಯಶಾಸ್ತ್ರ ವಿಸ್ತರ ।
ಖ್ಯಾತಿ ಪಡೆದ ಗೀತೆಯಿದುವು । ಸ್ವಯಂ ಪದ್ಮನಾಭನದುವೆ
ಪೂತ[1]ವದನಪದ್ಮ[2]ದಿಂದಲೇ ವಿನಿಃಸೃತ[3] ॥ ॥ ೯ ॥

ಗೀತೆಯಿದುವು ಭಾರತದಾ । ಅಮೃತಸರ್ವವಾಗಿ ಇಹುದು
ಗೀತೆ ವಿಷ್ಣುವಕ್ತ್ರ[4]ದಿಂದಲೇ ವಿನಿಃಸೃತ ।
ಗೀತೆಗಂಗೆಯುದಕವನ್ನು । ಕುಡಿದ ಮೇಲೆ ಇನ್ನು ತಾನು
ಭೀತಿಪಡಿಪ ಪುನರ್ಜನ್ಮವಿರುವುದಿಲ್ಲವು ॥ ॥ ೧೦ ॥

ಭವದೆ ಮೂಕನನ್ನು ವಾ । ಚಾಲ[5]ನಾಗಿ ಮಾಳ್ಪುದದುವು
ಜವದೆ ಪಂಗು[6] ಗಿರಿಯ ಲಂಘಿಪಂತೆ ಮಾಳ್ಪುದು ।
ಭುವನದಲ್ಲಿ ಯಾರ ಕೃಪೆಯು । ಅವನ ನಾನು ಬಿಡದೆ ವಂದಿ
ಸುವೆನು ಪರಮ ಆನಂದಮಾಧವನನು ॥ ॥ ೧೧ ॥

**ಓಂ ತತ್ ಸತ್**

1. ಪೂತ = ಪುಣ್ಯಕರವಾದ, ಪವಿತ್ರವಾದ
2. ವದನಪದ್ಮ = ಬಾಯ್ದಾವರೆ
3. ವಿನಿಃಸೃತ = ಹೊರ ಬಂದುದು
4. ವಕ್ತ್ರ = ಮುಖ
5. ವಾಚಾಲ = ಮಾತುಗಾರ
6. ಪಂಗು = ಕುಂಚ

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಒಂದು

# ಅರ್ಜುನ ವಿಷಾದ ಯೋಗ

ಧರ್ಮಕ್ಷೇತ್ರ ಕುರುಕ್ಷೇತ್ರ । ದೊಳಗೆ ಯುದ್ಧದಿಚ್ಛೆಯಿಂದ
ಕರ್ಮಪ್ರಾಪ್ತಿಯಿಂದ ನೆರೆದ ನಮ್ಮ ಜನಗಳು ।
ಧರ್ಮರಾಯನಾದಿ ಪಾಂಡು । ಪುತ್ರರವರ ಜನರು ಸಹಿತ
ಕರ್ಮವೇನ ಗೈದರದನು ಪೇಳು ಸಂಜಯ ॥ ॥೧॥ 1

ದೂತ ಸಂಜಯನು ಆಗ । ನುಡಿದನು ಧೃತರಾಷ್ಟ್ರನಿಂಗೆ
ಪೂತ ಆರ್ಯ! ನಿನ್ನ ಮಗನು ಆ ದುರ್ಯೋಧನ ।
ಖ್ಯಾತ ಪಾಂಡುಪುತ್ರ ಸೈನ್ಯ । ನೋಡಿ ದ್ರೋಣರೆಡೆಗೆ ನಡೆದು
ಮಾತನಿಂತು ನುಡಿದ ರಾಯ ವಿನಯದಿಂದಲಿ ॥ ॥೨॥ 2

ಗುರುವೆ ಪಾಂಡುಪುತ್ರರಿವರ । ದೊಡ್ಡ ಸೈನ್ಯವನ್ನು ನೋಡಿ
ಅರಿತದ್ರುಪದಪುತ್ರ ನಿಮ್ಮ ಶಿಷ್ಯ ನಾಯಕ । 3
ನೆರೆದು ಶೂರರಿರುವರಿಲ್ಲಿ । ಭೀಮಪಾರ್ಥಸಮರಸಮರು
ವಿರಾಟ ಯುಯುಧಾನ ಮಹಾರಥಿಯು ದ್ರುಪದನು ॥ ॥೩॥ 4

ವೀರ್ಯವಂತ ಕಾಶಿರಾಜ । ದೃಷ್ಟಕೇತು ಚೇಕಿತಾನ
ನರಶ್ರೇಷ್ಠ ಶೈಬ್ಯ ಕುಂತಿಭೋಜ ಪುರುಜಿತು । 5
ವೀರ್ಯವಂತ ಉತ್ತಮೌಜ । ಯುಧಾಮನ್ಯು ವಿಕ್ರಾಂತ
ವೀರರಥರೆ ಸುಸೌಭದ್ರ ದ್ರೌಪದೇಯರು ॥ ॥೪॥ 6

ದ್ವಿಜೋತ್ತಮರೆ ಚಿತ್ತವಿಡಿರಿ । ನಮ್ಮ ಕಡೆಯ ಗಣ್ಯರನ್ನು
ಅಜೇಯ ಸೈನ್ಯನಾಯಕರ ಪೆಸರ ಪೇಳುವೆ । 7
ದ್ವಿಜಶ್ರೇಷ್ಠ ತಾವು ಮತ್ತೆ । ತಾತ ಭೀಷ್ಮ ಕರ್ಣಕೃಪರು
ನಿಜೈಕಸುತ[7] ವಿಕರ್ಣ ಸೌಮದತ್ತಿಯೆಂಬರು ॥ ॥೫॥ 8

ಅನ್ಯರಾದ ಮತ್ತೆ ಬಹಳ । ಶೂರರೆಲ್ಲ ಎನಗೆ ಆಗಿ
ಮಾನ್ಯಯುದ್ಧದಲ್ಲಿ ಪ್ರಾಣಬಿಡಲು ಸಿದ್ಧರು।
ಅನ್ಯರಾದರಿವರನೇಕ । ಶಸ್ತ್ರಯುಕ್ತರಾಗಿ ಎಲ್ಲ
ಮಾನ್ಯಯುದ್ಧವಿಶಾರದರೆ ಎನಿಸಿ ಇರುವರು ॥ ॥೬॥ 9

ಅಪರ್ಯಾಪ್ತವೆನಿಪುದೆಮ್ಮ । ಭೀಷ್ಮರಕ್ಷೆಯಿರುವ ಬಲವು
ಸಪರ್ಯಾಪ್ತವವರ ಬಲವು ಭೀಮರಕ್ಷಿತ । 10
ಅಪರಿಮಿತದ ವೀರರೆಲ್ಲ । ತಮ್ಮ ಸ್ಥಾನಗಳಲ್ಲಿ ನಿಂತು
ಸುಪರಿರೀತಿ ಎಲ್ಲ ಭೀಷ್ಮರನ್ನೆ ರಕ್ಷಿಸಿ ॥ ॥೭॥ 11

ಗೆಲುವುಗೊಳಿಸಲಾತನನ್ನು । ವೀರವೃದ್ಧಪಿತಾಮಹನು
ಬಲಿದು ಶಂಖವೂದಿ ಸಿಂಹನಾದಗೈದನು । 12
ಬಳಿಕ ಶಂಖ ಭೇರಿ ಪಣವ । ಗೋಮುಖಾನಕಾದಿವಾದ್ಯ
ಮೊಳಗಿ ಶಬ್ದಗೈಯಲದುವೆ ಭಯವು ಎನಿಸಿತು ॥ ॥೮॥ 13

ಆಗ ಶ್ವೇತಹಯವಗೊಂಡ । ಶ್ರೇಷ್ಠರಥವನೇರಿಯಿದ್ದ
ರಾಗರಹಿತ ಸಹಿತ ಕೃಷ್ಣಪಾರ್ಥರಿಬ್ಬರು ।
ಬೇಗ ತಮ್ಮ ದಿವ್ಯವಾದ । ಶಂಖಗಳನು ಪೂರಿಸಿದರು
ಆಗಲದುವೆ ಧ್ವನಿಯು ನಾಲ್ಕುದೆಸೆಯೊಳುದಿಸಿತು ॥ ॥೯॥ 14

ಪಾಂಚಜನ್ಯವನ್ನು ಹೃಷೀ । ಕೇಶ ಬಾಜಿಸಿದನು ತಾನು
ಮಿಂಚದಾದ ದೇವದತ್ತವಾ ಧನಂಜಯ ।
ಪಂಚಪಾಂಡುಶೂರರಲ್ಲಿ । ಭೀಮ–ಕರ್ಮ ವೃಕೋದರನು
ಹಿಂಚದೂದೆ ತನ್ನ ಪೌಂಡ್ರಮಹಾಶಂಖವ ॥ ॥೧೦॥ 15

7. ನಿಜೈಕಸುತ = ನಿಮ್ಮ ಒಬ್ಬನೇ ಮಗ ಅಶ್ವತ್ಥಾಮ

ಕುಂತಿಸುತನು ಯುಧಿಷ್ಠಿರ । ನನಂತವಿಜಯ ಶಂಖವನ್ನು
ಮುಂತೆ ಸಿರಿಸುಘೋಷವನ್ನು ನಕುಲನೂದಿದ ।
ಅಂತೆ ಸುಸಹದೇವನವನು । ಸಿರಿಯ ಸುಮಣಿಪುಷ್ಪಕವನು
ಇಂತು ವೀರರಿವರು ಶಂಖಧ್ವನಿಯ ಗೈದರು ॥ ॥೧೧॥ 16

ಪಿರಿದು ಬಿಲ್ಲ ವೀರನಾದ । ಕಾಶಿರಾಜನವನು ಮತ್ತೆ
ಧುರದೆ ಮಹಾರಥಿಕನೆನಿಸಿದಾ ಶಿಖಂಡಿಯು ।
ಭರದೆ ದೃಷ್ಟದ್ಯುಮ್ನನಾ । ವಿರಾಟ ಶೂರಸಾತ್ಯಕೀಯು
ಇರದೆ ಇವರು ಎಲ್ಲ ಶಂಖಧ್ವನಿಯಗೈದರು ॥ ॥೧೨॥ 17

ದ್ರುಪದ ದ್ರೌಪದೇಯರಾದಿ । ಸರ್ವ ಪೃಥಿವಿಪತಿಗಳಿವರು
ಅಪರಿಮಿತದ ಬಾಹುಬಲದ ಸುಸೌಭದ್ರನು ।
ಅಪರಿಮೇಯ ವೀರರೆಲ್ಲ । ಬೇರೆ ಬೇರೆಯಾಗಿ ತಮ್ಮ
ಉಪರಿಘೋಷವುಳ್ಳ ಶಂಖಧ್ವನಿಯಗೈದರು ॥ ॥೧೩॥ 18

ಆಗಲಾದ ಘೋಷ ಧಾರ್ತ । ರಾಷ್ಟ್ರರೆದೆಗೆ ಶೂಲವೆನಿಸಿ
ಬೇಗ ನಭದೆ ಪೃಥಿವಿಯೊಳುವೆ ಧ್ವನಿಯು ಮೊಳಗಿತು । 19
ಆಗ ಕಪಿಧ್ವಜನು ಸಿದ್ಧ । ಧಾರ್ತರಾಷ್ಟ್ರರನ್ನು ನೋಡಿ
ಬೇಗ ಶಸ್ತ್ರ ಬೀಳೆ ಧನುವ ಕೊಂಡು ಪಾಂಡವ ॥ ॥೧೪॥ 20

ರಾಯ ಕೇಳು ಹೃಷೀಕೇಶ । ನೊಡನೆ ಪಾರ್ಥ ನುಡಿದ ರಥವ
ನೊಯ್ಯುತೆರಡು ಸೇನೆಮಧ್ಯೆ ಸ್ಥಾಪಿಸಚ್ಯುತ । 21
ಆಯವರಿತು ನಾನು ಕಾದ । ಲಾರು ತಕ್ಕರೆಂದು ನೋಡ
ಲೀಯಬೇಕು ಯುದ್ಧಬಯಸಿ ನೆರೆದರಿವರೊಳು ॥ ॥೧೫॥ 22

ದುರುಮತಿ ದುರುಯೋಧನನ । ಸಮರದೊಳಗೆ ಒಳಿತ ಬಯಸಿ
ನೆರೆದು ಇರುವ ಸಮರಪ್ರಿಯರನಿನಿತು ನೋಡುವೆ । 23
ನರಪ ಕೇಳು, ಗುಡಾಕೇಶ । ನೊರೆದ ರೀತಿ ಹೃಷೀಕೇಶ
ನೆರಡು ಸೇನೆಮಧ್ಯೆ ರಥವ ನಿಲ್ಲಿಸುತ್ತಲಿ ॥ ॥೧೬॥ 24

ನೋಡು ಪಾರ್ಥ ಭೀಷ್ಮದ್ರೋಣ । ಪ್ರಮುಖರೊಡನೆ ಮತ್ತೆ ಎಲ್ಲ
ಪೊಡವಿಗೊಡೆಯರೊಡನೆ ನೆರೆದ ಕುರುಗಳಿವರನು ।
ನುಡಿಯೆ ಕೃಷ್ಣನಿಂತು ಮಾತ । ಕೇಳ್ದು ಪಾರ್ಥ ಬಳಿಕ ತಾನು
ಬಿಡದೆ ಪಡೆಯ ವೀರರನ್ನು ನೋಡತೊಡಗಿದ ॥ ॥೧೭॥ 25

ಅಲ್ಲಿ ನೆರೆದ ಪಿತರು ಪಿತಾ । ಮಹರು ಆಚಾರ್ಯರನ್ನು
ಎಲ್ಲ ಭ್ರಾತೃ ಪುತ್ರ ಪೌತ್ರ ಮಿತ್ರ ಮಾತುಲ । 26
ಎಲ್ಲಗೂಡಿ ಶ್ವಶುರ ಸುಹೃತ್ । ಆದಿಗಳನು ಪಡೆಗಳೊಳಗೆ
ಎಲ್ಲರನ್ನು ಬಿಡದೆ ತಾನು ಪಾರ್ಥ ನೋಡಿದ ॥ ॥೧೮॥ 27

ಇಂತು ಬಂಧು ಮಿತ್ರರಾದಿ । ನೆರೆದರೆಲ್ಲರನ್ನು ನೋಡಿ
ಕುಂತಿಸುತನು ಕರುಣೆಯೊಡೆ ವಿಷಾದಗೊಳ್ಳುತ ।
ಅಂತರಂಗದಲ್ಲಿ ದುಃಖ । ಗೊಂಡು ಕೃಷ್ಣನೊಡನೆ ನುಡಿದ
ಕಂತುಪಿತನೆ ಸ್ವಜನಸಮರಪ್ರಿಯರ ನೋಡುತ ॥ ॥೧೯॥ 28

ದೇಹವೆನ್ನ ಕುಗ್ಗುತಿಹುದು । ಒಡನೆ ಮುಖವದೊಣಗುತಿಹುದು
ಈ ಹದನದೆ ನಡುಕ ಪುಳಕವೊದಗುತಿರುವುದು । 29
ಆಹ! ಎನ್ನ ಕೈಯ ಗಾಂ । ಡೀವ ತಾನು ಕಳಚುತಿಹುದು
ಮೋಹಭ್ರಾಂತಿ ಮನದಿ ಮೂಡಿ ನಿಲ್ಲಲಾರೆನು ॥ ॥೨೦॥ 30

ನೋಡುತಿರುವೆ ದುಷ್ಟಲಕ್ಷ । ಣಗಳನಿಲ್ಲಿ ನಾನು ಮತ್ತೆ
ನೋಡೆ ಶ್ರೇಯವಲ್ಲ ಸ್ವಜನಹತ್ಯ ಕೇಶವ । 31
ಬೇಡ ಎನಗೆ ಕೃಷ್ಣ ವಿಜಯ । ರಾಜ್ಯ ಸುಖವು, ಗೋವಿಂದ
ನೋಡೆ ರಾಜ್ಯ ಭೋಗ ಬಾಳಿನೇಂ ಪ್ರಯೋಜನ ॥ ॥೨೧॥ 32

ಯಾರಿಗಾಗಿ ನಾವು ರಾಜ್ಯ । ಭೋಗ ಸುಖವ ಬಯಸುತಿಹೆವೊ
ಈ ರಣದೊಳು ಇಲ್ಲಿಯವರೆ ಕಾಣುತಿರುವರು ।
ಮೀರಿ ಹರಣ ಹಣದ ಮೇಲ । ಣಾಸೆ ತ್ಯಜಿಸಿದವರು ಎಲ್ಲ
ರೀ ರಣದೊಳೆ ತಾವು ಇಲ್ಲಿ ಸಿದ್ಧರಿರುವರು ॥ ॥೨೨॥ 33

ತಾತ ತಂದೆ ಮಕ್ಕಳೆಲ್ಲ । ಗುರುಗಳಾಚಾರ್ಯರೆಲ್ಲ
ಮಾತುಲಾದಿ ಶ್ವಶುರ ಮತ್ತೆ ಪೌತ್ರರೆಲ್ಲರು ।
ನೀತಿವಂತ ಭಾವಮೈದ । ರೆಲ್ಲ ಬಂಧುವರ್ಗದವರು
ರೀತಿಯಿಂದ ಸಮರದಲ್ಲಿ ನೆರೆದು ಇರುವರು ॥ ॥೨೩॥ 34

ಓ ಮಧುಸೂದನನೆ ಇವರ । ನಿನ್ನು ಕೊಲ್ಲಬಯಸೆ ನಾನು
ಆ ಮಹಾ ತ್ರಿಲೋಕದೊಡೆಯತನಕೆಯಾದರು ।
ಈ ಮಹೀಗೆ ಪೇಳ್ವುದೇನು । ಆಸೆಪಡೆನು ಕೊಲ್ಲೆನಿವರ
ಈ ಮಹಾಧುರದೆ ನಾನೆ ಕೊಲೆಯ ಗೊಂಡರು ॥ ॥೨೪॥ 35

ಕೊಲಲು ಧಾರ್ತರಾಷ್ಟ್ರರನ್ನು । ಎಮಗೆ ಅಪ್ಪ ಹರುಷವೇನು
ಕೊಲಲು ಆತತಾಯಿಗಳನು ಪಾಪವಪ್ಪುದು । 36
ಕೊಲಲು ಸಲ್ಲದೆಮಗೆ ಧಾರ್ತ । ರಾಷ್ಟ್ರರನ್ನು ಮಾಧವಾ
ಕೊಲಲು ಸ್ವಜನರಿವರನೆಂತು ಸುಖಿಗಳಪ್ಪೆವು ॥ ॥೨೫॥

ಕುಲದ ನಾಶವೆಂಬ ದೋಷ । ಮಿತ್ರದ್ರೋಹವೆಂಬ ಪಾಪ
ಫಲವ ಲೋಭದಿಂದಲಿವರು ನೋಡರಾದರು । 38
ಕುಲದ ನಾಶದೋಷವಿದನು । ನೆರೆಯೆ ತಿಳಿದು ಬಲ್ಲ ನಾವು
ಕಳೆಯಬಾರದೇಕೆ ಪಾಪವಿವ ಜನಾರ್ದನ ॥ ॥೨೬॥ 39

ಕುಲದ ನಾಶದಿಂದ ನೆಲೆಯ । ಕುಲದ ಧರ್ಮ ಹಾನಿಯಹುದು
ಕುಲದ ಧರ್ಮನಷ್ಟದಿಂದ ಕುಲಕಧರ್ಮವು । 40
ಸಲದ ಧರ್ಮದಿಂದ ಕೃಷ್ಣ । ಕುಲದ ವನಿತೆಯೆಲ್ಲ ಕೆಡುಗು
ಪಲವು ಬೆರೆಕೆ ವರ್ಣವಹುದು ವಾರ್ಷ್ಣೇಯನೆ ॥ ॥೨೭॥ 41

ವರ್ಣಬೆರಕೆಯಿಂದ ಕುಲಕು । ಕುಲದ ಘಾತುಕರಿಗು ಸಹಿತ
ವರ್ಣಿಸಲುವೆ ಆರದಂಥ ನರಕವಪ್ಪುದು ।
ಪೂರ್ಣಲೋಪ ಗೊಂಡ ಪಿಂಡ । ದುದಕಕ್ರಿಯೆಗಳಿಂದಲವರ
ಪೂರ್ಣಪಿತರು ಸಹಿತ ನರಕದೊಳಗೆ ಬೀಳ್ವರು ॥ ॥೨೮॥ 42

ಇಂತು ವರ್ಣಬೆರಕೆಗೈವ । ದೋಷವಿವುಗಳಿಂದಲಿರದೆ
ಎಂತು ಕುಲದ ಘಾತುಕರಿಗೆ ನರಕ ತಪ್ಪದು ।
ಅಂತೆಯವರ ಶಾಶ್ವತಂ । ಗಳಾದ ಜಾತಿಧರ್ಮ ಮತ್ತೆ
ಯಂತೆ ಕುಲದ ಧರ್ಮವೆಲ್ಲ ನಾಶವಪ್ಪುದು ॥ ॥೨೯॥ 43

ಎಲ್ಲೈ ಜನಾರ್ದನನೆ ಇಂತು । ನಷ್ಟವಾದ ಕುಲದ ಧರ್ಮ
ದೆಲ್ಲ ಜನರ ವಾಸ ನರಕದಲ್ಲಿಯಪ್ಪುದು ।
ಅಲ್ಲನಂತ ಕಾಲವವರು । ವಾಸಗೈವರೆಂದು ನಾವು
ಎಲ್ಲ ಕೇಳಿಬಲ್ಲೆವೆನುತ ಪಾರ್ಥ ನುಡಿದನು ॥ ॥೩೦॥ 44

ಅಹೋ! ದುಃಖವಿದುವೆ ನಾವು । ಬುದ್ಧಿವಂತರೆನಿಸಿ ಕೂಡ
ಮಹಾಪಾಪ ಗೈಯಲೀಗ ಸಿದ್ಧರಾದೆವು ।
ಅಹಾ! ರಾಜ್ಯಲೋಭ ಮತ್ತೆ ಸುಖದ ಲೋಭದಿಂದ ಕೂಡಿ
ಸ್ವಹಸ್ತದಿಂ ಸ್ವಜನಹತ್ಯೆಗನುವುಗೊಂಡೆವು ॥ ॥೩೧॥ 45

ಶಸ್ತ್ರರಹಿತ ಪ್ರತೀಕಾರ । ಬುದ್ಧಿ ರಹಿತರಾದ ನಮ್ಮ
ಶಸ್ತ್ರಸಹಿತರಾದ ಇವರು ಧಾರ್ತರಾಷ್ಟ್ರರು ।
ಶಸ್ತ್ರದಿಂದ ಕೊಂದರದುವೆ । ಕ್ಷೇಮಕರವು ಎಮಗೆ ಕೃಷ್ಣ
ಶಸ್ತ್ರ ಹಿಡಿಯದಿಹುದೆ ಎನ್ನ ಮತವು ಎಂದನು ॥ ॥೩೨॥ 46

ಕೇಳಿದಿಂತು ಕೃಷ್ಣಪಾರ್ಥ । ಮಾತ ಸಂಜಯನು ತಾನು
ಪೇಳುತಾ ಧೃತರಾಷ್ಟ್ರನಿಂಗಿಂತು ನುಡಿದನು ।
ಪೇಳುತಿಂತು ರಣದೆ ಪಾರ್ಥ । ಮನದೆ ದುಃಖಗೊಂಡು ರಥದೆ
ಕಳೆದು ಬಿಸುಟು ಧನುವಶರವ ಕುಳಿತುಬಿಟ್ಟನು ॥ ॥೩೩॥ 47

**ಓಂತತುಸತಿದುವೆ ಭಗವದ್ । ಗೀತೆಯಲ್ಲಿ ಒಂದನೆಯದು**
**ಸಾಂತಗೊಂಡ ಅರ್ಜುನವಿಷಾದಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಎರಡು

# ಸಾಂಖ್ಯಯೋಗ

ಕರುಣೆಗೂಡಿ ಕಣ್ಣಪನಿಯ । ತುಂಬಿ ವ್ಯಥೆವಿಷಾದದಿಂದ
ಇರದೆ ಕುಂದಿದರ್ಜುನನಿಗೆ ಹುರುಪ ಪುಟ್ಟಿಸೆ ।
ಸಿರಿಮಧುಸೂದನನು ತಾನು । ನುಡಿದನಿಂತು ಮಾತನಾಗ
ಒರೆವೆನು ಕುರುಭೂಪ ಕೇಳು ಎಂದ ಸಂಜಯ ॥ ॥೧॥ 1

ಸಮಯ ವಿಷಮವಿದರೊಳಿಂತು । ಹೀನ ಬುದ್ಧಿ ಎಲ್ಲಿಮಿದುವೆ
ಸಮನಿಸಿರುವುದೆಂತು ನಿನ್ನೊಳೀಗಅರ್ಜುನ ।
ಸಮಲವಿದುವನಾರ್ಯಪ್ರಿಯವ । ನಾಕಹೇತ್ವ[8]ಕೀರ್ತಿಕರವು
ಸಮವಿದಲ್ಲ ಬಗೆಯೆ ಎಂದು ಕಷ್ಟಕರವಿದು ॥ ॥೨॥ 2

ಅದರಿನೀನು ಕ್ಲೈಬ್ಯಹೊಂದ । ಬೇಡ ಎಂದಿಗೂವೆ ಪಾರ್ಥ
ಇದುವು ನಿನಗೆ ಎಂತು ಎನಿತು ತಕ್ಕುದಲ್ಲವು ।
ಹೃದಯ ದುರ್ಬಲತೆಯು ತುಚ್ಛ । ನಿಜದೆ ನಾಶಹೇತುರೂಪ
ವದನು ನೀಗಿ ಯುದ್ಧಕಾಗಿ ಏಳ್ಪರಂತಪ ॥ ॥೩॥ 3

ಓ ಮಧುಸೂದನನೆ ರಣದೆ । ಭೀಷ್ಮ ದ್ರೋಣ ಗುರುಗಳಿವರು
ಈ ಮಹೀಗೆ ಪೂಜ್ಯರೆದುರು ಕೋಲ್ಗಳಿಂದಲಿ ।
ಓ ಮಹಾರಿಸೂದನಾ ಅ । ದೆಂತು ಯುದ್ಧಗೈವೆ ನಾನು
ಹಾ! ಮಹಾರಿ ದುಃಖವಿದನು ಸಹಿಸಲಾರೆನು ॥ ॥೪॥ 4

೮. ಅನಾಕಹೇತು = ನರಕ ಕಾರಣ

ಇಹರು ಗುರುಗಳಿವರ ಕೊಲ್ಲ । ದೆಯೆ ಮಹಾನುಭಾವರನ್ನು
ಇಹದ ಲೋಕದಲ್ಲಿ ಭಿಕ್ಷೆ ಬೇಡಿ ಭುಂಜಿಸಿ।
ಇಹುದು ಶ್ರೇಯವಾಶೆ ಹಣಕೆ । ಗುರುಗಳಿವರ ಕೊಂದರೆಮಗೆ
ಇಹದೆ ರಕ್ತಸಹಿತ ಭೋಗ ಭೋಜ್ಯವಪ್ಪುದು ॥ ॥೫॥ 5

ನಮಗೆ ಶ್ರೇಷ್ಠಕಾರ್ಯವಾವು । ದೆಂಬುದನ್ನು ತಿಳಿಯೆವಾವು
ನಮಗೆ ಜಯವದಹುದೊ ಇಲ್ಲವವರೆ ನಮ್ಮನು ।
ಅಮಮ ಗೆಲ್ವರಿದನು ಕಾಣೆ । ವಾರ ಕೊಂದು ಇಹದೆ ಬದುಕ
ಲೆಮಗೆ ಬಯಕೆಯಿಲ್ಲವಿವರೆ ಧಾರ್ತರಾಷ್ಟ್ರರು ॥ ॥೬॥ 6

ಹೇಡಿತನದ ದೋಷದಾ ಸ್ವ । ಭಾವಪಡೆದು ಧರ್ಮವಿಷಯ
ಮೂಢಚೇತನಾಗಿ ನಾನು ನಿಮ್ಮ ಪ್ರಾರ್ಥಿಪೆ ।
ಕೂಡೆ ಶ್ರೇಯವಾವುದದನು । ನಿಶ್ಚಯದಲಿ ಪೇಳಿ ನನಗೆ
ಗಾಢಶಿಷ್ಯ ನಾನು ನಿಮ್ಮ ಶರಣು ಪೊಂದಿದೆ ॥ ॥೭॥ 7

ಭೂಮಿಮೇಲೆಯಧಿಕಸಂ । ಪದದ ರಾಜ್ಯದಿಂದ್ರಪದವ
ಶ್ರೀಮಹತ್ತ ಪಡೆದರೂವೆ ಅಲ್ಲಿ ಕಾಣೆನು ।
ಈ ಮಹೇಂದ್ರಿಯಾಂಗ ಸುಡುವ । ಶೋಕದೂರಗೈವ ಹದನ
ಓ ಮಹಾರಿಸೂದನಾ ಎಂದನರ್ಜುನ ॥ ॥೮॥ 8

ಇಂತು ಪೇಳಿ ಹೃಷೀಕೇಶ । ನೊಡನೆ ಗುಡಾಕೇಶ[9]ನಾಗ
ಎಂತು ಯುದ್ಧಮಾಡಲೊಲ್ಲೆ ನಾನು ಎನುತಲಿ ।
ಅಂತೆ ಗೋವಿಂದನಿಂಗೆ । ತನ್ನ ಮನವ ಸ್ಪಷ್ಟಪಡಿಸಿ
ಮುಂತೆ ಸುಮ್ಮನಾದ ರಾಜ! ಎಂದ ಸಂಜಯ ॥ ॥೯॥ 9

ಉಭಯ ಸೇನೆಮಧ್ಯೆಯಾ ವಿ । ಷಾದಿ ಮೋಹಿಯರ್ಜುನನಿಗೆ
ಅಭಯ ಹೃಷೀಕೇಷ ನಗುತ ನುಡಿದ ಭಾರತ[10] ।
ಸಭಯ ಮೋಹದಿಂದ ತಾ । ವಿಷಾದಗೊಂಡ ಪಾರ್ಥನನ್ನು
ಅಭಯಗೊಳಿಸಲೊರೆದ ಸಾಂಖ್ಯವಾದಿಯೋಗವ ॥ ॥೧೦॥ 10

೯. ಗುಡಾಕೇಶ = ಅರ್ಜುನ
೧೦. ಭಾರತ = ಧೃತರಾಷ್ಟ್ರನೇ

ಅಳಲುಬಾರದವರಿಗಳುವೆ । ಮತ್ತೆ ಪ್ರಾಜ್ಞನಂತೆ ನುಡಿವೆ
ಅಳರು ಸತ್ತವರಿಗು ಸಾಯದರಿಗು ಪಂಡಿತರ್ । 11
ತಿಳಿಯೆ ನಾನು ನೀನು ಮತ್ತೆ । ನೆರೆದರಾಜರೆಲ್ಲ ಹಿಂದೆ
ಉಳಿದೆವಲ್ಲದಿಲ್ಲ ಮುಂದೆ ಇಲ್ಲರೆನಿಸೆವು ॥ ॥೧೧॥ 12

ದೇಹಿಯಾದ ಆತ್ಮನಿವನ । ದೇಹದಲ್ಲಿ ಕುವರತನವು
ಆ ಹರಯ ಮುದಿಯತನವು ದೇಹದಳಿವದು ।
ಮೋಹಪಡನು ಧೀರನಲ್ಲಿ । ಪ್ರಾಪ್ತವಾಗುವಿವುಗಳಿಂದ
ಸಾಹಸಿಗನು ಎನಿಪನವನೆ ಅರಿಯೆ ದಿಟವಿದು ॥ ॥೧೨॥ 13

ಸ್ಪರ್ಶವಾದಿಯಾದ ಪಂಚ । ವಿಷಯ ಮಾತ್ರೆಗಳವು ತಾವು
ಹರ್ಷ ದುಃಖ ಶೀತ ಉಷ್ಣ ಕುಂತಿಪುತ್ರನೆ ।
ವರ್ಷದಂತೆ ಬಂದು ಹೋಗ । ನಿತ್ಯವೆನಿಪುವದರಿ ನೀನು
ಸ್ಪರ್ಶವಾದರವನು ಸಹನೆಗೈಯ್ಯೊ ಭಾರತ[11] ॥ ॥೧೩॥ 14

ಸುಖವು ದುಃಖಗಳಲಿ ಸಮತೆ । ಯಿರುವ ಧೀರಪುರುಷನನ್ನು
ಮುಖವ ಕೆಡಿಸಲಾರವೀ ವಿಷಯವೆಂದಿಗು ।
ಪ್ರಖರವಾದರವುಗಳನ್ನು । ಧೀರನವನು ಗೆಲಿದು ನಿಜದೆ
ಸಖನೆ ಪುರುಷಸಿಂಹ ಕೇಳು ಮೋಕ್ಷಗೊಂಬನು ॥ ॥೧೪॥ 15

ಭಾವವಿಲ್ಲವಾ ಅಸತ್ತಿ । ಗದುವಭಾವ ಸತ್ತಿಗಿಲ್ಲ
ಆವುದುಭಯ ತತ್ವದರ್ಶಿಗಳಿಂ ದೃಷ್ಟವು । 16
ಯಾವುದರಿಂ ಜಗತು ತುಂಬಿ । ಇರುವುದದವಿನಾಶಿ ತಿಳಿಯೊ
ತಾ ವಿನಶಿಸಲಾರನವ್ಯಯವಿದನಾವನು ॥ ॥೧೫॥ 17

ನಾಶರಹಿತನಪ್ರಮೇಯ । ನಿತ್ಯರೂಪದೇಹಿಯೆನಿಪ
ನಾಶಹೀನನಾತ್ಮನಿವನ ದೇಹವೆಲ್ಲವು ।
ನಾಶಹೇತುವೆನಿಪುವದರಿ । ನೇಳು ಯುದ್ಧಗೈಯೊ ನೀನು
ನಾಶಹೀನಹೇತುವೆರಡನರಿದು ಭಾರತ ॥ ॥೧೬॥ 18

11 = ಅರ್ಜುನನೇ
ಗ್ರಂಥದಲ್ಲಿ ಇಲ್ಲಿಂದ ಮುಂದಕ್ಕೆ ‘ಭಾರತ’ ಎಂದರೆ ಅರ್ಜುನ ಎಂದೇ ಅರ್ಥ.

ನಿತ್ಯನಾದ ಆತ್ಮನಿವನು । ಕೊಲ್ವನೆಂಬನಾವನಿಹನೊ
ನಿತ್ಯನಿವನು ಕೊಲ್ಲಪಡುವನೆಂದು ತಿಳಿವನೊ ।
ಸತ್ಯವಿಷಯ ಜ್ಞಾನಹೀನ । ರಿಬ್ಬರಿವರು ತಿಳಿಯೆ ನಿಜದೆ
ನಿತ್ಯನಾತ್ಮ ಕೊಲುವನಲ್ಲ ಕೊಲ್ಲಪಡನವ ॥ ॥೧೭॥ 19

ಹುಟ್ಟನವನು ಸಾಯನವನು । ಎಂದಿಗಾದರೊಮ್ಮೆ ಹಿಂದೆ
ಹುಟ್ಟಿ ಇದ್ದು ಈಗ ಮುಂದೆ ಇರುವನಲ್ಲವು ।
ನೆಟ್ಟನೋಡಲವನು ಅಜನು । ನಿತ್ಯ ಶಾಶ್ವತನು ಹಳಬ
ಹುಟ್ಟು ದೇಹವಳಿದರಿವನ ನಾಶವಿಲ್ಲವು ॥ ॥೧೮॥ 20

ಆತ್ಮನಜನು ನಿತ್ಯ ನಾಶ । ಹೀನನವ್ಯಯನು ಎಂದು
ಸ್ವಾತ್ಮಬುದ್ಧಿಯಿಂದಲರಿತನಾವನಾದರು ।
ಆತ್ಮಜ್ಞಾನಿಯಿಂಥ ಪುರುಷ । ಪಾರ್ಥ ಕೇಳು ಹೇಗೆ ಯಾರ
ಆತ್ಮರೂಪಜಗದೆ ಘಾತಿಸುವನು ಕೊಲ್ವನು ॥ ॥೧೯॥ 21

ಹರಕುಬಟ್ಟೆಕಳೆದು ಮೇಲೆ । ನರನು ಹೊಸದ ಧರಿಸುವಂತೆ
ಜರೆ ಶರೀರಕಳೆದು ದೇಹಿ ಹೊಸದ ಕೊಂಬನು । 22
ಹರಿವುದಿಲ್ಲ ಶಸ್ತ್ರವಿವನ । ಸುಡುವುದಿಲ್ಲ ಪಾವಕನುವೆ
ನೀರುನೆನೆಸದೊಣಗಿಸುವುದು ಇಲ್ಲ ಮಾರುತ ॥ ॥೨೦॥ 23

ಹರಿದು ಸುಟ್ಟು ನೆನೆದು ಒಣಗಿ । ಹೋಗನಿವನು ಆತ್ಮತಾನು
ಸ್ಥಿರನು ಅಚಲ ನಿತ್ಯ ಸರ್ವಗತಸನಾತನ । 24
ಒರೆವರಿವ ವಿಕಾರಿಯಲ್ಲ । ವ್ಯಕ್ತನಲ್ಲ ಚಿಂತ್ಯನಲ್ಲ
ಅರಿತರಿದನು ನೀನು ಶೋಕಗೈಯಬಾರದು ॥ ॥೨೧॥ 25

ಮತ್ತೆ ಇವನು ನಿತ್ಯಹುಟ್ಟಿ । ನಿತ್ಯಸಾವನೆಂದು ಬಗೆಯ
ಲತ್ತಲಾದರಳಲು ಸಲ್ಲ ಮಹಾಬಾಹುವೆ । 26
ಮೃತ್ಯು ಜನಿಸಿದವಗೆ ಸಿದ್ಧ । ಮೃತನಿಗದುವೆ ಜನ್ಮಸಿದ್ಧ
ಎತ್ತಲಪರಿಹಾರವಿದಕೆ ಮರುಗಬಾರದು ॥ ॥೨೨॥ 27

ಆದಿಯಲ್ಲಿ ಭೂತಗಳವು । ವ್ಯಕ್ತವಾಗದಿಹವು ಮತ್ತೆ
ಮಧ್ಯದಲ್ಲಿ ಮಾತ್ರ ವ್ಯಕ್ತವೆನಿಸಿ ತೋರ್ಪವು ।
ಆದಿಯಂತೆ ಅಂತ್ಯದಲ್ಲಿ । ವ್ಯಕ್ತವಲ್ಲದಿದ್ದು ನಿಧನ
ವಾದರಿದಕೆಯಲ್ಲಿ ಪಾರ್ಥಶೋಕವಾವುದು ॥ ॥೨೩॥ 28

ಅಚ್ಚರಿಯದು ಎನುತ ಈತ । ನಿರವ ಕಾಂಬನೊಬ್ಬ ತಾನು
ಅಚ್ಚರಿಯದು ಎನುತಲನ್ಯನೊಬ್ಬ ಪೇಳ್ವನು ।
ಅಚ್ಚರಿಯದು ಎನುತಲಾಲಿ । ಸುವನು ಮತ್ತೆ ಒಬ್ಬ ತಾನು
ಇಚ್ಛೆಯಿಂದ ಲಾಲಿಸಿದರು ಅರಿಯನೊಬ್ಬನು ॥ ॥೨೪॥ 29

ದೇಹಿಯಿವನು ನಿತ್ಯನಿರುವ । ನಂತೆ ತಾನವಧ್ಯನಿಹನು
ದೇಹವೆಲ್ಲದರೊಳು ಎಂದು ತಿಳಿಯೊ ಭಾರತ ।
ದೇಹವೆನಿಪ ಸರ್ವಭೂತ । ಗಳೊಳು ಅಂತೆ ಎಂದು ಅರಿತು
ದೇಹವಿವಕೆ ನೀನು ಶೋಕಗೈಯಬಾರದು ॥ ॥೨೫॥ 30

ನೋಡಿದರುವೆ ಕೂಡ ನಿನ್ನ । ಸಹಜಧರ್ಮವನ್ನು ನಿಜದೆ
ಹೇಡಿಯಂತೆ ನೀನು ವಿಕಂಪಿಸಲುಬಾರದು ।
ರೂಢಿಯಲ್ಲಿ ಧರ್ಮ । ಯುಕ್ತಯುದ್ಧಕಿಂತಲನ್ಯಶ್ರೇಯ
ಜೋಡಿಕೆಲಸ ಕ್ಷತ್ರಿಯನಿಗೆ ಯಾವುದಿಲ್ಲವು ॥ ॥೨೬॥ 31

ತನಗೆ ತಾನೆಯೊದಗಿ ಸ್ವರ್ಗ । ದ್ವಾರತೆರೆದವೋಲು ಪಾರ್ಥ
ನೆನೆಯಲಿಂಥ ಭಾಗ್ಯ ಕ್ಷತ್ರಿಯರಿಗೆ ಲಭ್ಯವು । 32
ಇನಿತು ಆದರಿಂಥ ಧರ್ಮ । ಯುದ್ಧ ಮಾಡದಿದ್ದರಾಗ
ನಿನತು ಧರ್ಮಕೀರ್ತಿಯಳಿದು ಪಾಪ ಪೊಂದುವೆ ॥ ॥೨೭॥ 33

ಬಹಳ ಕಾಲ ನಿಲ್ಲುವಂಥ । ನಿನ್ನದಿದಪಕೀರ್ತಿಕಥೆಯ
ಇಹದ ಜನರು ಬಹಳವಾಡಿ ನಿನ್ನ ಜರೆವರು ।
ಇಹದೆ ಈ ಅಕೀರ್ತಿ ನಿಜದೆ । ಸುಸಂಭಾವಿತನಿಗೆ ತಾನು
ಅಹುದು ಮರಣಕಿಂತ ಹೆಚ್ಚು ಎಂದು ಅರಿತರು ॥ ॥೨೮॥ 34

ಭಯದೆ ಯುದ್ಧಬಿಟ್ಟನೆಂದು । ಭಾವಿಸುವರು ಮಹಾರಥರು
ಪ್ರಿಯನು ಮಾನಿಯೆನಿಪ ನೀನು ಲಘುವದೆನಿಸುವೆ । 35
ಸುಯಶ ನಿನ್ನ ಬಹುವವಾಚ್ಯ । ವಹಿತರಾಡಿ ನಿಂದಿಸುವರು
ಅಯಶ ಸಮರ್ಥತೆಯ ನಿಂದೆ ದುಃಖತರವದು ॥ ॥೨೯॥ 36

ಹತನು ರಣದೆ ಆದರಾಗ । ಸ್ವರ್ಗವನ್ನು ಪಡೆವೆ ನೀನು
ಅಥವ ಜೇತನಾದರೀ ಮಹಿಯ ಭೋಗಿಪೆ ।
ಹಿತವೆಯಹುದು ಎಂತು ನೋಡ । ಲದರಿನೀಗ ನೀನು ಸುನಿ
ಶ್ಚಿತನು ಆಗಿ ಯುದ್ಧಕೇಳು ಕುಂತಿತನಯನೆ ॥ ॥೩೦॥ 37

ಸುಖವು ದುಃಖ ಲಾಭವಾ ಅ । ಲಾಭ ಜಯವು ಅಜಯಗಳಲಿ
ಮುಖದ ಕೆಡಿಸಿಕೊಳದೆ ಭಾವ ಸಮಪಗೊಳಿಸುತ ।
ಮಖದ ಸಮದ ಯುದ್ಧಕಾಗಿ । ಸಿದ್ಧನಾಗು ಅದರಿನೆಂತು
ನಿಖರವಿದುವೆ ಪಾಪವನ್ನು ಪೊಂದಲಾರೆ ನೀ ॥ ॥೩೧॥ 38

ಬುದ್ಧಿಯಿದನು ಜ್ಞಾನಯೋಗ । ವೆಂಬ ಸಾಂಖ್ಯರೀತಿಯಲ್ಲಿ
ವೇದ್ಯಗೈದೆಯದನು ಕರ್ಮಯೋಗರೀತಿಯು ।
ಶುದ್ಧ ಮನದೆ ಕೇಳು ನೀನು । ಬುದ್ಧಿಯುಕ್ತನಾಗಿ ಪಾರ್ಥ
ಬುದ್ಧಿಯೋಗದಿಂದ ಕರ್ಮಬಂಧ ನೀಗುವೆ ॥ ॥೩೨॥ 39

ಯೋಗವಿದನು ಮಾಡತೊಡಗೆ । ನಾಶವೆಂಬುದಿದರೊಳಿಲ್ಲ
ಯೋಗವಿದಕೆ ಬಾಧೆತಾನು ಬರುವುದಿಲ್ಲವು ।
ಯೋಗಧರ್ಮವಿದರ ಸ್ವಲ್ಪ । ಮಾತ್ರವಾದ ಚರ್ಯೆ ತಾನು
ವೇಗದಿಂದ ಮಹಾಭಯದೆ ಪಾರುಗೈವುದು ॥ ॥೩೩॥ 40

ಯೋಗಕರ್ಮವಿದಕೆ ತಾವ್ಯ । ವಸಾಯದಾತ್ಮಬುದ್ಧಿಯೊಂದೆ
ಆಗಿಯಿರುವುದದನೆ ತಿಳಿಯೊ ಕುರುವನಂದನ ।
ರಾಗಿಗವ್ಯವಸಾಯಿಗಳಿಗೆ । ಬುದ್ಧಿಗಳವು ಬಹಳ ಶಾಖೆ
ಯಾಗಿಯೊಡೆದು ಮತ್ತನಂತವೆನಿಸಿ ಇರುವುವು ॥ ॥೩೪॥ 41

ಬರಿದೆ ಹೂವಿನಂಥ ಮಾತ । ನುಡಿವರಜ್ಞ ಜನರು ತಾವು
ಅರಿಯೆ ವೇದವಾದರತರು ಇವರು ಪಾರ್ಥನೆ ।
ಇರದು ಕಾಮ್ಯಕರ್ಮಕಿಂತ । ಲನ್ಯಧರ್ಮವಸ್ತುವೆಂಬ
ರರಿಯಲಿವರು ವೇದಕರ್ಮಭೋಗಸಕ್ತರು ॥ ॥೩೫॥ 42

ಕಾಮ್ಯಕರ್ಮಸಕ್ತರಿವರು । ಸ್ವರ್ಗವೊಂದೆ ಪರವು ಎಂದು
ಕಾಮಸಕ್ತ ಜನ್ಮಕರ್ಮಫಲವದೆನಿಸುವ ।
ಕಾಮ್ಯಕರ್ಮ ಬಹಳವಿಧದ । ಕ್ರಿಯೆಗಳಲ್ಲಿ ತೊಳಲುತಿಹರು
ಕಾಮಭೋಗದೈಶ್ವರ್ಯಗತಿಯು ಪ್ರತಿಯೆನೆ ॥ ॥೩೬॥ 43

ಇವರ ಮಾತಿನರಿವುಗೆಟ್ಟು । ಭೋಗದೈಸಿರಿಯೊಳು ಮುಳುಗಿ
ವಿವಶರಾದ ಅಪಹೃತಚೇತಸರು ಎನಿಪರು ।
ವ್ಯವಸಾಯಾತ್ಮಿಕವದು ಬುದ್ಧಿ । ತಾ ಸಮಾಧಿವಿಧಿ ಯೊಳಿರದೆ
ವಿವಿಧವಾಗಿ ಅವರ ಗತಿಯು ಶಾಂತಿಯರಿಯದು ॥ ॥೩೭॥ 44

ಸತ್ವವಾದಿಯಾದ ತ್ರಿಗುಣ । ವಿಷಯ ಬೋಧಿಸುವುವು ವೇದ
ಸತ್ವದಿಂದ ತ್ರಿಗುಣರಹಿತನಾಗೊ ಅರ್ಜುನ ।
ಮಿಥ್ಯವೆನಿಪ ದ್ವಂದ್ವಯೋಗ । ಕ್ಷೇಮರಹಿತನಾಗಿ ನೀನು
ನಿತ್ಯ ಸತ್ವನಾಗು ಆತ್ಮವಂತನೆನಿಸೆಲೊ ॥ ॥೩೮॥ 45

ಜಲವದೆಲ್ಲ ಕಡೆಯು ತುಂಬಿ । ತುಳುಕುತಿಹುದ ಕಂಡವನಿಗೆ
ಪಲವು ಬಗೆಯ ಪಳ್ಳದಿಂದಲೇಂ ಪ್ರಯೋಜನ ।
ನೆಲೆಯ ಸರುವ ವೇದಗಳೊಳು । ಅನಿತೆ ಪ್ರಯೋಜನವದಹುದು
ನಿಲವನರಿತ ಬ್ರಾಹ್ಮಣಂಗೆ ಆತ್ಮಜ್ಞಾನಿಗೆ ॥ ॥೩೯॥ 46

ಕರ್ಮಮಾಡೆ ಮಾತ್ರವದ । ಧಿಕಾರ ನಿನಗೆ ತಾನದಿಹುದು
ಕರ್ಮಫಲಕೆ ಇಲ್ಲ ತಾನು ಅದುವು ಎಂದಿಗು ।
ಕರ್ಮಫಲದಪೇಕ್ಷೆಯಿಂದ । ಕರ್ಮಮಾಡಬೇಡ ನೀನು
ಕರ್ಮ ಮಾಡದೇಯು ಕೂಡ ಇರಲು ಬೇಡವು ॥ ॥೪೦॥ 47

ಯೋಗದಲ್ಲಿ ನಿಂತು ಕರ್ಮ । ಗಳನು ಮಾಡುನೀನು ಅಂತೆ
ಸಂಗ ತೊರೆದಸಕ್ತನಾಗುತಾ ಧನಂಜಯ ।
ಭಂಗವಿಲ್ಲದಂತೆ ಸಿದ್ಧಿ । ಯಸಿದ್ಧಿಯಲಿ ಸಮನು ಆಗು
ತುಂಗ ಸಮತೆಯದುವೆ ತಾನು ಯೋಗವೆನಿಪುದು ॥ ॥೪೧॥ 48

ಬುದ್ಧಿಯೋಗವಿದಕ್ಕಿಂತ । ಫಲದ ಆಶೆಯುಳ್ಳ ಕರ್ಮ
ಬದ್ಧಗೊಳಿಸುವದುವೆ ಬಹಳ ಕೀಳ್ ಧನಂಜಯ ।
ಬುದ್ಧಿಯೋಗದಲ್ಲಿ ಶರಣ । ನಾಗು ನೀನು ಕರ್ಮಫಲದೆ
ಬದ್ಧರಾಗಿ ಆಶೆಗೊಳ್ವರವರೆ ಕೃಪಣರು ॥ ॥೪೨॥ 49

ಸಮತೆ ಬುದ್ಧಿಯುಕ್ತ ಪುರುಷ । ಸುಕೃತದುಷ್ಕೃತಗಳನೆರಡ
ಸಮತೆಯಿಂದಲಿಲ್ಲೆ ತಾನೆ ಬಿಟ್ಟು ಕಳೆವನು ।
ಸಮತೆಯಿಂದ ಯೋಗದಲ್ಲಿ । ನಿರತನಾಗು ಅದರಿನೀನು
ಸಮತೆ ಬುದ್ಧಿಯೋಗ ಕರ್ಮಗಳಲಿ ಕೌಶಲ ॥ ॥೪೩॥ 50

ಬುದ್ಧಿಯುಕ್ತ ಜ್ಞಾನಿಜನರೆ । ಕರ್ಮಫಲವ ತೊರೆದು ಜನ್ಮ
ಬದ್ಧ ಬಂಧ ಕಳೆದು ಶುದ್ಧಪದವ ಪಡೆವರು । 51
ಬುದ್ಧಿ ನಿನ್ನದೆಂದು ಮೋಹ । ಕಲಿಲ ದಾಟುತದೆಯೊ ಆಗ
ಸಿದ್ಧ ಶ್ರೋತ ಶ್ರುತದೆ ನಿರ್ವೇದ ಪೊಂದುವೆ ॥ ॥೪೪॥ 52

ಶ್ರುತಿಯನೇಕ ಕೇಳ್ದು ಚಲಿತ । ವಾದ ಬುದ್ಧಿ ಎಂದು ನಿಶ್ಚ
ಲಿತವು ಆದ ಜ್ಞಾನದಿಂದ ಸ್ಥಿರತೆ ಪಡೆವುದೊ ।
ಸತತವಚಲ ಸಮಾಧಿಯಲಿ । ನೆಲೆಯಗೊಂಡ ಬುದ್ಧಿಯಿಂದ
ಸತತ ವರದ ಯೋಗಸಿದ್ಧಿಯಂದು ಪಡೆಯುವೆ ॥ ॥೫೩॥ 53

ಸಮಾಧಿಸ್ಥನಾದ ಸ್ಥಿತ । ಪ್ರಜ್ಞ ನೆನಿಪನವನು ಯಾರು
ಸಮತೆ ಸ್ಥಿರತೆ ಲಕ್ಷಣಗಳವೇನು ಕೇಶವ ।
ಸಮದ ಸ್ಥಿರದ ಬುದ್ಧಿಯವನು । ನುಡಿವುದೆಂತು ಗೈವುದೆಂತು
ಸಮದೆ ನಡೆವುದೆಂತು ಅವನು ಬಿಡುವುದೇನನು ॥ ॥೫೪॥ 54

ಸರುವವಾದ ತನ್ನ ಮನೋ । ಗತದ ಕಾಮನೆಗಳ ತಾನು
ಇರದೆ ಏಗ ಪೂರ್ಣ ತ್ಯಾಜ್ಯಗೈದು ಪಾರ್ಥನೆ ।
ಸ್ಥಿರದೆ ಆತ್ಮನಲ್ಲಿ ಆತ್ಮ । ನಿಂದಲೇಯೆ ತುಷ್ಟನಹನೊ
ಇರದೆ ಆಗಲವನು ಸ್ಥಿತಪ್ರಜ್ಞನೆನಿಪನು ॥ ॥೫೫॥ 55

ಯಾರು ದುಃಖದಲ್ಲಿ ಅನುದ್ । ವೇಗಮನದೊಳಿಹನೊ ಅವನು
ಯಾರು ಸುಖದೆ ಬಯಕೆಯಿಲ್ಲದಾಗಿ ಇರುವನೊ ।
ದೂರನಾಗಿ ರಾಗಕ್ರೋಧ । ಭಯದೆ ಯಾವನಿಹನೊ ಅವನು
ಧೀರಮುನಿಪ ಸ್ಥಿರದ ಬುದ್ಧಿಯುಳ್ಳನೆನಿಪನು ॥ ॥೫೬॥ 56

ಎಲ್ಲ ಎಡೆಯೊಳಾವ ಸ್ನೇಹ । ವನ್ನು ಮಾಡದಿಹನೊ ಮತ್ತೆ
ಅಲ್ಲಿಯಲ್ಲಿ ಪ್ರಾಪ್ತವಾದ ಶುಭಾಶುಭಗಳಿಂ ।
ಎಲ್ಲ ವಿಧದ ಹರ್ಷದ್ವೇಷ । ರಹಿತನಾಗಿ ಯಾವನಿಹನೊ
ಎಲ್ಲ ರೀತಿಯವನ ಪ್ರಜ್ಞೆ ನೆಲೆಯೊಳಿರುವುದು ॥ ॥೫೭॥ 57

ಅಂಗಗಳನು ಎಲ್ಲ ತನ್ನ । ಒಳಗುಗೈವ ಕೂರ್ಮದಂತೆ
ಹಿಂಗದಾದ ಇಂದ್ರಿಯಾದಿ ವಿಷಯದಿಂದಲಿ ।
ಭಂಗವಿಲ್ಲದಂತೆ ತನ್ನ । ಇಂದ್ರಿಯಗಳ ಸೆಳೆದುಕೊಂಬ
ತುಂಗಪುರುಷನವನ ಪ್ರಜ್ಞೆ ನೆಲೆಯೊಳಿರುವುದು ॥ ॥೫೮॥ 58

ನಿರಾಹಾರಿ ದೇಹಿಯನ್ನು । ವಿಷಯಗಳವು ತೊರೆದರೂವೆ
ದುರಾಗರಸವು ಮಾತ್ರ ತಾ ತೊರೆಯದಿರುವುದು ।
ಪರಾವಸ್ತು ದರ್ಶನದೆಯೆ । ರಾಗರಸವು ಸಹಿತವಾಗಿ
ನಿರಾತಂಕವಾಗಿ ಇವನ ತೊರೆದು ಪೋಪುದು ॥ ॥೫೯॥ 59

ಇಷ್ಟು ಯತ್ನಗೈದ ಪ್ರಾಜ್ಞ । ಪುರುಷಮನವನಿಂದ್ರಿಯಗಳು
ಅಷ್ಟು ಬಲದೆ ಕುಂತಿತನಯ ಕಡೆದು ಸೆಳೆವುವು । 60
ದುಷ್ಟ ಇಂದ್ರಿಯಗಳ ಸಂ । ಯಮಿಸಿ ಮನವನೆನ್ನೊಳಿಟ್ಟು
ಇಷ್ಟವಶದೆ ತರುವನವನ ಪ್ರಜ್ಞೆ ಸುಸ್ಥಿರ ॥ ॥೫೨॥ 61

ವಿಷಯಧ್ಯಾನಗೈಯೆ ಪುರುಷ । ಸಂಗವವರೊಳುದಿಸಿಬಹುದು
ವಿಷಯ ಸಂಗದಿಂದ ಕಾಮವದರಿ ಕ್ರೋಧವು । 62
ವಿಷಮಕ್ರೋಧದಿಂದ ಮೋಹ । ವದರಿ ಸ್ಮೃತಿಯಭ್ರಂಶವದರ
ದಿಶೆಯಿನಾಗಿ ಬುದ್ಧಿ ನಾಶ, ನಾಶಗೊಳ್ವನು ॥ ॥೫೩॥ 63

ರಾಗದ್ವೇಷ ಬಿಟ್ಟನವನು । ವಶಕೆತಂದ ಇಂದ್ರಿಯಗಳ
ರಾಗವಿಷಯಗಳನು ತಾನು ಭೋಗಿಸುತ್ತಲಿ।
ಯೋಗಿಯಾತ್ಮ ಬುದ್ಧಿಮನವ । ವಿಧೇಯತೆಯೊಳಿರಿಸಿ ತಾನು
ಬೇಗದಿಂ ಪ್ರಸಾದದೆಡೆಯ ಕಡೆಗೆ ನಡೆವನು ॥ ॥೫೪॥ 64

ಸರುವ ದುಃಖಹಾನಿಯಹುದು । ತಾ ಪ್ರಸಾದಪ್ರಾಪ್ತಿಯಿಂದ
ಸ್ಥಿರತೆಪಡೆವುದಾ ಪ್ರಸನ್ನ ಚೇತಬುದ್ಧಿಯು । 65
ಇರದಯುಕ್ತಗವಗೆ ಬುದ್ಧಿ । ಮತ್ತೆ ಭಾವವಾ ಅಭಾವಿ
ಗಿರದು ಶಾಂತಿಯಾ ಅಶಾಂತಗೆಲ್ಲಿ ಸುಖವದು ॥ ॥೫೫॥ 66

ವಿಷಯವಿಂದ್ರಿಯದಲಿ ಚರಿಪ । ಮನವು ಪ್ರಜ್ಞೆಯನ್ನು ನಿಜದೆ
ವಿಷಮವಾಯು ನೀರನಾವೆಯಂತೆ ಸೆಳೆವುದು । 67
ವಿಷಯವದರಿ ಮಹಾಬಾಹು! । ಯಾವನಿಂದ್ರಿಯಗಳ ಹಿಡಿದು
ವಿಷಯವಿಮುಖಗೈವನವನ ಪ್ರಜ್ಞೆಸುಸ್ಥಿರ ॥ ॥೫೬॥ 68

ಎಲ್ಲ ಭೂತಗಳಿಗೆ ಯಾವ । ಕಾಲ ರಾತ್ರಿಯಹುದೊ ಆಗ
ಲಲ್ಲಿ ಜಾಗರದಲಿ ತಾನು ಇರುವ ಸಂಯಮಿ ।
ಎಲ್ಲ ಭೂತಗಳಿಗೆ ಯಾವ ಕಾಲ ಜಾಗರೆನಿಪುದಾಗ
ಲಲ್ಲಿಯದುವೆ ರಾತ್ರಿಯೆನಿಪುದರಿತ ಮುನಿಪಗೆ ॥ ॥೫೭॥ 69

ತುಂಬಿ ಚಲಿಸದಿರುವ ಸ್ಥಿರದ । ಜಲಧಿಯನ್ನು ಜಲಗಳೆಲ್ಲ
ತುಂಬಿ ಹರಿವ ನದಿಗಳಾಗಿ ಎಂತು ಹೊಗುವುವೊ ।
ತುಂಬ ಕಾಮನೆಗಳು ಅಂತೆ । ಯಾವನನ್ನು ಹೊಗುವುವವನೆ
ಇಂಬು ಪಡೆವ ಶಾಂತಿ ಕಾಮಕಾಮಿಯಲ್ಲವು ॥ ॥೫೮॥ 70

ಸರ್ವಕಾಮನೆಗಳ ತೊರೆದು । ಸ್ಪೃಹತೆರಹಿತ ಮಮತೆರಹಿತ
ಸರ್ವದಹಂಕೃತಿಯರಹಿತನಾಗಿ ಯಾವನು ।
ಸರ್ವಶುದ್ಧನಾಗಿ ಚರಿಪ । ನವನೆ ಸ್ಥಿತಪ್ರಜ್ಞಪುರುಷ
ಸರ್ವರೀತಿಯವನೆ ಶಾಂತಿಯೆಡೆಗೆ ನಡೆವನು ॥ ॥೫೯॥ 71

ಇದುವೆ ಪಾರ್ಥ ಬ್ರಾಹ್ಮಿಸ್ಥಿತಿಯು । ಸಾಂಖ್ಯಯೋಗ ಪರಮ ಲಕ್ಷ್ಯ
ವಿದನು ಪಡೆದ ಸ್ಥಿತಪ್ರಜ್ಞ ಮೋಹಗೊಳ್ಳನು ।
ಇದುವೆ ಸ್ಥಿತಿಯೊಳಿರುತಲವನು । ಅಂತಕಾಲದಲ್ಲು ಸಹಿತ
ಮುದದೆ ಬ್ರಹ್ಮ ನಿರ್ವಾಣವನ್ನು ಪಡೆವನು ॥ ॥೬೦॥ 72

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಎರಡನೆಯದು**
**ಸಾಂತಗೊಂಡ ನಿರುತ ಪರಮ ಸಾಂಖ್ಯಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ಮೂರು

# ಕರ್ಮಯೋಗ

ಕರ್ಮಯೋಗಗಳಲಿ ಕರ್ಮ । ಕಿಂತ ಬುದ್ಧಿ ಶ್ರೇಷ್ಠವೆಂದು
ಧರ್ಮಜ್ಞಾನಿ ನಿನ್ನ ಮತವದೆಲೆ ಜನಾರ್ದನ ।
ಕರ್ಮಘೋರದಲ್ಲಿ ಏತ । ಕೆನ್ನ ತಳ್ವೆ ಕೇಶವಾ
ಮರ್ಮಬಿಡಿಸಿ ಪೇಳು ಎಂದು ಕೇಳ್ದನರ್ಜುನ ॥ ॥೧॥ 1

ಎರಡು ಬಗೆಯ ಅರ್ಥವುಳ್ಳ । ಮಾತಿನಿಂದಲೆನ್ನ ಬುದ್ಧಿ
ಯರಿಯದಂತೆ ಮಾಡಿಯದನು ಮೋಹಗೊಳಿಸಿದೈ।
ದೊರೆಯುತದೆಯೊ ಎನಗೆ ಶ್ರೇಯ । ವೇತರಿಂದಲದನು ಒಂದ
ನರಿಯುವಂತೆ ಖಚಿತವಾಗಿ ಇನ್ನು ಪೇಳೆಲೈ ॥ ॥೨॥ 2

ಲೋಕವಿದರೊಳೆರಡು ಬಗೆಯ । ನಿಷ್ಠೆಯಿರುವುದೆಂಬುದದು ವಿ
ವೇಕರೀತಿ ಮೊದಲೆ ಎನ್ನ ಪೇಳ್ದುದನಘನೆ ।
ಲೋಕದಲ್ಲಿ ಸಾಂಖ್ಯರಿಂಗೆ । ಜ್ಞಾನಯೋಗ ಯೋಗಿಗಳಿಗೆ
ಸಾಕಸಕ್ತ ಕರ್ಮಯೋಗ ಯೋಗನಿಷ್ಠೆಯು ॥ ॥೩॥ 3

ಕರ್ಮದಲ್ಲಿ ತೊಡಗದಿದ್ದ । ಮಾತ್ರ ಪುರುಷನವನು ಸುನಿ
ಷ್ಕರ್ಮಿಯೆನಿಸಲಾರ ತಾನು ಅದುವು ಎಂದಿಗು ।
ಕರ್ಮವನ್ನು ಸಂನ್ಯಸಿಸಿದ । ಮಾತ್ರಕದುವೆ ತಾನು ಮತ್ತೆ
ಕರ್ಮಸಿದ್ಧಿಯೆಡೆಯ ಕಡೆಗೆ ನಡೆಯಲಾರನು ॥ ॥೪॥ 4

ಯಾವನೊಬ್ಬ ಕ್ಷಣಕು ಕರ್ಮ । ಹೀನನಾಗಿ ಕೂಡನೆಲ್ಲ
ರವಶರಾಗಿ ಪ್ರಕೃತಿಗುಣದೆ ಕರ್ಮಮಾಳ್ಪರು । 5
ಯಾವನು ಕರ್ಮೇಂದ್ರಿಯಗಳ । ತಡೆದು ಮನದೆ ವಿಷಯ ಸ್ಮರಿಪ
ನವನೆ ಆತ್ಮಮೂಢ ಮಿಥ್ಯಾಚಾರಿಯೆನಿಪನು ॥ ॥೫॥ 6

ಮನದೆ ಇಂದ್ರಿಯಗಳ ನಿಯಮ । ಗೊಳಿಸಲಾರಭಿಸುವನಾವ
ನನಾಸಕ್ತನಾಗಿ ಕರ್ಮದಿಂದ್ರಿಯಗಳಲಿ ।
ಅನುವುಗೊಂಡ ಕರ್ಮಯೋಗ । ದಲ್ಲಿ ಚರಿಪ ಪುರುಷನವನೆ
ಅನಾಸಕ್ತ ಕರ್ಮಯೋಗಿ ಶ್ರೇಷ್ಠನರ್ಜುನ ॥ ॥೬॥ 7

ನಿಯತ ಕರ್ಮ ಮಾಡು ನೀನು । ಕರ್ಮಮಾಡದಿಹುದಕಿಂತ
ನಿಯತಕರ್ಮ ಶ್ರೇಷ್ಠವಾದುದದುವು ಎಂದಿಗು ।
ನಿಯತಕರ್ಮ ಗೈಯದಿರಲು । ನಿನ್ನ ದೇಹಯಾತ್ರೆ ಕೂಡ
ನಿಯತವಾಗಿ ಸಿದ್ಧಿಯನ್ನು ಪೊಂದಲಾರದು ॥ ॥೭॥ 8

ಈಶಪ್ರೀತಿ ಯಜ್ಞಕಾಗಿ । ಕರ್ಮವಿಹುದು ಅದನು ಬಿಟ್ಟ
ಲೇಶಕರ್ಮದಿಂದಲದುವೆ ಲೋಕಬಂಧನ ।
ಈಶಗರ್ಪಣೇಯ ಬುದ್ಧಿ । ಯಿಂದ ಮುಕ್ತಸಂಗನಾಗಿ
ಪಾಶರಹಿತ ಕರ್ಮಮಾಡು ಕುಂತಿತನಯನೆ ॥ ॥೮॥ 9

ಹಿಂದೆ ಕಲ್ಪದಾದಿಯಲ್ಲಿ । ಯಜ್ಞಸಹಿತ ಪ್ರಜೆಗಳನ್ನು
ಅಂದು ಸೃಷ್ಟಿಗೈದು ಪ್ರಜಾಪತಿಯು ನುಡಿದನು ।
ಇಂದಿನಿದುವೆ ಯಜನದಿಂದ । ನಿಮ್ಮ ವೃದ್ಧಿಯಾಗಲಿದುವೆ
ಎಂದು ನಿಮ್ಮ ಎಲ್ಲ ಇಷ್ಟ ಕೊಡುವುದಾಗಲಿ ॥ ॥೯॥ 10

ದೇವತೆಗಳ ಭಾವಿಸುತ್ತ । ಯಜನದಿಂದ ತುಷ್ಟಿಪಡಿಸಿ
ದೇವತೆಗಳು ಸಲಿಸಲಿಷ್ಟ ನಿಮ್ಮಭಾವಿಸಿ ।
ನೀವು ಪರಸ್ಪರದೆ ಭಾವಿ । ಸುತ್ತಲಿಂತು ಎಲ್ಲ ರೀತಿ
ದಿವ್ಯ ಶ್ರೇಯಗಳನು ಪಡೆದು ಲೇಸಪೊಂದಿರಿ ॥ ॥೧೦॥ 11

ಯಜ್ಞಭಾವಿ ದೇವತೆಗಳು । ಕೊಡುವರಿಷ್ಟಭೋಗಗಳನು
ಅಜ್ಞನಾಗಿ ಯಾವನವನು ತಾನೆ ಕೊಂಬನು ।
ಯಜ್ಞದೇವತೆಗಳು ಕೊಟ್ಟು । ದವರ್ಗೆ ಕೊಡದೆ ತಾನೆ ಉಂಬ
ಪ್ರಜ್ಞೆ ಹೀನಪುರುಷನವನು ನಿಜದೆ ಚೋರನು ॥ ॥೧೧॥ 12

ಯಜ್ಞಶೇಷವುಂಬ ಸಂತ । ರೆಲ್ಲ ಪಾಪಮುಕ್ತರಹರು
ಅಜ್ಞರಾತ್ಮಕಾಗಿ ಪಚಿಸಿ ಪಾಪವುಂಬರು । 13
ಯಜ್ಞದನ್ನದಿಂದ ಭೂತ । ರನ್ನ ವೃಷ್ಟಿಯಿಂದ ವೃಷ್ಟಿ
ಯಜ್ಞದಿಂದ ಯಜ್ಞ ಕರ್ಮದಿಂದಲುದಿಪುದು ॥ ॥೧೨॥ 14

ಕರ್ಮ ಬ್ರಹ್ಮದಿಂದಲುದಿಸಿ । ಬಹುದು ತಿಳಿಯೊ ಬ್ರಹ್ಮವದುವೆ
ನಿರ್ಮಲಾಕ್ಷರದಲಿ ಸಮುದ್ಭವಿಸಿ ಎಸೆವುದು ।
ಮರ್ಮವದರಿ ಸರ್ವಗತವು । ಬ್ರಹ್ಮತಾನು ನಿತ್ಯ ಯಜ್ಞ
ಕರ್ಮದಲ್ಲಿ ಪ್ರತಿಷ್ಠಿತವದಾಗಿ ಇರುವುದು ॥ ॥೧೩॥ 15

ಹೀಗೆ ಪ್ರವರ್ತಿಸುತಲಿರುವ । ಸೃಷ್ಟಿಚಕ್ರಕಾರ್ಯವನ್ನು
ಹಾಗೆಯದನು ಯಾವನನುಸರಿಪುದಿಲ್ಲವೊ ।
ಆಗಲವನು ಪಾಪದಾಯು । ಇಂದ್ರಿಯಗಳ ವಿಷಯಭೋಗಿ
ಯಾಗಿ ತಾನು ಲೋಕದಲ್ಲಿ ವ್ಯರ್ಥ ಜೀವಿಪ ॥ ॥೧೪॥ 16

ಆತ್ಮಪ್ರೀತಿವಂತ ಮತ್ತೆ । ಆತ್ಮತೃಪ್ತಿಗೊಂಬ ಮನುಜ
ಗಾತ್ಮನಲ್ಲೆ ಹರ್ಷಿಸುವಗೆ ಕಾರ್ಯವಿಲ್ಲವು । 17
ಆತ್ಮರತಗೆ ಇಹದೆ ಕೃತಿ ಅ । ಕೃತಿಯೊಳರ್ಥಹಾನಿಯಿಲ್ಲ
ಆತ್ಮರತಗೆ ಸ್ವಾರ್ಥವಿಲ್ಲ ಸರ್ವಭೂತದಿ ॥ ॥೧೫॥ 18

ಅದರಿನೀನಸಕ್ತನಾಗಿ । ಸತತ ಕಾರ್ಯಕರ್ಮಮಾಡು
ಇದುವಸಕ್ತ ಕರ್ಮಮಾಡೆ ಪುರುಷ ಮುಕ್ತನು । 19
ಇದುವೆ ಕರ್ಮದಿಂದ ಜನಕ । ರಾದಿಗಳುವೆ ಸಿದ್ಧಿ ಪಡೆದ
ರದರಿ ಲೋಕಸಂಗ್ರಹಾರ್ಥ ನೀನು ಗೈವುದು ॥ ॥೧೬॥ 20

ಯಾವ ಯಾವುದನ್ನು ಶ್ರೇಷ್ಠ । ನಾಚರಿಸುವನದನೆಯದನೆ
ತಾವು ಇತರ ಜನರು ಆಚರಿಪರು ಬಿಡದೆಯೆ ।
ಯಾವುದನ್ನು ತಾ ಪ್ರಮಾಣ । ಮಾಡಿ ತೋರಿಸುವನದನ್ನು
ತಾವು ಲೋಕವಂತೆ ಅನುಸರಿಸಿ ನಡೆವುದು ॥ ॥೧೭॥ 21

ಇಲ್ಲ ಎನಗೆ ಪಾರ್ಥ ಕರ್ । ತವ್ಯ ಲೋಕಮೂರೊಳಾವು
ದಿಲ್ಲವದುವೆ ಪಡೆಯದಂಥ ವಸ್ತು ತಾನದು ।
ಇಲ್ಲವಾದರೂವೆ ನಾನು । ಕರ್ಮದಲ್ಲಿ ನಿರತನಾಗಿ
ಎಲ್ಲರಂತೆ ನಿತ್ಯ ವರ್ತಿಸುತ್ತಲಿರುವೆನು ॥ ॥೧೮॥ 22

ಒಂದು ವೇಳೆ ನಾನು ಎಚ್ಚ । ರದಲಿ ಕರ್ಮಮಾಡದಿದ್ದ
ರಂದೆ ಪಾರ್ಥ ಅಂತೆ ಗೈವರೆಲ್ಲ ಮನುಜರು । 23
ಎಂದು ನಾನು ಬಿಡಲು ಕರ್ಮ । ವಂದೆ ಲೋಕನಾಶವಹುದು
ಅಂದೆ ಸಂಕ್ರಕಾರಿಯೆನಿಸಿ ಕೊಲ್ವೆ ಪ್ರಜೆಗಳ ॥ ॥೧೯॥ 24

ಕರ್ಮಸಕ್ತರಜ್ಞರೆಂತು । ಗೈವರಂತೆ ಲೋಕಹಿತಕೆ
ಕರ್ಮದಲ್ಲಸಕ್ತ ವಿಜ್ಞ ತಾನು ಗೈವುದು । 25
ಕರ್ಮಸಂಗಿ ಅಜ್ಞ ಜನಕೆ । ಬುದ್ಧಿಭೇದ ಜನಿಸದಂತೆ
ಕರ್ಮವೆಲ್ಲ ವಿಜ್ಞ ಯುಕ್ತಗೈದು ಗೈಪುದು ॥ ॥೨೦॥ 26

ಎಲ್ಲ ಕರ್ಮ ಪ್ರಕೃತಿಗುಣಗ । ಳಾಗುಗೊಳಿಸುಗವನು ತಾನೆ
ಯಲ್ಲಿ ಅಹಂಕಾರಿ ಮೂಢ ಗೈವೆನೆಂಬನು । 27
ಘುಲ್ಲ ತತ್ವವಿದನು ಗುಣದ । ಕರ್ಮವರಿತು ಮಹಾಬಾಹು
ಎಲ್ಲ ಗುಣದ ವರ್ತನೆಗಳು ಎಂದಸಕ್ತನು ॥ ॥೨೧॥ 28

ಪ್ರಕೃತಿಗುಣದೆ ಮೋಹಗೊಂಡ । ಜನರು ಗುಣದೆ ಕರ್ಮಗಳಲಿ
ವಿಕೃತರಾಗಿ ಅವುಗಳಲ್ಲಿ ಸಕ್ತರೆನಿಪರು ।
ಅಕೃತ್ಸ್ನವಿ[12]ದರೆನಿಪ ಇಂಥ । ಮಂದಬುದ್ಧಿಯುಳ್ಳ ಜನರ
ಸುಕೃತ್ಸ್ನ[13]ವಿದರೆಂತು ವಿಚಲಗೊಳಿಸಬಾರದು ॥ ॥೨೨॥ 29

ಎಲ್ಲ ಕರ್ಮಗಳನು ಎನಗೆ । ಸರ್ವಸಮರ್ಪಣೆಯ ಮಾಡಿ
ಇಲ್ಲಿಯೆ ಆಧ್ಯಾತ್ಮ ಬುದ್ಧಿರತನು ಆಗುತ ।
ಎಲ್ಲ ಆಶೆರಹಿತನಾಗಿ । ಮತ್ತೆ ನಿರ್ಮಮನು ಆಗಿ
ಎಲ್ಲ ಜ್ವರದೆ ಮುಕ್ತನಾಗಿ ಯುದ್ಧಮಾಡೆಲೊ ॥ ॥೨೩॥ 30

ಯಾರು ಶ್ರದ್ಧೆಯಿಂದ ಮತ್ತ । ಸೂಯರಹಿತ ಬುದ್ಧಿಯಿಂದ
ಲಾರು ಇದುವೆ ಎನ್ನ ಇಂತು ಪೇಳ್ದ ಮತವನು ।
ಸಾರವರಿತು ನಿತ್ಯವನುಷ್ಠಿಸುವ । ಮನುಜರವರು ಸಹಿತ
ಘೋರಕರ್ಮಬಂಧದಿಂದ ಮುಕ್ತಿಪಡೆವರು ॥ ॥೨೪॥ 31

12. ಅಕೃತ್ಸ್ನ ವಿದರು = ಏನೂ ತಿಳಿಯದವರು
13. ಸುಕೃತ್ಸ್ನ ವಿದರು = ಎಲ್ಲ ಬಲ್ಲವರು

ಯಾರಸೂಯ ಬುದ್ಧಿಯಿಂದ । ಎನ್ನ ಪೇಳ್ದಮತವನಿದನು
ಕ್ರೂರರಾಗಿ ತಾವು ಅನುಷ್ಠಿಸುವುದಿಲ್ಲವೊ ।
ಮೀರಿದಂಥ ಮೂಢರವರು ಜ್ಞಾನಲೇಶರಹಿತರಾಗಿ
ಘೋರನಷ್ಟಚೇತರೆಂದು ಅವರ ನೀ ತಿಳಿ ॥ ॥೨೫॥ 32

ಜ್ಞಾನವಂತ ಕೂಡ ತನ್ನ । ಪ್ರಕೃತಿಗುಣದ ಬುದ್ಧಿಯಿಂದ
ತಾನವಶನು ಆಗಿ ಎಲ್ಲ ಚೇಷ್ಟೆಗೈವನು ।
ಆ ನಿಯತದ ಪ್ರಕೃತಿಗುಣವ । ಭೂತಗಳವು ಪಡೆವುವದರಿ
ನೇನ ಗೈಯ ಬಲ್ಲುದಲ್ಲಿ ತಾನೆ ನಿಗ್ರಹ ॥ ॥೨೬॥ 33

ರಾಗದ್ವೇಷವೆಡೆಯಗೊಂಡು । ಇಹವು ವಿಷಯದಿಂದ್ರಿಯಗಳು
ಆಗಬಾರದವಕೆ ವಶನು ಶತ್ರುವವುಗಳು । 34
ವಿಗುಣವಾ ಸ್ವಧರ್ಮ ಶ್ರೇಯ । ಪರರ ಧರ್ಮನಿಷ್ಠೆಗಿಂತ
ಆಗೆ ನಿಧನ ಸ್ವಧರ್ಮ ಶ್ರೇಯ ಭಯವು ಪರರದು ॥ ॥೨೭॥ 35

ಪುರುಷನವನು ತನ್ನ ಇಚ್ಛೆ । ಇಲ್ಲದಿದ್ದರೂವೆ ಕೂಡ
ಭರದೆ ಬಲದೆ ಸೆಳೆತಗೊಂಡ ತೆರದಿ ತಾನವ ।
ಇರದೆ ಪಾಪಕಾರ್ಯ ಗೈವ । ನೇತಕೇನ್ ಪ್ರಯುಕ್ತ ಪೇಳು
ಪರಮ ವಾರ್ಷ್ಣೇಯ! ಎಂದು ಕೇಳ್ದನರ್ಜುನ ॥ ॥೨೮॥ 36

ಕಾಮವಿದುವೆ ಕ್ರೋಧವಿದುವೆ । ರಜೋಗುಣದೆ ಪುಟ್ಟಿದಿವುಗ
ಳಾ ಮಹಾಶಿ ಮಹಾಪಾಪಿ ಇರದೆ ಶತ್ರುಗಳ್ । 37
ಧೂಮದಿಂದೆ ವಹ್ನಿ ಮಲದೆ । ಮುಕುರ ಪೊರೆಯೊಳಿಂದೆ ಗರ್ಭ
ತಾಮು ಆವೃತದೊಲ್ ಜ್ಞಾನವಿದರಿನಾವೃತ ॥ ॥೨೯॥ 38

ಇದರಿನಾವೃತವದು ಜ್ಞಾನ । ಜ್ಞಾನಿಗಳಿಗೆ ನಿತ್ಯವೈರಿ
ಇದುವೆ ಕಾಮರೂಪ ಪೂರ್ಣಗೊಳ್ಳದಗ್ನಿಯು । 39
ಇದರ ಸ್ಥಾನವಿಂದ್ರಿಯಗಳು । ಮನೋಬುದ್ಧಿ ಇದುವು ಜ್ಞಾನ
ವದನು ಆವರಿಸುತ ವಿಮೋಹಿಸುಗು ದೇಹಿಯ ॥ ॥೩೦॥ 40

ಆದರಿ ಮೊದಲು ನಿಯಮಿಸಿಂದ್ರಿ । ಯಗಳ ಭರತಋಷಭ ಕೊಲ್ಲು
ಇದುವೆ ಪಾಪಿ ಜ್ಞಾನಸುವಿಜ್ಞಾನನಾಶಿಯ । 41
ಇದುವೆ ಇಂದ್ರಿಯಗಳು ಪರವು ಎಂಬರದಕೆ ಪರವು ಮನವು
ಅದಕೆ ಪರವು ಬುದ್ಧಿಯದಕೆ ಪರವು ಆತ್ಮನು ॥ ॥೩೧॥ 42

ಇಂತು ಬುದ್ಧಿಗಿಂತ ಪರವ । ನರಿತು ಆತ್ಮನಾತ್ಮದಿಂದ[14]
ಲಂತೆ ಅಲ್ಲೆ ಸುಸ್ಥಿರವನುಗೊಳಿಸುತಾಗಲೆ ।
ಎಂತು ಕಾಮರೂಪಿ ದುರಾ । ಸದನು ಆದ ಶತ್ರುವನ್ನು
ಅಂತೆ ಪೂರ್ಣ ಸಂಹರಿಸೆಲೊ ಮಹಾಬಾಹುವೆ ॥ ॥೩೨॥ 43

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಮೂರನೆಯದು**
**ಸಾಂತಗೊಂಡ ಶ್ರೇಷ್ಠವಾದ ಕರ್ಮಯೋಗವು ॥**

14. ಆತ್ಮ = ಆತ್ಮನನ್ನು ; ಆತ್ಮದಿಂದ = ಬುದ್ಧಿಯಿಂದ

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ನಾಲ್ಕು

# ಜ್ಞಾನಕರ್ಮ ಸಂನ್ಯಾಸ ಯೋಗ

ನಾಶರಹಿತಯೋಗವಿದನು । ವಿವಸ್ವತಗೆ ನಾನು ಪೇಳ್ದೆ
ನಾ ಶುಭಜ್ಞ ವಿವಸ್ವತನು ಪೇಳ್ದ ಮನುವಿಗೆ ।
ಕ್ಲೇಶರಹಿತ ಮನುವು ಇಕ್ । ಕ್ಷ್ವಾಕುವಿಂಗೆ ಪೇಳ್ದನೆಂದು
ಶ್ರೀಶನು ಭಗವಂತನೆಂದನಿಂತು ಪಾರ್ಥಗೆ ॥ ॥೧॥ 1

ಇಂತು ಪರಂಪರೆಯೊಳಿಂದ । ಪ್ರಾಪ್ತವಾದ ಯೋಗವಿದನು
ಅಂತೆ ರಾಜಋಷಿಗಳೆಲ್ಲ ತಾವು ತಿಳಿದರು ।
ಪಿಂತೆ ಬಹಳಕಾಲದಿಂದ । ಇಹದೆ ಯೋಗವಿದುವು ತಾನು
ಅಂತು ನಷ್ಟವಾಗಿಹೋಗಿ ಇದೆ ಪರಂತಪ ॥ ॥೨॥ 2

ಅದುವೆ ಪುರಾತನದ ಯೋಗ । ನಿನಗೆ ಪೇಳೆಪಟ್ಟುದೀಗ
ಅದನೆ ನೀನು ಎನ್ನಿಮೀಗ ಕೇಳ್ದೆಯರ್ಜುನ ।
ಮುದದ ಭಕ್ತ ನೀನು ಎನಗೆ । ಅಂತೆ ಸಖನು ಆಗಿ ಇರುವೆ
ಅದರಿ ನಿನಗೆ ಪೇಳ್ವೆನಿದ ರಹಸ್ಯದುತ್ತಮ ॥ ॥೩॥ 3

ಈಗ ನಿನ್ನ ಜನ್ಮವಾಗಿ । ಇಹುದು ವಿವಸ್ವತನ ಜನ್ಮ
ವಾಗಿಯದುವೆ ಬಹಳಕಾಲ ಗತಿಸಿಹೋಗಿದೆ ।
ಹೀಗೆ ಇರಲು ಕೃಷ್ಣ ನೀನು । ಮೊದಲು ಅವಗೆ ಪೇಳ್ದೆಯೆಂದು
ಹೇಗೆ ನಾನು ತಿಳಿಯಲೆನುತ ಪಾರ್ಥ ಕೇಳಿದ ॥ ॥೪॥ 4

ನನ್ನ ನಿನ್ನ ಬಹಳ ಜನ್ಮ । ಕಳೆದಿಹವರ್ಜುನನೆ ಕೇಳು
ನಾನು ಬಲ್ಲೆನವನು ಇಲ್ಲ ನೀಂ ಪರಂತಪ । 5
ನಾನು ಅಜನು ಅವ್ಯಯಾತ್ಮ । ಭೂತರೀಶನೆನಿಸಿಕೂಡ
ನನ್ನ ಪ್ರಕೃತಿ ಆತ್ಮಮಾಯೆಯಿಂದ ಜನಿಸುವೆ ॥ ॥೫॥ 6

ಏಗ ಏಗ ಧರ್ಮಗ್ಲಾನಿ । ಯಾಗಧರ್ಮವೃದ್ಧಿಯಹುದೊ
ಆಗಲೆನ್ನ ಆತ್ಮಸೃಷ್ಟಿಗೈವೆ ಭಾರತ । 7
ಹೀಗೆ ಸಾಧುರಕ್ಷಣಕ್ಕೆ । ಮತ್ತೆ ದುಷ್ಟನಾಶನಕ್ಕೆ
ಹಾಗೆ ಧರ್ಮಸ್ಥಾಪನಕ್ಕೆ ಜನಿಪೆ ಯುಗಯುಗ ॥ ॥೬॥ 8

ನನ್ನ ದಿವ್ಯಜನ್ಮಕರ್ಮ । ವನ್ನು ಹೀಗೆ ತತ್ವದಿಂದ
ಚೆನ್ನು ಆಗಿ ಯಾವನವನು ತಾನು ತಿಳಿವನೊ ।
ತನ್ನ ದೇಹ ಬಿಟ್ಟಬಳಿಕ । ಪುನರ್ಜನ್ಮವಿಲ್ಲವವಗೆ
ನನ್ನನೇಯೆ ಸೇರ್ವನವನು ತಿಳಿಯೊ ಅರ್ಜುನ ॥ ॥೭॥ 9

ರಾಗ ಭಯವು ಕ್ರೋಧರಹಿತ । ರಾಗನನ್ಯಭಾವವುಳ್ಳ
ರಾಗಿ ಎನ್ನೊಳಿಟ್ಟು ಮನವ ಶರಣು ಪೊಂದುತ ।
ಹೀಗೆ ಬಹಳ ಯೋಗಿ ಜನರು । ಜ್ಞಾನರೂಪ ತಪದೆ ಎನ್ನ
ಯೋಗಭಾವವನ್ನೆ ಪಡೆದು ಪೂತರಾದರು ॥ ॥೮॥ 10

ಯಾರು ಹೇಗೆ ತಾವು ಎನ್ನ । ಭಜಿಸಿ ಸೇರಲಿಚ್ಛಿಸುವರೊ
ಸೇರಿ ಅವರ ಹಾಗೆ ನಾನು ಬಿಡದೆ ಭಜಿಸುವೆ ।
ಕೋರಿ ಎನ್ನ ಮಾರ್ಗವನ್ನೆ । ಮನುಜರೆಲ್ಲ ವಿಧದೆ ಬಿಡದೆ
ಹಾರಿ ತಾವನುವರ್ತಿಸುತ್ತಲಿಹರು ಪಾರ್ಥನೆ ॥ ॥೯॥ 11

ಕರ್ಮದಲ್ಲಿ ಸಿದ್ಧಿಯನ್ನು । ಕಾಂಕ್ಷಿಸುತ್ತ ಬಿಡದೆ ಕೆಲರು
ಕರ್ಮಜರುಗಳಿಹದೆ ದೇವರುಗಳ ಯಜಿಪರು[15] ।
ಕರ್ಮಗೈಯಲದುವೆ ಕ್ಷಿಪ್ರ । ದಲ್ಲಿ ಮನುಜಲೋಕದಲ್ಲಿ
ಕರ್ಮಸಿದ್ಧಿಯೊದಗಿಬಹುದು ತಿಳಿಯೊ ದಿಟವಿದು ॥ ॥೧೦॥ 12

15. ಯಜಿಪರು = ಪೂಜಿಸುವವರು

ಕರ್ಮಗುಣವಿಭಾಗದಿಂದ । ಚತುರ್ವರ್ಣವೆನ್ನ ಸೃಷ್ಟಿ
ಕರ್ಮಕರ್ತೃವೆನಿಸಿದೆನ್ನ ತಿಳಿ ಅಕರ್ತೃವೆಂ । 13
ಕರ್ಮಲೇಪವಿಲ್ಲವೆನಗೆ । ಕರ್ಮಫಲದೆ ಸ್ಪೃಹೆಯದಿಲ್ಲ
ಕರ್ಮಬಂಧವಿಲ್ಲವಿಂತು ಎನ್ನ ತಿಳಿದಗೆ ॥ ॥೧೧॥ 14

ಏನೆನಿಂತು ತಿಳಿದೆ ಕರ್ಮ । ವಾಯ್ತು ಪೂರ್ವ ಮುಮುಕ್ಷಗಳಿಂ
ನೀನು ಪೂರ್ವಕೃತವದಂತೆ ಕರ್ಮ ಮಾಡೆಲೈ । 15
ಏನು ಕರ್ಮವೇನಕರ್ಮ । ವೆಂದು ಕವಿಗಳಿಗುವೆ ಭ್ರಾಂತಿ
ಏನನರಿತರಶುಭದಿಂದ ಮೋಕ್ಷಿ ಪೇಳ್ವೆನು ॥ ॥೧೨॥ 16

ಕರ್ಮವಾ ವಿಕರ್ಮ ತಾ । ನಕರ್ಮವನ್ನು ತಿಳಿಯಬೇಕು
ಕರ್ಮಗತಿಯು ತಿಳಿಯಲದುವೆ ಬಹಳ ಗಹನವು । 17
ಕರ್ಮದಲ್ಲಕರ್ಮವಾ । ರಕರ್ಮದಲ್ಲಿ ಕರ್ಮಕಾಂಬ
ಕರ್ಮಕೃತ್ತು ಯುಕ್ತನವನೆ ಬುದ್ಧಿಮಾನಿಯು ॥ ॥೧೩॥ 18

ಕರ್ಮಗಳಲಿ ಕಾಮರಹಿತ । ನಾಗಿ ಜ್ಞಾನದಗ್ನಿದಗ್ಧ
ಕರ್ಮದಿಂದಲವನು ಬುಧರ ಮತದೆ ಪಂಡಿತ । 19
ಕರ್ಮಫಲದ ಸಂಗಬಿಟ್ಟ । ನಿತ್ಯತೃಪ್ತ ನಿರಾಶ್ರಯನು
ಕರ್ಮದಲ್ಲಿ ತೊಡಗಿ ಕೂಡ ಮಾಡನೇನನು ॥ ॥೧೪॥ 20

ಇರುತ ತಾ ನಿರಾಶಿಯಾಗಿ । ಸ್ವಾತ್ಮಚಿತ್ತಯುತನು ಆಗಿ
ಸರುವ ಪರಿಗ್ರಹವ ತಾನು ತ್ಯಜಿಸಿದಾತನು ।
ದೊರೆತ ಈ ಶರೀರದಿಂದ । ಕರ್ಮಮಾತ್ರ ಗೈಯಲವನು
ದುರಿತ ಕಿಲ್ಬಿಷಂಗಳನ್ನು ಪೊಂದಲಾರನು ॥ ॥೧೫॥ 21

ತನಗೆ ತಾನೆ ದೊರೆತ ಲಾಭ । ದಿಂದಲಾವ ತುಷ್ಟನಾಗಿ
ಮನದೆ ದ್ವಂದ್ವರಹಿತ ವಿಮತ್ಸರನು ಆಗುತ ।
ಘನದೆ ಮತ್ತೆ ಸಿದ್ಧಿ ತಾನ । ಸಿದ್ಧಿಯೊಳುವೆ ಸಮನು ಆಗಿ
ತನತು ಕಾರ್ಯ ಗೈದರೂ ನಿಬದ್ಧನಲ್ಲವು ॥ ॥೧೬॥ 22

ಮುಕ್ತ ಸಂಗರಹಿತ ಜ್ಞಾನ । ದಲ್ಲಿ ಚಿತ್ತವಿಟ್ಟ ಯಜ್ಞ
ಯುಕ್ತಕರ್ಮಿಗವನ ಕರ್ಮವೆಲ್ಲ ಕಳೆವುದು ।
ಮುಕ್ತ ಕಂಠನಾಗಿ ಪೇಳು । ತಿರುವ ಮಾತನಿದನು ನೀನು
ಯುಕ್ತರೀತಿಯರಿಯೊ ಪಾರ್ಥನೆಂದ ಮಾಧವ ॥ ॥೧೭॥ 23

ಬ್ರಹ್ಮ ತಾನೆ ಅರ್ಪಣವದು । ಬ್ರಹ್ಮ ತಾನೆ ಹವಿಯು ಅಹುದು
ಬ್ರಹ್ಮರೂಪದಗ್ನಿಯೊಳೆಯೆ ಬ್ರಹ್ಮನಾಹುತ ।
ಬ್ರಹ್ಮರೂಪಕರ್ಮದಲ್ಲಿ । ಸಮಾಧಿಸ್ಥ ಪುರುಷನವನು
ಬ್ರಹ್ಮದಲ್ಲೆ ತಾನು ಹೋಗಿ ಸೇರಲರ್ಹನು ॥ ॥೧೮॥ 24

ಬೇರೆ ಯೋಗಿಜನರು ದೇವ । ಪೂಜೆರೂಪಯಜ್ಞವನ್ನೆ
ಪರ್ಯುಪಾಸಿಸುವರು ನೋಡೆ ತಾವು ನಿಷ್ಠೆಯಿಂ ।
ಬೇರೆ ಕೆಲರು ಬ್ರಹ್ಮರೂಪ । ದಗ್ನಿಯಲ್ಲಿ ಯಜ್ಞವನ್ನೆ
ಭೂರಿಯಜ್ಞದಿಂದಲಾಹುತಿಯ ಗೈವರು ॥ ॥೧೯॥ 25

ಅನ್ಯಯೋಗಿಜನರು ತಮ್ಮ । ಶ್ರೋತ್ರವಾದಿ ಇಂದ್ರಿಯಗಳ
ಮಾನ್ಯ ಸಂಯಮಾಗ್ನಿಯಲ್ಲಿ ಹೋಮಗೈವರು ।
ಅನ್ಯರಾದ ಕೆಲರು ತಮ್ಮ । ಶಬ್ದವಾದಿ ವಿಷಯಗಳನು
ಮಾನ್ಯ ಇಂದ್ರಿಯಾಗ್ನಿಯಲ್ಲಿ ಹೋಮಗೈವರು ॥ ॥೨೦॥ 26

ಮತ್ತೆ ಕೆಲರು ಸರ್ವವಾದ । ಇಂದ್ರಿಯಗಳ ಕರ್ಮಗಳನು
ಮತ್ತೆ ಪ್ರಾಣಕರ್ಮಗಳನು ತಾವು ಎಲ್ಲವ ।
ಸತ್ವಯುಕ್ತ ಜ್ಞಾನದೀಪ್ತ । ಆತ್ಮಸಂಯಮದ ಯೋಗ
ನಿತ್ಯದಗ್ನಿಯಲ್ಲಿ ಪೂರ್ಣ ಹೋಮಗೈವರು ॥ ॥೨೧॥ 27

ಹಾಗು ಕೆಲರು ದ್ರವ್ಯಯಜ್ಞ । ತಪೋಯಜ್ಞದಲ್ಲಿ ಮತ್ತೆ
ಯೋಗಯಜ್ಞದಲ್ಲಿ ನಿರತರಾಗಿ ಇರುವರು ।
ಹಾಗು ವ್ರತಾಚಾರಶೀಲ । ಯತಿಗಳಾದ ಕೆಲರು ತಾವು
ಯೋಗ ಸ್ವಾಧ್ಯಾಯ ಜ್ಞಾನಯಜ್ಞಗೈವರು ॥ ॥೨೨॥ 28

ಪ್ರಾಣವಾಯುವನ್ನಪಾನ । ವಾಯುವಿನಲಿ ಹೋಮಿಸುವರು
ಪ್ರಾಣದಲ್ಲಪಾನವನ್ನು ಕೆಲರು ಹಾಗೆಯೆ ।
ಪ್ರಾಣಮತ್ತಪಾನಗತಿನಿ । ರೋಧಿಸುತ್ತಲವರು ಆಗ
ಪ್ರಾಣಾಯಾಮಪರಾಯಣರು ತಾವು ಎನಿಪರು ॥ ॥೨೩॥ 29

ಇನ್ನು ಕೆಲರು ಸದಾಹಾರ । ನಿಯಮಶೀಲ ಯೋಗಿಜನರು
ಮುನ್ನ ಪ್ರಾಣಗಳನು ಪ್ರಾಣಗಳಲಿ ಹೋಮಿಪರ್ ।
ಇನ್ನು ಸರ್ವರಾದ ಇವರು । ಎಲ್ಲ ಯಜ್ಞವಿದರು ಎನಿಸಿ
ಸನ್ನುತದೀ ಯಜ್ಞದಿಂದೆ ಪಾಪಮುಕ್ತರು ॥ ॥೨೪॥ 30

ಯಜ್ಞಶೇಶದಮೃತವುಂಬ । ಎಲ್ಲ ಯೋಗಿಜನರು ತಾವು
ಪ್ರಜ್ಞರಾಗಿ ಬ್ರಹ್ಮಸನಾತನವ ಸೇರ್‍ವರು ।
ಯಜ್ಞ ಹೀನಗವಗೆ ಇಹದ । ಲೋಕಗತಿಯೆ ಇಲ್ಲ ಮತ್ತೆ
ಯಜ್ಞಹೀನಗನ್ಯಲೋಕವೆಲ್ಲಿ ತಾನದು ॥ ॥೨೫॥ 31

ಇಂತು ಬಹಳ ವಿಧದ ಯಜ್ಞ । ಗಳವು ತಾವು ಎಲ್ಲ ನಿಜದೆ
ಅಂತೆ ಬ್ರಹ್ಮಮುಖದೆ ಸುವಿಸ್ತಾರಗೊಂಡಿವೆ ।
ಎಂತು ಅವುಗಳೆಲ್ಲ ಕರ್ಮ । ಜನ್ಯವೆನುತ ತಿಳಿಯೊ ಪಾರ್ಥ
ಇಂತು ತಿಳಿಯುತವನು ನೀನು ಮೋಕ್ಷಪೊಂದುವೆ ॥ ॥೨೬॥ 32

ದ್ರವ್ಯಮಯದ ಎಲ್ಲ ಯಜ್ಞ । ಕಿಂತ ತಾನು ನಿಜದೆ ಶ್ರೇಯ
ದಿವ್ಯಜ್ಞಾನಯಜ್ಞವದುವು ಹೇ ಪರಂತಪ ।
ದಿವ್ಯಜ್ಞಾನ ಯಜ್ಞದಲ್ಲಿ । ಸರ್ವವಾದ ಅಖಿಲ ಕರ್ಮ
ಸುವ್ಯಕುತದೆ ಪಾರ್ಥ ಪರಿಸಮಾಪ್ತಿಗೊಳ್ವುದು ॥ ॥೨೭॥ 33

ಪದದ ವಂದನದೆಯು ಪರಿಯ । ಪ್ರಶ್ನೆಯಿಂದ ಸೇವೆಯಿಂದ
ಲದುವೆ ಜ್ಞಾನವನ್ನು ನೀನು ತಿಳಿಯೊ ಪಾರ್ಥನೆ ।
ಮುದದೆ ತತ್ವದರ್ಶಿಯೆನಿಸಿ । ದಂಥ ಜ್ಞಾನಿಜನರು ತಾವು
ಅದುವೆ ಜ್ಞಾನವನ್ನು ನಿನಗೆ ಬೋಧೆಗೈವರು ॥ ॥೨೮॥ 34

ಯಾವುದನ್ನು ತಿಳಿಯಲಾಗಿ । ಪುನಃ ಹೀಗೆ ಮೋಹವನ್ನು
ಆವ ಪರಿಯು ನೀನು ಪೊಂದಲಾರೆ ಪಾಂಡವ ।
ಯಾವ ತಿಳಿವಿನಿಂದಲಾ ಅ । ಶೇಷಭೂತಗಳನು ನಿನ್ನೊ
ಳಾವ ರೀತಿ ಕಾಂಬೆಯಂತೆ ಕಾಂಬೆ ಎನ್ನೊಳು ॥ ॥೨೯॥ 35

ಪಾಪಿಗಳಲಿ ಪಾಪಿಯಾದ । ರೂವೆ ನೀನು ಸರ್ವರಲ್ಲಿ
ಪಾಪದಧಿಕತಮನು ಎನೆ ಕನಿಷ್ಠನಾದರು ।
ಪಾಪವೆಲ್ಲವನ್ನು ಪೂರ್ಣ । ದಾಟಿ ಕಳೆವೆ ನೀನು ಜ್ಞಾನ
ರೂಪ ನೌಕೆಯಿಂದಲದುವೆ ತಾನು ದಿಟವಿದು ॥ ॥೩೦॥ 36

ಹೇಗೆ ಸಮಿಧೆಗಳನು ಇಂಥ । ನಗಳ ಜ್ವಲಿಸುವಗ್ನಿ ತಾನು
ಸಾಗಿ ಬಿಡದೆ ಪೂರ್ಣ ಭಸ್ಮಗೊಳಿಪುದರ್ಜುನ ।
ಹಾಗೆ ಸರ್ವಕರ್ಮಗಳನು । ಜ್ಞಾನರೂಪದಗ್ನಿ ತಾನು
ವೇಗದಿಂದೆ ಸಾಗಿ ಪೂರ್ಣ ಭಸ್ಮಗೊಳಿಪುದು ॥ ॥೩೧॥ 37

ಇಹದೆ ತಾ ಪವಿತ್ರವಾದ । ವಸ್ತುವದುವು ಜ್ಞಾನ ತಾನು
ಸಹಜವಾಗಿ ಜ್ಞಾನಸದೃಶ ಬೇರೆ ಇಲ್ಲವು ।
ಸಹಜವದನು ಸ್ವಯಂ ಯೋಗ । ಸಂಸಿದ್ಧ ತಾನು ನಿಜದೆ
ಸಹಜ ಕಾಲದಲ್ಲಿ ಆತ್ಮದೊಳಗೆ ಪಡೆವನು ॥ ॥೩೨॥ 38

ಶ್ರದ್ಧೆವಂತ ಸುತತ್ಪರನು ಜಿತೇಂದ್ರಿಯನು ಆದ ಪುರುಷ
ಶುದ್ಧ ಜ್ಞಾನವನ್ನು ತಾನು ಬಿಡದೆ ಪಡೆವನು।
ಸಿದ್ಧಿ ಜ್ಞಾನವಾದ ಮೇಲೆ ಪರಮ ಶಾಂತಿಯನ್ನು ತಾನು
ಸಿದ್ಧವಾಗಿ ಸುಖದೆ ಬೇಗ ಬಿಡದೆ ಪೊಂದುವ॥ ॥೩೩॥ 39

ಅಜ್ಞನಾ ಆಶ್ರದ್ಧನಾದ । ಸಂಶಯಾತ್ಮ ಪುರುಷನವನು
ಪ್ರಜ್ಞೆ ಹೀನನಾಗಿ ವಿನಾಶನವನ್ನೈದುವ ।
ಅಜ್ಞ ಸಂಶಯಾತ್ಮಗವಗೆ । ಇಹದ ಪರದ ಲೋಕವಿಲ್ಲ
ಪ್ರಜ್ಞೆಹೀನಗವಗೆ ಸುಖವು ಲೇಶವಿಲ್ಲವು ॥ ॥೩೪॥ 40

ಯೋಗಬುದ್ಧಿಯಿಂದ ಕರ್ಮ । ವನ್ನು ಕಳೆದ ಪುರುಷನಾತ
ಯೋಗಜ್ಞಾನದಿಂದ ಸಂಶಯವ ಸೀಳ್ದವ ।
ಯೋಗಪುರುಷನಾತ್ಮವಂತ । ನವನನೆಂತು ಕರ್ಮಗಳವು
ಏಗಲೂವೆ ಬಂಧಗೊಳಿಸವೆಲೆ ಧನಂಜಯ ॥ ॥೩೫॥ 41

ಅದುವೆ ಕಾರಣದಜ್ಞಾನ । ಮೂಲಭೂತವೆನಿಪ ನಿನ್ನ
ಹೃದಯ ಸ್ಥಿತವು ಸಂಶಯವನು ಪೂರ್ಣವಾಗಿಯೆ ।
ಇದನು ಜ್ಞಾನಖಡ್ಗದಿಂದ । ಛೇದಿಸುತ್ತಲಿರದೆ ಇನ್ನು
ಅದುವೆ ಯೋಗಗೊಂಡು ಸಿದ್ಧನಾಗು ಭಾರತ ॥ ॥೩೬॥ 42

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ನಾಲ್ಕನೆಯದು**
**ಸಾಂತ ಜ್ಞಾನ ಕರ್ಮಸಂನ್ಯಾಸ ಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ಐದು

# ಕರ್ಮ ಸಂನ್ಯಾಸ ಯೋಗ

ಕರ್ಮಸಂನ್ಯಾಸವನ್ನು । ಪುನಃ ಮತ್ತೆ ಯೋಗವನ್ನು
ಕರ್ಮಜ್ಞಾನಿ ಕೃಷ್ಣ ನೀ ಪ್ರಶಂಸೆಗೈಯುವೆ ।
ಧರ್ಮದೇತರಿಂದ ಶ್ರೇಯ । ವದರೊಳೊಂದ ಸುನಿಶ್ಚಿತದೆ
ಮರ್ಮಬಿಡಿಸಿ ಪೇಳು ಎನಗೆ ಎಂದನರ್ಜುನ ॥ ॥೧॥ 1

ಉಭಯವಾದ ಸಂನ್ಯಾಸ । ಮತ್ತೆ ಕರ್ಮಯೋಗವದುವು
ಉಭಯಗಳುವೆ ಶ್ರೇಯಕರವು ಕೇಳೊ ಅರ್ಜುನ ।
ಉಭಯಗಳೊಳು ಕರ್ಮಸಂ । ನ್ಯಾಸಕಿಂತ ಕರ್ಮಯೋಗ
ಶುಭವಿಶೇಷವದೆನುತ ಭಗವಂತ ಪೇಳ್ದನು ॥ ॥೨॥ 2

ಯಾವನವನು ದ್ವೇಷಗೈವು । ದಿಲ್ಲ ಕಾಂಕ್ಷೆಗೈವುದಿಲ್ಲ
ಭಾವಿಸವನೆ ನಿತ್ಯಸಂನ್ಯಾಸಿಯೆಂಬುದ ।
ಯಾವನಿಹನೊ ದ್ವಂದ್ವರಹಿತ । ನಾಗಿ ಅವನೆ ಮಹಾಬಾಹು
ಓವಿ ಸುಖದೆ ಬಂಧದಿಂದೆ ಮುಕ್ತನಾಗುವ ॥ ॥೩॥ 3

ಯೋಗ ಸಾಂಖ್ಯಗಳನು ಬಾಲ । ರೆನುವರವರು ಬೇರೆ ಬೇರೆ
ಯೋಗವರಿತ ಪಂಡಿತರುಗಳೆನ್ನರೆಂದಿಗು ।
ಯೋಗವೆರಡರೊಂದರಲ್ಲಿ । ಒಳಿತು ಸ್ಥಿತಿಯೊಳಿರುವ ಪುರುಷ
ಯೋಗ ಫಲವ ಪಡೆವನವನು ದಿಟವಿದೆಂದಿಗು ॥ ॥೪॥ 4

ಸ್ಥಾನವಾವುದನ್ನು ಪಡೆವ । ನವನು ಸಾಂಖ್ಯದಿಂದಲಲ್ಲಿ
ಸ್ಥಾನವದುವೆ ಕರ್ಮಯೋಗದಿಂದ ಗಮ್ಯವು ।
ಈ ನಿದಾನವರಿತದಾವ । ಸಾಂಖ್ಯ ಮತ್ತೆ ಯೋಗವನ್ನು
ಮಾನದೊಂದೆನುತ್ತ ಕಾಂಬನವನೆ ಕಾಂಬನು ॥ ॥೫॥ 5

ಯೋಗರಹಿತ ಸಂನ್ಯಾಸ । ದುಃಖಸಾಧ್ಯ ಮಹಾಬಾಹು
ಯೋಗಯುಕ್ತ ಮುನಿಯು ಉರದೆ ಬ್ರಹ್ಮನೈದುವ । 6
ಯೋಗಯುಕ್ತ ವಿಶುದ್ಧಾತ್ಮ । ವಿಜಿತ ಆತ್ಮ ಜಿತೇಂದ್ರಿಯನು
ಆಗೆ ಸರ್ವಭೂತಾತ್ಮ ಕ್ರಿಯದಲಿಪ್ತನು ॥ ॥೬॥ 7

ನಾನು ಕಿಂಚಿದೇನ ಮಾಡೆ । ನೆನುತ ತತ್ವವಿದನು ಯುಕ್ತ
ತಾನು ಮನದೆ ಭಾವಿಸಲುವೆ ಬೇಕು ನಿಶ್ಚಿತ ।
ಏನು ನೋಡಿ ಕೇಳಿ ಮುಟ್ಟಿ । ಮೂಸಿ ತಿನ್ನುವಾಗ ಮತ್ತೆ
ತಾನು ನಡೆದು ಮಲಗಿ ಉಸಿರನಾಡುವಾಗಲು ॥ ॥೭॥ 8

ನುಡಿಯುವಾಗ ವಿಸರ್ಜನೆಯ । ಮಾಡುವಾಗ ಗ್ರಹಿಸುವಾಗ
ಬಿಡದೆ ಕಣ್ಣರೆಪ್ಪೆ ಮುಚ್ಚಿ ತೆರೆಯುವಾಗಲು ।
ಪಡೆದ ತನ್ನ ಇಂದ್ರಿಯಗಳು । ಇಂದ್ರಿಯಾರ್ಥವಿಷಯಗಳಲಿ
ಬಿಡದೆ ವರ್ತಿಸುತ್ತಲಿಹವು ಎನುತ ಭಾವಿಸಿ ॥ ॥೮॥ 9

ಎಲ್ಲ ಕರ್ಮಗಳನು ಬ್ರಹ್ಮ । ನಲ್ಲಿ ಅರ್ಪಿಸುತ್ತಲಾವ
ನೆಲ್ಲ ಸಂಗತ್ಯಜಿಸಿ ತನ್ನ ಕರ್ಮ ಮಾಳ್ಪನೊ ।
ಫುಲ್ಲಪದ್ಮಪತ್ರ ಸಲಿಲ । ಲಿಪ್ತವಾಗದೆಂತೊ ಅಂತೆ
ಸಲ್ಲುತವನು ಪಾಪದಿಂದ ಲಿಪ್ತನಾಗನು ॥ ॥೯॥ 10

ಕಾಯದಿಂದ ಮನಸಿನಿಂದ । ಬುದ್ಧಿಯಿಂದ ಮತ್ತೆಯಲ್ಲಿ
ಪಾಯುವಾದಿ ಕೇವಲಿಂದ್ರಿಯಗಳಿನಿಂದಲು ।
ಧ್ಯೇಯದಿಂದ ಸಂಗತ್ಯಜಿಸಿ । ಆತ್ಮಶುದ್ಧಿಗಾಗಿ ತಮ್ಮ
ಆಯುವೆಲ್ಲ ಯೋಗಿಜನರು ಕರ್ಮ ಮಾಳ್ಪರು ॥ ॥೧೦॥ 11

ಯುಕ್ತ ತಾನು ಕರ್ಮಫಲವ । ತ್ಯಜಿಸುತಂತಸಕ್ತನಾಗಿ
ಯುಕ್ತನಿಷ್ಠೆಯಿಂದ ಪ್ರಾಪ್ತ ಶಾಂತಿ ಪಡೆವನು ।
ಯುಕ್ತನಲ್ಲದವನಯುಕ್ತ । ಕಾಮನೆಯಲಿತೊಡಗಿ ಫಲದೆ
ಸಕ್ತನಾಗಿ ಕರ್ಮದಲಿ ನಿಬದ್ಧನಪ್ಪನು ॥ ॥೧೧॥ 12

ಸರುವ ಕರ್ಮಗಳನು ಮನದೆ । ಸಂನ್ಯಸಿಸುತಲಲ್ಲಿ ತಾನು
ಸರುವ ಇಂದ್ರಿಯಗಳ ವಶಿಯು ಸುಖದಲಿರುವನು ।
ಮೆರೆವ ನವದ್ವಾರಪುರದೊ । ಳಲ್ಲಿ ದೇಹಿಯಾದ ತಾನು
ಇರುತಲೇನ ಮಾಡನವನು ಅಂತೆ ಮಾಡಿಸ ॥ ॥೧೨॥ 13

ಇಹದ ಜನಕೆ ಕರ್ತೃತನವ । ನಂತೆ ಕರ್ಮಗಳನು ತಾನು
ಸಹಜವಾಗಿ ಸೃಜಿಪುವುದಿಲ್ಲ ಪ್ರಭುವು ಎಂದಿಗು ।
ಇಹದೆ ಕರ್ಮಫಲದ ಸಂ । ಯೋಗ ಕೂಡ ಮಾಳ್ಪುದಿಲ್ಲ
ಸಹಜದಾ ಸ್ವಭಾವ ತಾ ಪ್ರವರ್ತಿಸುತ್ತಿದೆ ॥ ॥೧೩॥ 14

ಯಾರ ಪಾಪವನ್ನು ವಹಿಪ । ನಲ್ಲ ಅಂತೆ ಪುಣ್ಯವನ್ನು
ಹಾರಿ ವಹಿಪನಲ್ಲ ತಾನು ವಿಭುವು ಎಂದಿಗು ।
ತೋರುವಜ್ಞಾನದಿಂದ । ಲಾವೃತವು ಜ್ಞಾನವದುವು
ಮೀರಿದಿದರಿನೆಲ್ಲ ಪ್ರಾಣಿ ಮೋಹಗೊಂಡಿದೆ ॥ ॥೧೪॥ 15

ಯಾರ ಅಜ್ಞಾನವದುವು । ಆತ್ಮಜ್ಞಾನದಿಂದ ತಾನು
ಪೂರ ನಾಶವಾಗಿ ಹೋಗಿ ಇರುವುದರ್ಜುನ ।
ತೋರ ಜ್ಞಾನವವರದಿದುವು । ಸೂರ್ಯನಂತೆ ತಾನು ಆಗ
ತೋರಿ ಪರದ ತತ್ವ ಸುಪ್ರಕಾಶಗೊಳಿಪುದು ॥ ॥೧೫॥ 16

ಅದುವೆ ಪರದ ತತ್ವದಲ್ಲಿ । ಬುದ್ಧಿಯಾತ್ಮವುಳ್ಳರಾಗಿ
ಅದರೊಳಲ್ಲಿ ನಿಷ್ಠಪರಾಯಣರು ಎನಿಪರು ।
ಉದಯವಾದ ಜ್ಞಾನದಿಂದ । ಪಾಪಮುಕ್ತರಾದ ಅವರು
ಅದುವೆ ಪುನರ್ಜನ್ಮರಹಿತ ಮುಕ್ತಿಪಡೆವರು ॥ ॥೧೬॥ 17

ವಿದ್ಯೆ ವಿನಯಶೀಲ ವಿಪ್ರ । ಪಶುವು ಹಸ್ತಿ ಶ್ವಾನ ಶ್ವಪಚ
ರಾದ್ಯರಲ್ಲಿ ದೃಷ್ಟಿಸಮದೊಳಿಹರು ಪಂಡಿತರ್ । 18
ಅದ್ಯ ಸ್ವರ್ಗಪ್ರಾಪ್ತರಹರು । ಸಮದ ಸ್ಥಿತಿಯ ಮನದೆ ಬ್ರಹ್ಮ
ಸದ್ಯ ಸಮವದೋಷವದರಿ ಸ್ಥಿತರು ಬ್ರಹ್ಮದೆ ॥ ॥೧೭॥ 19

ಪಡುವುದಿಲ್ಲ ಹರ್ಷವನ್ನು । ಪ್ರಿಯದಪ್ರಾಪ್ತಿಯಿಂದ ತಾನು
ಪಡುವುದಿಲ್ಲ ದುಃಖವನಪ್ರಿಯದ ಪ್ರಾಪ್ತಿಯಿಂ ।
ದೃಢದೆ ಸ್ಥಿರದ ಬುದ್ಧಿಯುಳ್ಳ । ಅಸಂಮೂಢ ಬ್ರಹ್ಮವಿದನು
ಬಿಡದೆ ಬ್ರಹ್ಮನಲ್ಲಿ ತಾನು ಸ್ಥಿತನು ಆದವ ॥ ॥೧೮॥ 20

ಸ್ಪರ್ಶವಾದಿ ಬಾಹ್ಯವಿಷಯ । ದಲ್ಲಸಕ್ತನಾದ ಪುರುಷ
ಹರ್ಷಸುಖವದಾವುದಾತ್ಮದಲ್ಲಿ ಪೊಂದುವ ।
ಸ್ಪರ್ಶಲೇಪವಿರದ ಬ್ರಹ್ಮ । ಯೋಗಯುಕ್ತನಾಗಲವನು
ಹರ್ಷಸುಖವದನ್ನೆ ಅಕ್ಷಯದಲಿ ಪೊಂದುವ ॥ ॥೧೯॥ 21

ಇದುವೆ ಬಾಹ್ಯಸ್ಪರ್ಶದುದಯ । ಭೋಗಗಳವು ತಾವು ಎಲ್ಲ
ಅದುವೆ ದುಃಖಮೂಲವಾಗಿ ಇರುವುವರ್ಜುನ ।
ಇದರಿನಿಂದಲವುಗಳೆಲ್ಲ । ಆದಿ ಅಂತ್ಯವುಳ್ಳವೆನಿಪ
ವದರಿನವುಗಳಲ್ಲಿ ಬುಧರು ರಮಿಪುದಿಲ್ಲವು ॥ ॥೨೦॥ 22

ಇನ್ನು ದೇಹವಂತ್ಯಗೊಳ್ವ । ಮುನ್ನವಿದೊರಿಳಿಲ್ಲಿ ಯಾರು
ಬನ್ನ ಕಾಮ ಕ್ರೋಧದುದಯ ವೇಗವೆಲ್ಲವ ।
ಮುನ್ನ ಗೆಲಲು ಶಕ್ತನಾದ । ರಾಗಲವನು ಇಹದೆ ಇಲ್ಲಿ
ಚೆನ್ನ ಬುದ್ಧಿಯೋಗಯುಕ್ತ ಸುಖಿಯು ನರನವ ॥ ॥೨೧॥ 23

ತನ್ನ ಒಳಗೆ ಸುಖಿಪನಾವ । ತನ್ನ ಒಳಗೆ ಶಾಂತನಾವ
ತನ್ನ ಒಳಗೆ ಜ್ಞಾನಜ್ಯೋತಿ ಕಾಂಬನಾವನು ।
ಚೆನ್ನ ಬುದ್ಧಿಯೋಗಿಯವನು । ಬ್ರಹ್ಮಭೂತನಾಗಿ ಮತ್ತೆ
ಸನ್ನುತದಾ ಬ್ರಹ್ಮನಿರ್ವಾಣ ಪಡೆವನು ॥ ॥೨೨॥ 24

ನೀಗಿ ಪಾಪ ದ್ವೈಧರಹಿತ । ರಾತ್ಮವಂತರೆನಿಸಿದವರು
ರಾಗರಹಿತ ಸರ್ವಭೂತಹಿತದೆ ರತರು ತಾವ್।
ಯೋಗಯುಕ್ತ ಋಷಿಗಳವರು । ಬಿಡದೆ ಎಲ್ಲ ನಿಜದೆ ಇಹದೆ
ಸಾಗಿ ಬ್ರಹ್ಮನಿರ್ವಾಣ ಪದವನ್ನೈದುವರ್ ॥ ॥೨೩॥ 25

ಎಲ್ಲ ಕಾಮಕ್ರೋಧ ತ್ಯಜಿಸಿ । ಚಿತ್ತದೇಕದಗ್ರಬುದ್ಧಿ
ಯಲ್ಲಿ ಸ್ಥಿತರು ಆದ ಚೇತವಂತ ಯತಿಗಳ ।
ಸಲ್ಲುವಾತ್ಮವಂತರಾದ । ಆತ್ಮಜ್ಞಾನಿ ಇವರ ಸುತ್ತ
ಲಲ್ಲೆ ಬ್ರಹ್ಮನಿರ್ವಾಣಮೆಸೆಯುತಿರುವುದು ॥ ॥೨೪॥ 26

ಎಲ್ಲ ಸ್ಪರ್ಶವಾದಿ ಬಾಹ್ಯ । ವಿಷಯಗಳನು ಬಹಿಷ್ಕರಿಸಿ
ಅಲ್ಲಿ ಕಣ್ಣದಿಟ್ಟಿಯಿಟ್ಟು ಭ್ರೂವ ಮಧ್ಯದಿ ।
ಅಲ್ಲೆ ನಾಸಿಕದಲಿ ಅಲೆವ । ಪ್ರಾಣವನ್ನಪಾನವನ್ನು
ನಿಲ್ಲದೇಯೆ ಸಮವಗೊಳಿಸಿ ಸಾಧಿಸುತ್ತಲಿ ॥ ॥೨೫॥ 27

ಎಲ್ಲ ಇಂದ್ರಿಯಗಳ ಮತ್ತೆ । ಮನವನದುವೆ ಬುದ್ಧಿವಶವ
ನೆಲ್ಲಗೈದ ಮುನಿಯು ಮೋಕ್ಷ ಪರಾಯಣನವ ।
ಎಲ್ಲ ಇಚ್ಛೆಭಯವು ಕ್ರೋಧ । ಗಳನು ಕಳೆದು ಬಿಸುಟ ಅವನು
ಎಲ್ಲ ರೀತಿ ಸದಾ ಮುಕ್ತನಾಗಿ ಇರುವನು ॥ ॥೨೮॥ 28

ಎಲ್ಲ ಯಜ್ಞತಪದ ಭೋಕ್ತೃ । ಸರ್ವಲೋಕ ಮಹೇಶ್ವರನು
ಎಲ್ಲ ಭೂತಗಳಿಗೆ ಸುಹೃತು ಆದ ಎನ್ನನು ।
ಇಲ್ಲೆ ಇಂತು ತಿಳಿದು ಮನುಜ । ಇಹದೆ ನಿಜದೆ ಬಿಡದೆ ತಾನು
ಎಲ್ಲ ರೀತಿ ನಿತ್ಯವಾದ ಶಾಂತಿ ಪಡೆವನು ॥ ॥೨೭॥ 29

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಐದನೆಯದು**
**ಸಾಂತಗೊಂಡ ಕರ್ಮ ಸಂನ್ಯಾಸಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಆರು

# ಆತ್ಮಸಂಯಮ ಯೋಗ

ಕರ್ಮಫಲವನಾಶ್ರಯಿಸದೆ । ಕಾರ್ಯ ಕರ್ಮಗೈವನಾವ
ಕರ್ಮಸಂನ್ಯಾಸಿಯವನೆ ಮತ್ತೆ ಯೋಗಿಯು ।
ಕರ್ಮಹೀನನಗ್ನಿ ಹೀನ । ಯೋಗಿ ಸಂನ್ಯಾಸಿಯಲ್ಲ
ಮರ್ಮವಿದರಿಯೆನುತಲಿ ಭಗವಂತ ಪೇಳ್ದನು ॥ ॥೧॥ 1

ಯಾವುದನ್ನು ಸಂನ್ಯಾಸ । ವೆಂದು ಪೇಳ್ವರದನೆ ನೀನು
ಭಾವಿಸುವುದು ದಿಟದೆ ಯೋಗವೆನುತ ಪಾಂಡವ ।
ಯಾವನವನು ಸಂನ್ಯಸಿಸ । ನೊ ತಾನು ಸಂಕಲ್ಪವನ್ನು
ಭಾವಿಸವನು ಯೋಗಿಯಾಗಲಾರನೆಂದಿಗು ॥ ॥೨॥ 2

ಯೋಗ ಸಾಧಿಪಂಥ ಮುನಿಗೆ । ಕರ್ಮವೆ ಕಾರಣವು ಎನಲು
ಯೋಗ ಸಾಧನವದೆಂದು ಪೇಳೆ ಪಡುವುದು ।
ಯೋಗದಲ್ಲಿ ತೊಡಗಿದಂಥ । ಅದೇ ಮುನಿಗೆ ಆಗ ತನ್ನ
ಯೋಗತತ್ಪರತೆಗದುವೆ ಶಮವು ಕಾರಣ ॥ ॥೩॥ 3

ಏಗ ಮನುಜ ತಾನು ಎಲ್ಲ । ಇಂದ್ರಿಯಾರ್ಥವಿಷಯಗಳಲಿ
ಹಾಗೆ ಕರ್ಮಗಳಲಿ ಸಕ್ತನಾಗದಿರುವನೊ ।
ಹಾಗೆ ಮತ್ತೆ ಸರ್ವ ಸಂ । ಕಲ್ಪ ಸಂನ್ಯಾಸಿಯಹನೊ
ಆಗಲವನು ನಿಜದೆ ಯೋಗಾರೂಢನೆನಿಪನು ॥ ॥೪॥ 4

ಆತ್ಮನನ್ನು[16] ಆತ್ಮದಿಂದ । ಉ[17]ದ್ಧರಿಸಿಕೊಳ್ಳಬೇಕು
ಆತ್ಮವನ್ನು [18]ತಾನೆ ಕೊಲ್ಲಬಾರದೆಂದಿಗು ।
ಆತ್ಮವದುವೆ[19] ಆತ್ಮನಿಂಗೆ[20] । ಬಂಧುವಿಹುದು ತಿಳಿಯೆ ನಿಜದೆ
ಆತ್ಮವದುವೆ ಆತ್ಮನಿಂಗೆ ಶತ್ರುವಿರುವುದು ॥ ॥೫॥ 5

ಆತ್ಮನಿಂದ[21]ಲಾತ್ಮವನ್ನು[22] । ಗೆದ್ದ ಆತ್ಮವಂತನಿಂಗೆ
ಆತ್ಮವದುವು ನಿಜದೆ ಬಂಧುವಾಗಿ ಇರುವುದು ।
ಆತ್ಮಹೀನನೆನಿಪ ಆ । ಅನಾತ್ಮನಿಂಗೆ ಆತ್ಮವದುವು
ಆತ್ಮಶತ್ರು ವರ್ತಿಸುವುದು ಶತ್ರುಭಾವದೆ ॥ ॥೬॥ 6

ಆತ್ಮವನ್ನು[23] ಗೆಲಿದ ತಾ । ಪ್ರಶಾಂತ ನರನ ಶ್ರೇಷ್ಠನಾದ
ಆತ್ಮನೆಲ್ಲ[24] ಎಡೆಯು ಸಮದ ಸ್ಥಿತಿಯೊಳಿರುವನು ।
ಆತ್ಮವಂತನವನು ಶೀತ । ಉಷ್ಣ ಸುಖವು ದುಃಖಗಳಲಿ
ಸ್ವಾತ್ಮಮಾನದೊಳಪಮಾನದೊಳುವೆ ಸಮನಿಹ ॥ ॥೭॥ 7

ಜ್ಞಾನವಿಜ್ಞಾನದಾತ್ಮ । ತೃಪ್ತಿ ಪಡೆದು ಕೂಟಸ್ಥ[25]
ತಾನು ಆಗಿ ವಿಜಿತ ಇಂದ್ರಿಯಗಳ ಪಡೆದವ ।
ಮಾನದಿಂದ ಲೋಷ್ಟವಶ್ಮ । ಕಾಂಚನಗಳ ಸಮದೆ ಎಣಿಪ
ಮಾನಿ ಬುದ್ಧಿಯೋಗಿಯವನೆ ಯುಕ್ತನೆನಿಪನು ॥ ॥೮॥ 8

ಯಾರು ಸುಹೃದನಲ್ಲಿ ಮಿತ್ರ । ನಲ್ಲಿ ಉದಾಸೀನನಲ್ಲಿ
ಜಾರುವ ಮಧ್ಯಸ್ಥ ದ್ವೇಷಿ ಬಂಧುಗಳಲಿಯು ।
ಮೀರಿ ಸಾಧುಗಳಲಿ ಮತ್ತೆ । ಪಾಪಿಗಳಲಿ ಅಂತೆ ತಾನು
ತೋರ ಸಮದ ಬುದ್ಧಿಯುಳ್ಳನವನೆ ಶ್ರೇಷ್ಠನು ॥ ॥೯॥ 9

16. ಆತ್ಮನನ್ನು = ಜೀವಾತ್ಮನನ್ನು
17. ಆತ್ಮದಿಂದಲಿ = ಇಂದ್ರಿಯಗಳಿಂದ
18. ಆತ್ಮವನ್ನು = ಇಂದ್ರಿಯಗಳನ್ನು
19. ಆತ್ಮವು = ಇಂದ್ರಿಯಗಳು
20. ಆತ್ಮನಿಂಗೆ = ಜೀವಾತ್ಮನಿಗೆ
21. ಆತ್ಮನಿಂದ = ಜೀವಾತ್ಮನಿಂದ
22. ಆತ್ಮವನ್ನು = ಇಂದ್ರಿಯಗಳನ್ನು
23. ಆತ್ಮವನ್ನು = ಇಂದ್ರಿಯಗಳನ್ನು
24. ಆತ್ಮನೆಲ್ಲ = ಜೀವಾತ್ಮನು
25. ಕೂಟಸ್ಥ = ಸೇರಿರುವ

ಯೋಗಿತಾನು ಅದೇಕಾಂತ । ಸ್ಥಾನದಿರುತ ಅದೇಕಾಕಿ
ಯಾಗಿ ಚಿತ್ತಮನಸನಿಂದ್ರಿಯಗಳನೆಲ್ಲವ ।
ಹಾಗೆ ವಶವಗೈದ । ಪರಿಗ್ರಹನು ತಾ ನಿರಾಶಿಯಾಗಿ
ಯೋಗದಲ್ಲಿ ನಿರತನಾಗಬೇಕು ಸಂತತ ॥ ॥೧೦॥ 10

ತೀರ ಎತ್ತರವದು ಅಲ್ಲ । ತೀರ ತಗ್ಗು ಅಲ್ಲದಂಥ
ಸಾರ ಶುಚಿಯ ಸ್ಥಾನದಲ್ಲಿ ವಸ್ತ್ರ ಹಾಸುತ ।
ಹರವಿ ಮೇಲೆ ಕೃಷ್ಣ ಅಜಿನ । ಮೇಲೆ ಕುಶವ ಹರವುತಾಗ
ಸ್ಥಿರದ ಮನಸಿನಿಂದಲಾತ್ಮ ಪ್ರತಿಷ್ಠಾಪಿಸಿ ॥ ॥೧೧॥ 11

ಅಲ್ಲಿ ಅದೇಕಾಗ್ರಮನದೆ । ಚಿತ್ತವಿಂದ್ರಿಯಗಳ ಕ್ರಿಯೆಯ
ನಿಲ್ಲಿಸುತ್ತ ತಾನು ಯತ್ನದಿಂದಲಲ್ಲಿಯೆ ।
ಸಲ್ಲುವಾಸನದಲಿ ಕುಳಿತು । ಆತ್ಮಶುದ್ಧಿಗಾಗಿ ತಾನು
ನಿಲ್ಲದೇಯೆ ಯೋಗವಭ್ಯಸಿಸಲು ಬೇಕೆಲ್ಲೈ ॥ ॥೧೨॥ 12

ಸಮದ ರೇಷೆಯಲ್ಲಿ ಧರಿಸಿ । ಕಾಯಶಿರಗ್ರೀವಗಳನು
ಸಮದೆ ತಾನು ಅಚಲನಾಗಿ ಸ್ಥಿರನು ಆಗುತ ।
ವಿಮಲ ಭಾವದಿಂದೆ ನಾಸಿ । ಕಾಗ್ರದಲ್ಲಿ ದೃಷ್ಟಿಯಿಟ್ಟು
ತಮವಲೋಕಿಸದೆಯೆ ತನ್ನ ಸುತ್ತ ದಿಶೆಗಳ ॥ ॥೧೩॥ 13

ಮತ್ತೆ ತಾ ಪ್ರಶಾಂತ ಆತ್ಮ । ನಾಗಿ ಭಯವಿದೂರನಾಗಿ
ಸತ್ಯ ಬ್ರಹ್ಮಚರ್ಯವ್ರತದೆ ಸ್ಥಿತನು ಆಗುತ ।
ಸತ್ವದಿಂದ ಮನವ ಸಂಯ । ಮಿಸುತ ಚಿತ್ತವೆನ್ನೊಳಿಟ್ಟು
ನಿತ್ಯಯುಕ್ತ ಕೂಡಬೇಕು ನನ್ನ ಧ್ಯಾನದೆ ॥ ॥೧೪॥ 14

ಇಂತು ಸದಾ ಆತ್ಮನಲ್ಲಿ । ನಿರತನಾದ ಯೋಗಿ ತಾನು
ಅಂತು ಒಡನೆ ನಿಯತ ಮನಸಿನವನು ಆದವ ।
ಅಂತೆ ತಾನು ಎನ್ನೊಳಿರುವು । ದಾದ ಅಚಲ ಸ್ಥಿತಿಯ ಸ್ಥಿರದ
ಶಾಂತಿ ನಿರ್ವಾಣ ಪರಮ ಪದವಿ ಪಡೆವನು ॥ ॥೧೫॥ 15

ಅತಿಯಲುಂಬುವವಗೆ ಮತ್ತೆ । ಏನು ಉಣ್ಣದವಗು ಕೂಡ
ಅತಿಯ ಸ್ವಪ್ನಶೀಲನೆನಿಸಿದವಗು ಮತ್ತೆಯು ।
ಅತಿಯ ಜಾಗೃತನಿಗು ಸಹಿತ । ಯೋಗಸಿದ್ಧಿಯಿಲ್ಲವದುವು
ಮಿತಿಯ ಮೀರಿದಿವರುಗಳಿಗೆ ತಿಳಿಯೊ ಅರ್ಜುನ ॥ ॥೧೬॥ 16

ಯುಕ್ತವಾದ ಸದಾಹಾರ । ವಾ ವಿಹಾರವುಳ್ಳವನಿಗೆ
ಯುಕ್ತ ಚೇಷ್ಟೆ ಕರ್ಮಗಳಲಿ ಉಳ್ಳ ಮನುಜಗೆ ।
ಯುಕ್ತ ಸ್ವಪ್ನಶೀಲ ಜಾಗೃ । ತಂಗೆ ಅವಗೆ ತಿಳಿಯಲದುವು
ಉಕ್ತ ಯೋಗವಹುದು ತಾನು ದುಃಖಹೀನವು ॥ ॥೧೭॥ 17

ಯಾವ ಸಮಯದಲ್ಲಿ ನಿಯತ । ಗೊಳಿಸಿದಂಥ ಚಿತ್ತವದುವು
ಓವಿಯಾತ್ಮನಲ್ಲಿ ತಾನು ಸ್ಥಿರತೆ ಪಡೆವುದೊ ।
ಆವ ಮನುಜ ಎಲ್ಲ ಕಾಮ । ನೆಯಲಿ ಸ್ಪೃಹತೆಯಿಲ್ಲದಿಹನೊ
ಭಾವಿಸಲುವೆಯವನೆ ಯುಕ್ತನೆನಿಪನಾಗಲು ॥ ॥೧೮॥ 18

ವಾತಹೀನವಾದ ಸ್ಥಾನ । ದಲ್ಲಿ ಇರುವ ದೀಪವದುವು
ವೀತಚಲನವುಳ್ಳದಾಗಿ ಹೇಗೆ ಇರುವುದೊ ।
ರೀತಿಯಿದೇ ಉಪಮೆ ತಾನು । ಆತ್ಮಯೋಗಯುಕ್ತನಾಗಿ
ಚಿತ್ತನಿಯತನಾದ ಯೋಗಿಗವಗೆ ಸಲ್ವುದು ॥ ॥೧೯॥ 19

ತನ್ನ ಯೋಗಸೇವೆಯಿಂ ನಿ । ರುದ್ಧಗೊಂಡ ಚಿತ್ತವದುವು
ಇನ್ನು ಯಾವುದರೊಳುಪರಮೆಯನ್ನು ಪಡೆವುದೊ ।
ಇನ್ನು ಯಾವುದರೊಳು ಆತ್ಮ । ದಿಂದ[26]ಲಾತ್ಮನನ್ನು [27]ಕಂಡು
ತನ್ನ ಆತ್ಮದಲ್ಲಿ[28] ತಾನೆ ತುಷ್ಟಿಗೊಂಬನೊ ॥ ॥೨೦॥ 20

ಅತೀಂದ್ರಿಯವು ಅದ ಬುದ್ಧಿ । ಯಿಂದ ಗ್ರಾಹ್ಯವಾದ ಯಾವ
ಅತಿಯ ಶ್ರೇಷ್ಠಸುಖವ ಸ್ವಾನುಭವವ ಗೈವನೊ ।
ಸ್ಥಿತನು ಯಾವುದರೊಳು ಆಗಿ । ಅರಿತಮೇಲೆ ತತ್ವದಿಂದ
ಚ್ಯುತನು ಆಗಲಾರ ಯೋಗಿ ತಾನು ಎಂದಿಗು ॥ ॥೨೧॥ 21

ಯಾವುದದುವು ಲಭ್ಯವಾದ । ಬಳಿಕ ಬೇರೆ ಲಾಭವನ್ನು
ಭಾವಿಸನವ ಮತ್ತೆ ಅದಕ್ಕಿಂತ ಅಧಿಕವ ।
ಯಾವುದರೊಳು ಸ್ಥಿತನು ಆಗಿ । ಇಹನೊ ಅವನು ದೊಡ್ಡದಾದ
ರಾವ ದುಃಖದಿಂದ ಕೂಡ ವಿಚಲನಾಗನೊ ॥ ॥೨೨॥ 22

26. ಆತ್ಮನಿಂದ = ಬುದ್ಧಿಯಿಂದ
27. ಆತ್ಮನನ್ನು = ಪರಮಾತ್ಮನನ್ನು
28. ಆತ್ಮದಲ್ಲಿ = ತನ್ನಲ್ಲಿ

ಅದುವೆ ದುಃಖ ಸಂಯೋಗ । ರಹಿತ ಸ್ಥಿತಿಯು ಎಂಬುದನ್ನು
ಅದರ ಹೆಸರೆ ಯೋಗವದನೆ ತಿಳಿಯ ಬೇಕೆಲ್ಲೈ ।
ಅದುವೆ ಯೋಗವನಿರ್ವಿಣ್ಣ । ಚಿತ್ತದಿಂದ[29] ಯುಕ್ತವಾಗಿ
ಅದುವೆ ಸುನಿಶ್ಚಯದೆ ಯೋಕ್ತವಾಗ ಬೇಕೆಲ್ಲೈ[30] ॥ ॥೨೩॥ 23

ಮಾನಸ ಸಂಕಲ್ಪದಿಂದ । ಹುಟ್ಟಿದೆಲ್ಲ ಕಾಮನೆಗಳ
ತಾನಶೇಷವಾಗಿಯವನು ಬಿಟ್ಟುಬಿಡುತಲಿ ।
ತಾನು ಮನಸಿನಿಂದಲೇಯೆ । ಇಂದ್ರಿಯ ಸಮುದಾಯವನ್ನು
ತಾನೆ ಎಲ್ಲ ಕಡೆಗಳಿಂದ ನಿಯಮಿಸುತ್ತಲಿ ॥ ॥೨೪॥ 24

ಮೆಲ್ಲಮೆಲ್ಲನೇಯೆ ಯೋಗಿ । ಧೃತಿಯುಗೊಂಡ ಬುದ್ಧಿಯಿಂದ
ನಿಲ್ಲದೇಯೆ ಉಪರಮೆಯನು[31] ಸಾಧಿಸುತ್ತಲಿ ।
ಅಲ್ಲಿ ಮನವ ಆತ್ಮಸಂಸ್ಥೆ । ಯುಳ್ಳದಾಗಿ ಮಾಡಿ ತಾನು
ಎಲ್ಲು ಕಿಂಚಿತನ್ನು ಚಿಂತೆ ಗೈಯದಿರುತಲಿ ॥ ॥೨೫॥ 25

ಎತ್ತಣೆತ್ತ ಚರಿಪುದದುವು । ಚಂಚಲದಸ್ಥಿರದ ಮನವು
ಅತ್ತಣತ್ತೆ ನಿಯಮಿಸಾತ್ಮವಶಕೆ ತರುವುದು । 26
ಉತ್ತಮ ಸುಖವಹುದು ಸು । ಪ್ರಶಾಂತಮನಗೆ ಶಾಂತರಜಗೆ
ಮತ್ತಕಲ್ಮಷಂತೆ ಬ್ರಹ್ಮಭೂತಯೋಗಿಗೆ ॥ ॥೨೬॥ 27

ವಿಗತ ಕಲ್ಮಷನುವೆ ಆದ । ಯೋಗಿ ಸದಾ ಆತ್ಮನನ್ನು
ಸುಗತಿಯಿಂದ ಹೀಗೆ ತಾನು ಯುಂಜಿಸುತ್ತಲಿ ।
ಸೊಗದೆ ಬ್ರಹ್ಮಸಂಸ್ಪರ್ಶ । ಯುಕ್ತವನಾಯಾಸದಿಂದ
ಸಿಗುವತೀತದಾ ಸುಖಾನುಭವವ ಮಾಳ್ಪನು ॥ ॥೨೭॥ 28

ಸರ್ವಭೂತಗಳೊಳು ತಾನು । ವ್ಯಾಪಿಸಿರುವ ಆತ್ಮನನ್ನು
ಸರ್ವಭೂತಗಳನು ಮತ್ತೆ ಆತ್ಮನಲ್ಲಿಯು ।
ಸರ್ವಸನದ ದರ್ಶಿಯಾದ । ಯೋಗಯುಕ್ತ ಆತ್ಮನವನು
ಸರ್ವರೀತಿ ಸಮತೆಯಿಂದ ತಾನು ಕಾಂಬನು ॥ ॥೨೮॥ 29

೨೯. ಅನಿರ್ವಿಣ್ಣ ಚಿತ್ತದಿಂದ = ಅವ್ಯಾಕುಲ ಚಿತ್ತದಿಂದ
೩೦. ಯೋಕ್ತವಾಗಬೇಕು = ಯೋಗ ಮಾಡಲ್ಪಡಬೇಕು
೩೧. ಉಪರಮೆಯನು = ವೈರಾಗ್ಯವನ್ನು

ಯಾವನವನು ಸರ್ವದೊಳಗು । ನೋಳ್ಪನೆನ್ನ ಮತ್ತೆ ತಾನು
ಈ ವಿಧದಲೆ ಸರ್ವವೆನ್ನ ಒಳಗೆ ನೋಳ್ಪನೊ ।
ಭಾವಿಸಲುವೆ ಅವನಿಗಾಗಿ । ನಾನು ನಾಶವಾಗೆನಂತೆ
ಯಾವ ರೀತಿಯವನು ನನಗೆ ನಾಶವಾಗನು ॥ ॥೨೯॥ 30

ಸರುವ ಭೂತಸ್ಥಿತನು ಆದ । ಎನ್ನ ಏಕಭಾವದಿಂದ
ಲಿರದೆ ಯಾವ ಯೋಗಿ ತಾನು ಸದಾ ಭಜಿಪನೊ ।
ಸರುವ ವಿಧದೊಳೆಂತು ವರ್ತಿ । ಸಿದರು ಕೂಡ ಆ ಯೋಗಿ
ಇರದೆ ಎನ್ನೊಳೇಯೆ ವರ್ತಿಸುತ್ತಲಿರುವನು ॥ ॥೩೦॥ 31

ಯಾವನವನು ಆತ್ಮದುಪಮೆ । ಯಿಂದ ಸರ್ವಸ್ಥಾನದಲ್ಲಿ
ಓವಿ ಸಮದೆ ನೋಡುವವನೊ ತಾನು ಅರ್ಜುನ ।
ಓವ ಸುಖವೊ ಮೇಣು ನೋವ । ದುಃಖವದುವೊ ಸಮದೆ ನೋಳ್ಪ
ನಾವನವನೆ ಯೋಗಿಪರಮನೆನ್ನ ಮತದೊಳು ॥ ॥೩೧॥ 32

ಸಾಮ್ಯತೆಯಲಿ ಸಾಧಿಪಂಥ । ಯಾವ ಯೋಗವಿದುವು ತಾನು
ಓ ಮಧುಸೂಧನನೆ ನಿನ್ನ ಪೇಳ್ದುದೀಗಲು ।
ಈ  ಮಹಾಯೋಗವಿದರ । ಸ್ಥಿರದ ಸ್ಥಿತಿಯ ಹದನ ನಾನು
ಈ ಮನಸಿನ ಚಂಚಲತೆಯಿನರಿಯಲಾರೆನು ॥ ॥೩೨॥ 33

ಮನವು ಚಂಚಲವದು ಕೃಷ್ಣ । ಬುದ್ಧಿಯನ್ನು ಪ್ರಮಥಿಸುವುದು
ಅನಿತು ಬಲವು ದೃಢತೆಯುಳ್ಳುದದುವು ನೋಡಲು ।
ನನತು ಮತವು ವಾಯುವನ್ನು । ನಿಗ್ರಹಿಪುದು ಎಂತೊ ಅಂತೆ
ಮನವನಿದನು ನಿಗ್ರಹಿಪುದು ತಾ ಸುದುಷ್ಕರ ॥ ॥೩೩॥ 34

ಅಸಂಶಯವು ಮಹಾಬಾಹು । ಮನವು ಸುದುರ್ನಿಗ್ರಹವದು
ವಿಸಂಗತಿಯದಲ್ಲ ನಿಜದೆ ಮನವು ಚಂಚಲ ।
ಸುಸಂಗತಿಯ ತಾನಭ್ಯಾಸ । ಮತ್ತೆಯು ವೈರಾಗ್ಯದಿಂದ
ಅಸಂಶಯವು ಮನವು ಗೃಹ್ಯ ಕುಂತಿತನಯನೆ ॥ ॥೩೪॥ 35

ತನತು ಆತ್ಮ ಸಂಯಮಿಸಲು । ಆರದವಗೆ ಯೋಗವಿದುವು
ಘನದೆ ತಾನಸಾಧ್ಯವೆಂದು ಎನ್ನ ಮತವದು ।
ತನತು ಆತ್ಮವಶವಗೈದ । ಯತ್ನಶೀಲನಾದರವನು
ಇನಿತುಪಾಯದಿಂದ ಸಾಧಿಸಲುವೆ ಶಕ್ಯನು ॥ ॥೩೫॥ 36

ಒಂದು ವೇಳೆ ಶ್ರದ್ಧೆವಂತ । ನಾದರೂವೆ ಯತ್ನಭಂಗ
ಹೊಂದಿ ಯೋಗದಿಂದ ಚಲಿತಮನನು ಆದವ ।
ಅಂದು ತಾನು ಯೋಗ ಸಂ । ಸಿದ್ಧಿಪ್ರಾಪ್ತಿಯಿಲ್ಲದೇಯೆ
ಮುಂದೆ ಕೃಷ್ಣ ತಾನು ಯಾವ ಗತಿಯನ್ನೈದುವ ॥ ॥೩೭॥ 37

ಯೋಗಭ್ರಷ್ಟನಾದ ಅವನು । ಉಭಯವಿಭ್ರಷ್ಟನಾಗಿ
ಹೋಗಿ ಛಿನ್ನ ಅಭ್ರದಂತೆ ನಾಶವೈದನೆ ।
ಹೀಗೆ ಅವನು ಮಹಾಬಾಹು । ಅಪ್ರತಿಷ್ಠನಾಗಿ ಮತ್ತೆ
ಯೋಗ ಬ್ರಹ್ಮಪಥವಿಮೂಢನೆನಿಸುತಾಗಲು ॥ ॥೩೮॥ 38

ಇದುವೆ ನನ್ನ ಸಂಶಯವ । ಕೃಷ್ಣ ನಿಶ್ಶೇಷವಾಗಿ
ಯದನು ಈಗ ಪರಿಹರಿಸಲು ನೀನೆ ಅರ್ಹನು ।
ಸದಯ ನಿನ್ನ ಬಿಟ್ಟರಿನ್ನು । ಅನ್ಯನೊಬ್ಬ ಸಂಶಯವ
ನಿದನು ತಾನು ಪರಿಹರಿಸುವನಾವನಿಲ್ಲವು ॥ ॥೩೯॥ 39

ಪಾರ್ಥ ನೋಡು ಯೋಗಭ್ರಷ್ಟ । ಗವಗೆ ಇಹದೆ ಪರದೆ ನಿಜದೆ
ಸಾರ್ಥವಿಹುದೆ ಹೊರತು ತಾ ವಿನಾಶವಿಲ್ಲವು ।
ವ್ಯರ್ಥವೆಂಬುದಿಲ್ಲ ತಾತ! । ಯಾವ ಸುಕಲ್ಯಾಣಕೃತಗ
ನರ್ಥವಿಲ್ಲವವನು ದುರ್ಗತಿಗೆ ಹೋಗನು ॥ ॥೪೦॥ 40

ಸೇರಿ ಅವನು ಪುಣ್ಯಕೃತದ । ಲೋಕಗಳನು ಅಲ್ಲಿ ಬಹಳ
ಮೀರುವಷ್ಟು ಕಾಲ ವಾಸಮಾಡಿ ಬಳಿಕಲಿ ।
ಸಾರಿ ಶುಚಿಯವಂತರಾದ । ಶ್ರೀಮಂತಗೃಹದೆ ತಾನು
ಹಾರಿ ನಿಜದೆ ಯೋಗಭ್ರಷ್ಟನವನು ಜನಿಸುವ ॥ ॥೪೧॥ 41

ಅಥವ ಧೀಮಂತರಾದ । ಯೋಗಿಗಳಾ ಕುಲದಲೇಯೆ
ವ್ಯಥೆಯು ಸ್ವಲ್ಪವಿಲ್ಲದೇಯೆ ತಾನು ಜನಿಸುವ ।
ಪೃಥಿವಿ ಮೇಲೆ ಇದುವು ಇಂಥ । ಜನ್ಮಲಭಿಸುವಿಕೆಯು ತಾನು
ಕಥನದಷ್ಟು ಸುಲಭವಲ್ಲ ಬಹಳ ದುರ್ಲಭ ॥ ॥೪೨॥ 42

ಅಲ್ಲಿ ಪೂರ್ವದೇಹ ಸುಸಂ । ಸ್ಕಾರ ದೆಸೆಯ ಬಲದೆ ತಾನು
ನಿಲ್ಲದೇಯೆ ಬುದ್ಧಿ ಸಂಯೋಗ ಪಡೆವನು ।
ಅಲ್ಲದೇಯೆ ಪುನಃ ಅವನು । ಯೋಗಸಂಸಿದ್ಧಿಗಾಗಿ
ಎಲ್ಲಕಿಂತಲಧಿಕವಾಗಿ ಯತ್ನಗೈವನು ॥ ॥೪೩॥ 43

ಅವಶನಾದರೂವೆ ಅವನು । ಪೂರ್ವದಭ್ಯಾಸಬಲದೆ
ವಿವಶದಿಂದೆ ಸಿದ್ಧಿಯೆಡೆಗೆ ಸೆಳೆಯಪಡುವನು ।
ಅವನು ಬುದ್ಧಿಯೋಗ ಜಿ । ಜ್ಞಾಸುವಾದರೂವೆ ಕೂಡ
ಜವದೆ ಶಬ್ದಬ್ರಹ್ಮವನತಿವರ್ತಿಸುವನವ ॥ ॥೪೩॥ 44

ಸುಪ್ರಯತ್ನದಿಂದ ಯತತ । ಮಾನನಾದ ಯೋಗಿ ತಾನು
ಕ್ಷಿಪ್ರದಿಂದೆ ಕಿಲ್ಬಿಷ ಸಂಶುದ್ಧನಾಗುತ ।
ಸುಪ್ರವೃತ್ತಿಯಿಂದನೇಕ । ಜನ್ಮ ಸಂಸಿದ್ಧನಾಗಿ
ಸುಪ್ರಬುದ್ಧನಾಗ ಪರಮ ಪದವಿ ಪಡೆಯುವ ॥ ॥೪೪॥ 45

ಅಧಿಕನವನು ಯೋಗಿ ತಾನು । ತಪಸ್ವಿಗಳಿಗಿಂತ ಮತ್ತೆ
ಅಧಿಕನೆಷ್ಟೊ ಪಾಲು ಅವನು ಜ್ಞಾನಿಗಳಿಗೆಯು ।
ಅಧಿಕನವನು ಯೋಗಿ ತಾನು । ಮತ್ತೆ ಕರ್ಮಿಗಳಿಗು ಕೂಡ
ಅದರಿ ನೀನು ಬಿಡದೆ ಯೋಗಿಯಾಗೊ ಅರ್ಜುನ ॥ ॥೪೫॥ 46

ಎಲ್ಲ ಯೋಗಿಗಳಲಿ ಕೂಡ । ಯಾವನವನು ತನ್ನ ತಾನು
ನಿಲ್ಲದಂತರಾತ್ಮನನ್ನು ಎನ್ನೊಳರ್ಪಿಸಿ ।
ಅಲ್ಲದೇಯೆ ಶ್ರದ್ಧೆವಂತ । ನಾಗಿ ಎನ್ನ ಭಜಿಸುವವನೊ
ಸಲ್ಲುವವನೆ ಯುಕ್ತತಮನು ಎನ್ನ ಮತವದು ॥ ॥೪೬॥ 47

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಆರನೆಯದು**
**ಸಾಂತಗೊಂಡ ಆತ್ಮಸಂಯಮದ ಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಏಳು

# ಜ್ಞಾನವಿಜ್ಞಾನ ಯೋಗ

ಎನ್ನಲಿಯಾಸಕ್ತಮನನು । ಆಗಿ ಪಾರ್ಥ ನೀನು ನಿಜದೆ
ಎನ್ನ ಆಶ್ರಯಾದೆ ಯೋಗ ಯುಂಜಿಪಾಗಲು[32] ।
ಎನ್ನನಸಂಶಯದಿ ನೀನು । ಸಮಗ್ರದಲಿ ಯಾವ ರೀತಿ
ಎನ್ನನರಿಯಬಲ್ಲೆಯದನು ಬಿಡದೆ ಕೇಳೆಲೈ ॥ ॥೧॥ 1

ಸವಿಜ್ಞಾನವಾದ ಜ್ಞಾನ । ಏದನು ಈಗ ನಿನಗೆ ನಾನು
ಸವಿಸ್ತಾರದಿಂದಶೇಷವಾಗಿ ಪೇಳುವೆ ।
ಸುವಿದ್ಯೆಯೀ ಯಾವುದಿದನು । ತಿಳಿದ ಮೇಲೆ ಪುನಃ ಅನ್ಯ
ಭುವನದೊಳುವೆ ತಿಳಿಯತಕ್ಕುದಾವುದಿಲ್ಲವು ॥ ॥೨॥ 2

ಸಾವಿರಾರು ಮನುಜರಲ್ಲಿ । ಯಾವನಾದರೊಬ್ಬ ತಾನು
ಓವಿ ಶ್ರದ್ಧೆಯಿಂದ ಸಿದ್ಧಿಗಾಗಿ ಯತ್ನಿಪ ।
ಯಾವನಾದರೊಬ್ಬ ತಾನು । ಯತ್ನಗೈವ ಸಿದ್ಧರಲ್ಲಿ
ಆ ವಿಶುದ್ಧ ತತ್ವದಿಂದಲೆನ್ನ ತಿಳಿವನು ॥ ॥೩॥ 3

ಭೂಮಿ ಆಪ ಅನಲ ವಾಯು । ಗಗನ ಮನವು ಬುದ್ಧಿ ಮತ್ತೆ
ಹಮ್ಮು ಎಂದು ನನ್ನ ಭಿನ್ನ ಪ್ರಕೃತಿ ಎಂಟದು ।
ಭೂಮಿ ಇಂತು ಆದಿಯಾಗಿ । ಅಹಂಕಾರ ಕೊನೆಯದಾಗಿ
ಈ ಮತದಲಪರಾಪ್ರಕೃತಿ ಎನಿಸಿ ಇರುವುದು ॥ ॥೪॥ 4

32. ಯುಂಜಿಪಾಗಲು = ಯೋಗ ಮಾಡುವಾಗ, ಆಚರಿಸುವಾಗ

ಈ ಅಪರಾಪ್ರಕೃತಿಗಿಂತ । ಲನ್ಯವಾದ ಅದುವು ಎನ್ನ
ಪ್ರೀಯವಾದ ಪರಾಪ್ರಕೃತಿಯನ್ನು ತಿಳಿಯೆಲೈ ।
ಪ್ರೇಯವಾದ ಯಾವುದದುವು । ಜೀವಭೂತ ಜಗತನಿದನು
ಮಾಯೆಯಿಂದ ಧರಿಸಿ ಇಹುದು ಮಹಾಬಾಹುವೆ ॥ ॥೫॥ 5

ಇದುವೆ ಯೋನಿಯಲ್ಲಿ ಸರ್ವ । ಭೂತದುದಯ ತಿಳಿಯೊ ನಾನೆ
ಇದುವೆ ಜಗತ ಪ್ರಭವ ಪ್ರಳಯಕೆಲ್ಲ ಕಾರಣ । 6
ಬದಲು ನನಗೆ ಮೇಲೆ ಕಿಂಚಿ । ದಿಲ್ಲ ಧನಂಜಯನೆ ಎನ್ನೊ
ಳಿದುವೆ ಎಲ್ಲ ಸೂತ್ರಮಣಿಗಳಂತೆ ಕೋದಿವೆ ॥ ॥೬॥ 7

ನಾನು ನೀರಿನಲ್ಲಿ ರಸವು । ಚಂದ್ರಸೂರ್ಯರಲ್ಲಿ ಪ್ರಭೆಯು
ನಾನೆ ಪ್ರಣವಮಂತ್ರ ಸರ್ವವೇದಗಳಲಿಯು ।
ನಾನೆ ಶಬ್ದ ವ್ಯೋಮದಲ್ಲಿ । ಪೌರುಷವದು ನರರ ಒಳಗೆ
ನಾನೆ ಇಂತು ಇರುವೆನೆನುತ ತಿಳಿಯೊ ಪಾಂಡವ॥ ॥೭॥ 8

ಪುಣ್ಯವಾದ ಗಂಧವಾಗಿ । ಪೃಥಿವಿಯೊಳಗೆ ಇಹೆನು ತಿಳಿಯೊ
ಗಣ್ಯವಾದ ತೇಜವಾಗಗ್ನಿಯೊಳಗಿಹೆ ।
ಪುಣ್ಯವಾದ ಸರ್ವಭೂತ । ಗಳೊಳು ಜೀವನವು ನಾನೆ
ಗಣ್ಯ ತಪಸಿಗಳೊಳು ನಾನೆ ತಪವು ಆಗಿಹೆ ॥ ॥೮॥ 9

ಸರುವ ಭೂತಗಳಿಗು ಕೂಡ । ಸನಾತನವದದುವೆ ಆಗಿ
ಇರುವ ಬೀಜವೆಂದು ಎನ್ನ ಪಾರ್ಥ ನೀ ತಿಳಿ ।
ಇರುವೆ ನಾನು ಬುದ್ಧಿಯಾಗಿ । ಬುದ್ಧಿವಂತರೊಳಗೆ ಮತ್ತೆ
ಮೆರೆವ ತೇಜವಾಗಿ ತೇಜಸ್ವಿಗಳಲಿಯು ॥ ॥೯॥ 10

ಕಾಮ ರಾಗ ವಿವರ್ಜಿತವ । ದಾದ ಬಲವು ನಾನೆ ಆಗಿ
ನೇಮದಿಂದಲಿಹೆನು ಸುಬಲವಂತರಲ್ಲಿಯ ।
ಕ್ಷೇಮ ಧರ್ಮಕೆಯು ವಿರುದ್ಧ । ವಲ್ಲದಂಥ ಭೂತರೊಳಿಹ
ಕಾಮವಾಗಿ ಇಹೆನು ನಾನು ಭರತಋಷಭನೆ ॥ ॥೧೦॥ 11

ಯಾವ ಸಾತ್ವಿಕವದು ಮತ್ತೆ । ರಾಜಸವದು ತಾಮಸವದು
ಭಾವಗಳಿವು ಕೂಡ ಹೀಗೆ ಯಾವುವಿರುವುವೊ ।
ತಾವು ಹುಟ್ಟಿರುವುದು ಎನ್ನಿ । ಮೆನುತಲೇಯೆ ತಿಳಿಯೊ ಇಹವು
ತಾವು ಎನ್ನೊಳಾದರಾನು ಅವರೊಳಿಲ್ಲವು ॥ ॥೧೧॥ 12

ಇದುವೆ ಗುಣಗಳಿಂದ ಕೂಡಿ । ದಂಥ ಮೂರು ಭಾವದಿಂದ
ಲಿದುವೆ ಸರ್ವಜಗತು ನಿಜದೆ ಮೋಹಗೊಂಡಿದೆ ।
ಅದರಿನಿವನು ಮೀರಿದಂಥ । ಪರಮ ಅವ್ಯಯನುವೆ ಆದ
ನಿದುವೆ ಮೋಹಿಜಗತು ತಾನು ಎನ್ನ ತಿಳಿಯದು ॥ ॥೧೨॥ 13

ಇದುವೆ ಗುಣಮಯೀಯು ಆದ । ಎನ್ನ ದೈವಿಮಾಯೆ ತಾನು
ಇದುವು ದಾಟಲತಿಯಕಠಿಣವಾದುದಿರುವುದು ।
ಇದರ ಮೇಲಿನೆನ್ನಲೇಯೆ । ಯಾರು ಶರಣು ಬರುವರವರೆ
ಇದುವೆ ದೈವಿಮಾಯೆಯನ್ನು ನಿಜದೆ ದಾಟುವರ್ ॥ ॥೧೩॥ 14

ನರಾಧಮರು ಎನಿಸಿದಂಥ । ದುಷ್ಕೃತರುವೆ ಮೂಢರುಗಳು
ದುರಾಶಿಗಳು ಆದ ಇವರು ಎನ್ನ ಭಜಿಸರು ।
ದುರಾಶ್ರಯವ ಪಡೆದು ಆಸು । ರೀಯಭಾವದಲ್ಲಿ ತಾವು
ದುರಾಮಾಯೆಯಿಂದಪಹೃತ ಜ್ಞಾನದಿಂದಲಿ ॥ ॥೧೪॥ 15

ಚತುರ್ವಿಧದಲೆನ್ನ ಭಜಿಪ । ರವರು ಸುಕೃತಿ ಜನರು ತಾವು
ಮತಿಯಲವರ ತಿಳಿಯೊ ನೀನು ಈಗಲರ್ಜುನ ।
ಮತದೆ ಆರ್ತ ಜಿಜ್ಞಾಸು । ಅರ್ಥದರ್ಥಿ ಮತ್ತೆ ಜ್ಞಾನಿ
ನುತರೆ ಇಹರು ಅವರು ಎಲ್ಲ ಭರತ ಋಷಭನೆ ॥ ॥೧೫॥ 16

ಅವರೊಳೆಲ್ಲ ಜ್ಞಾನಿ ತಾನು । ನಿತ್ಯಯುಕ್ತ ಏಕ ಭಕ್ತಿ
ಯವನು ಆಗಿ ತಾ ವಿಶೇಷದಿಂದ ಮೆರೆವನು ।
ಅವಗೆ ಜ್ಞಾನಿಗಾಗಿ ನಾನು । ಅತಿಯದಾಗಿ ಪ್ರಿಯನೆ ಇಹೆನು
ಅವನು ಮತ್ತೆ ಎನಗೆ ನಿಜದೆ ತಾನು ಪ್ರಿಯನಿಹ ॥ ॥೧೬॥ 17

ಉದಾರಿಗಳೆ ಇವರು ಎಲ್ಲ । ಆದರವನು ಜ್ಞಾನಿ ತಾನು
ವಿಧಾನದಲಿ ಸ್ವಾತ್ಮನೇಯೆ ನನ್ನ ಮತವದು ।
ಸದಾಸ್ಥಿತನು ಯುಕ್ತಅತ್ಮ । ನಾಗಿಯವನು ನನ್ನನೇಯೆ
ಸದುತ್ತಮದ ಗತಿಯೆನುತ್ತ ಭಾವಿಸಿರುವನು ॥ ॥೧೭॥ 18

ಬಹಳ ಜನ್ಮ ಕಳೆದಮೇಲೆ । ಕೊನೆಯದಾಗಿ ಜ್ಞಾನವಂತ
ಸಹನೆಯಿಂದಲೆನ್ನ ತಾನು ಬಿಡದೆ ಪಡೆವನು ।
ಇಹದೆ ತಾನು ವಾಸುದೇವ । ನೇಯೆ ಸರ್ವವೆಂದು ಎನ್ನು
ತಿಹ ಮಹಾತ್ಮನವನು ನಿಜದೆ ತಾ ಸುದುರ್ಲಭ ॥ ॥೧೮॥ 19

ವಿವಿಧ ಆಯ ಆಯ ಕಾಮ । ನೆಯಲಿ ಜ್ಞಾನ ಕಳೆದುಕೊಂಡ
ಅವರು ಅನ್ಯದೇವತೆಗಳ ಬಿಡದೆ ಭಜಿಪರು ।
ಅವವು ನಿಯಮವನ್ನು ಅನುಸ । ರಿಸುತಲವರು ತಮ್ಮ ಸಹಜ
ದವಶ ಪ್ರಕೃತಿಯಾ ಸ್ವಭಾವ ನಿಯತರಾಗಿಯೆ ॥ ॥೧೯॥ 20

ಯಾವ ಯಾವ ಭಕ್ತ ತಾನು । ಯಾವ ಯಾವ ರೂಪಗಳನು
ಓವಿ ಶ್ರದ್ಧೆಯಿಂದ ಪೂಜಿಸಲು ಇಚ್ಛಿಪ ।
ಸೇವೆಯಂತೆ ಅವನ ಅವನ । ಅಚಲವಾದ ಶ್ರದ್ಧೆಯನ್ನು
ಆ ವಿಧದಲೆ ಹಾಗೆಯವನೆ ನಾನೆ ವಿಧಿಸುವೆ ॥ ॥೨೦॥ 21

ಅವನು ಅದುವೆ ಶ್ರದ್ಧೆಯಿಂದ । ಯುಕ್ತನಾಗಿ ತಾನು ಆಗ
ಸವಿಧವಾಗಿಯದುವೆ ದೇವತೆಯನು ಪೂಜಿಪ ।
ಅವನು ಮತ್ತೆ ಅದರಿನಿಂದ । ಎನ್ನಿಮೇಯೆ ವಿಹಿತವಾದ
ಅವುವೆ ಕಾಮನೆಗಳ ತಾನು ನಿಜದೆ ಪಡೆವನು ॥ ॥೨೧॥ 22

ಆದರಲ್ಪಮೇಧರಾದ । ಅವರುಗಳಿಗೆ ದೊರೆವ ಫಲವು
ಆದರಂತವುಳ್ಳುದದುವೆ ತಿಳಿದು ನೋಡಲು ।
ಆದ ದೈವಪೂಜಿಪವರು । ದೈವವನ್ನೆ ಪಡೆವರವರು
ಆದರೆನ್ನ ಭಕ್ತರವರು ಪಡೆವರೆನ್ನನೆ ॥ ॥೨೨॥ 23

ಅಬುದ್ಧಿಗಳು ನಿಜದೆ ತಾ । ಅವ್ಯಕ್ತನಾಗಿ ಇರುವ ಎನ್ನ
ನಬುದ್ಧಿಯಲಿ ವ್ಯಕ್ತರೂಪನೆಂದು ತಿಳಿವರು ।
ಸುಬುದ್ಧಿಯಲಿ ತಾವದೆನ್ನ । ಅನುತ್ತಮಾವ್ಯಯವು ಪರಮ
ಸುಬುದ್ಧತೆಯ ಭಾವದಾ ಸ್ವರೂಪವರಿಯದೆ ॥ ॥೨೩॥ 24

ಯೋಗಮಾಯೆಯಿಂದ ತಾ । ಸಮಾವೃತನು ನಾನು ಇರುವೆ
ನಾಗಿ ಸರ್ವರುಗಳಿಗೆ ಪ್ರಕಾಶನಲ್ಲವು।
ಹೀಗೆ ಮೂಢಲೋಕವಿದುವು । ಅಜನು ಅವ್ಯಯನುವೆ ಆದ
ಯೋಗರೂಪನೆನ್ನ ತಾನು ನಿಜದಲರಿಯದು ॥ ॥೨೪॥ 25

ಬಲ್ಲೆನು ಸಮತೀತ ವರ್ತ । ಮಾನ ಮತ್ತೆ ಭವಿಷ್ಯತ್ತಿ
ನೆಲ್ಲಕಾಲ ಭೂತಗಳನು ನಾನು ಅರ್ಜುನ ।
ಎಲ್ಲವಿಂತು ನಾನು ಬಲ್ಲೆ । ನಾದರೆನ್ನ ಯಾರು ಕೂಡ
ಬಲ್ಲರೊಬ್ಬರೂವೆ ಇಲ್ಲವಿದನು ತಿಳಿಯೆಲೊ ॥ ॥೨೫॥ 26

ಅದುವೆ ಇಚ್ಛೆದ್ವೇಷದಿಂದ । ಹುಟ್ಟಿ ಇರುವುದಾದ ತಾನು
ಅದುವೆ ದ್ವಂದ್ವ ಮೋಹದಿಂದ ನಿಜದೆ ಭಾರತ ।
ಅದುವೆ ಸರ್ವಭೂತಗಳುವೆ । ಸಂಮೋಹಗೊಳ್ಳುತಿಹವು
ಇದುವೆ ಸೃಷ್ಟಿಯಲ್ಲಿ ತಾವು ಹೇ ಪರಂತಪ ॥ ॥೨೭॥ 27

ಆದರಾವ ಪುಣ್ಯಕರ್ಮಿ । ಗಳುವೆ ಆಗಿ ಇರುವ ಜನರು
ಆದ ಪಾಪವೆಲ್ಲ ಕಳೆದುಕೊಂಡು ಇರುವರೊ ।
ಮೇದಿನಿಯೊಳು ದ್ವಂದ್ವಮೋಹ । ನೀಗಿ ದೃಢವ್ರತರು ಅಗಿ
ಮೋದದಿಂದಲವರು ಎನ್ನ ಬಿಡದೆ ಭಜಿಪರು ॥ ॥೨೮॥ 28

ಜರಾಮರಣದಿಂದ ಮೋಕ್ಷ । ಪಡೆಯಲೆನ್ನ ಆಶ್ರಯಿಸುತ
ನಿರಾಮಯರು ಆಗಿ ಯಾರು ಯತ್ನಗೈವರೊ ।
ಧರಾತಳದಿ ಅವರು ಅದುವೆ । ಬ್ರಹ್ಮನನ್ನು ಅಖಿಳವಾದ
ಪರಾಧ್ಯಾತ್ಮ ಮತ್ತೆ ಕರ್ಮಗಳನು ತಿಳಿವರು ॥ ॥೨೯॥ 29

ಸಾಧಿಭೂತನಾದ ನನ್ನ । ಸಾಧಿದೈವನಾದ ಮತ್ತೆ
ಸಾಧಿಯಜ್ಞನಾದ ನನ್ನನಾರು ತಿಳಿವರೊ ।
ಸಾಧಿಸುತ್ತ ಯುಕ್ತಚೇತ[33] । ರೆನ್ನನವರು ಕೊನೆಯದಾಗಿ
ಸಾಧ್ಯದಾ ಪ್ರಯಾಣಕಾಲದಲ್ಲು ತಿಳಿವರು ॥ ॥೩೦॥ 30

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಏಳನೆಯದು**
**ಸಾಂತಗೊಂಡ ಜ್ಞಾನ ವಿಜ್ಞಾನಯೋಗವು ॥**

೩೩. ಯುಕ್ತಚೇತರು = ಯೋಗದಲ್ಲಿ ನಿರತರಾದ ಬುದ್ಧಿಯುಳ್ಳವರು

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಎಂಟು

# ಅಕ್ಷರ ಬ್ರಹ್ಮಯೋಗ

ಅದುವೆ ಬ್ರಹ್ಮವೆಂದರೇನು । ಅದಧ್ಯಾತ್ಮವೆಂದರೇನು
ಅದುವೆ ಕರ್ಮವೆಂದರೇನು ಸುಪುರುಷೋತ್ತಮ ।
ಅದಧಿಭೂತವೆಂಬುದಾವು । ದಧಿದೈವವೆಂದು ಯಾವು
ದದುವು ಪೇಳೆಪಡುವುದೆಂದು ಕೇಳ್ದನರ್ಜುನ ॥ ॥೧॥ 1

ಇದುವೆ ಈ ಶರೀರದಲ್ಲಿ । ಅದಧಿಯಜ್ಞವೆಂಬುದಾವು
ದದುವೆ ಅಲ್ಲಿ ಹೇಗೆ ಇಹುದು ಸುಮಧುಸೂದನ ।
ಅದುವೆ ಮತ್ತೆಯಾ ಪ್ರಯಾಣ । ಕಾಲದಲ್ಲಿ ನೀನು ಯಾವ
ವಿಧದೆ ನಿಯತ ಆತ್ಮರಿಂದೆ ತಿಳಿಯಪಡುವೆಯೈ ॥ ॥೨॥ 2

ಅದುವೆ ನಾಶರಹಿತವಾದ । ವಸ್ತುವೆಯಕ್ಷರವು ಬ್ರಹ್ಮ
ವದರ ಆ ಸ್ವಭಾವವಧ್ಯಾತ್ಮವೆನಿಪುದು ।
ಅದುವೆ ಭೂತಭಾವದುದ್ಭ । ವಕರವಾದ ಸೃಷ್ಟಿ ತತ್ವ
ವಿಧದೆ ಕರ್ಮಸಂಜ್ಞೆಯಿಂದಲಿರುವುದರ್ಜುನ ॥ ॥೩॥ 3

ಕ್ಷರದ ಭಾವವೆನಿಪ ನಾಶ । ಪೋಪ ವಸ್ತುವದಧಿಭೂತ
ಪುರುಷ ಮತ್ತೆಯದಧಿದೈವವಾಗಿ ಇರುವನು ।
ಇರುವ ನಾನೆಯದಧಿ । ಯಜ್ಞವಾಗಿ ಈ ದೇಹದಲ್ಲಿ
ಅರಿಯೊ ಇದನು ದೇಹಧಾರಿಗಳೊಳು ಶ್ರೇಷ್ಠನೆ ॥ ॥೪॥ 4

ಅಂತಕಾಲದಲ್ಲಿ ನನ್ನ । ನೇಯೆ ಸ್ಮರಣೆಗೈಯುತ್ತಿದ್ದು
ಅಂತಗೊಳ್ವ ಕಳೇಬರವನಿದನು ಬಿಡುತಲಿ ।
ಅಂತೆ ಯಾರು ಪಯಣಗೈವ । ನವನು ನನ್ನ ಭಾವ ಪಡೆವ
ನೆಂತು ಇದರೊಳಿನಿತು ಸಂಶಯವದು ಇಲ್ಲವು ॥ ॥೫॥ 5

ಯಾವ ಯಾವ ಭಾವವನ್ನು । ಸ್ಮರಿಸುತಿದ್ದು ಅಂತದಲ್ಲಿ
ಯಾವನವನು ಕಳೇಬರವ ತ್ಯಜಿಸಿಬಿಡುವನೊ ।
ಭಾವವದನು ಸದಾಭಾವಿ । ಸುತ್ತಲಿದ್ದರವನು ಆಗ
ಭಾವವದನೆಯದನೆ ಪಡೆವ ಕುಂತಿತನಯನೆ ॥ ॥೬॥ 6

ಆದಕಾರಣದಲಿ ಸರ್ವ । ಕಾಲದಲ್ಲಿ ನನ್ನ ನೀನು
ಬಾಧೆರಹಿತ ಸ್ಮರಿಸು ಮತ್ತೆ ಯುದ್ಧ ಮಾಡೆಲೊ ।
ಬುದ್ಧಿ ಮನಗಳನ್ನು ಎನ್ನೊ । ಳೇಯೆ ಅರ್ಪಿತವನು ಮಾಡಿ
ಶುದ್ಧನೆನ್ನನೇಯೆ ಪಡೆವೆ ನೀನಸಂಶಯ ॥ ॥೭॥ 7

ಅದಭ್ಯಾಸಯೋಗದಿಂದ । ಯುಕ್ತವಾದ ಮತ್ತೆ ತನ್ನ
ಅದನ್ಯಗಾಮಿಯಲ್ಲದಂಥ ಚೇತದಿಂದಲಿ ।
ತದನುಚಿಂತ್ಯನಾಗಿ ಧ್ಯಾನ । ಪರನು ಆದ ಯೋಗಿ ಪಾರ್ಥ
ಅದುವೆ ದಿವ್ಯಪರಮ ಪುರುಷನನ್ನು ಪಡೆವನು ॥ ॥೮॥ 8

ಅದೆಯೆ ಕವಿಯನಾ ಪುರಾಣ । ನೆಲ್ಲ ನಿಯಾಮಕನ ಬಿಡದೆ
ಅದೆಯೆ ಅಣುವಿಗಣುವು ಆದನನ್ನು ಸ್ಮರಿಸುತ ।
ಅದೆಯೆ ಸರ್ವ ಸಧಾತಾರ । ನಾ ಅಚಿಂತ್ಯರೂಪಸೂರ್ಯ
ಹೃದಯವರ್ಣನನ್ನು ತಮಸಿನಿಂದ ದೂರನ ॥ ॥೯॥ 9

ಅದೆ ಪ್ರಯಾಣಕಾಲದಲ್ಲಿ । ಅಚಲಮನಸಿನಿಂದ ಮತ್ತೆ
ಹೃದಯ ಭಕ್ತಿಯಿಂದೆ ಯುಕ್ತ ಯೋಗ ಬಲದೆಯು ।
ಅದುವೆ ಭ್ರುವದ ಮಧ್ಯೆ ಪ್ರಾಣ । ವನ್ನು ಸರಿಸ್ಥಾಪಿಸುತ್ತ
ಲದುವೆ ದಿವ್ಯಪರಮ ಪುರುಷನನ್ನು ಪಡೆವನು ॥ ॥೧೦॥ 10

ಯಾವುದಕ್ಷರವದು ಎಂದು । ವೇದವಿದರು ವಾಚಿಸುವರು
ಯಾವುದನ್ನು ಪೊಗುವರಾ ರಾಗರಹಿತರು ।
ಯಾವುದನ್ನು ಇಚ್ಛಿಸುವರು । ಬ್ರಹ್ಮಚರ್ಯೆ ಚರಿಪ ಅವರು
ಯಾವುದದುವೆ ಪದವ ಸಂಗ್ರಹದಿ ಪೇಳುವೆ ॥ ॥೧೧॥ 11

ಸರುವ ದ್ವಾರಗಳನು ಸಂಯ । ಮಿಸುತ ಮನವ ಹೃದಯದಲ್ಲಿ
ಇರದೆ ತಾ ನಿರುದ್ಧಗೊಳಿಸಿ ವಿಚಲನಾಗದೆ ।
ಸರಿಯ ಮೂರ್ಧ್ನಿಯಲ್ಲಿ ತನ್ನ । ಪ್ರಾಣವನ್ನು ಸ್ಥಾಪಿಸುತ್ತ
ಪರಮ ಯೋಗವನ್ನು ಧಾರಣೆಯ ಮಾಡುತ ॥ ॥೧೨॥ 12

ಓಮೆನಿಸಿಹ ಅದೇಕಾಕ್ಷ । ರೀಯ ಬ್ರಹ್ಮವನ್ನು ತಾನು
ಓಮೆನುತಲುಚ್ಚರಿಸುತಲೆನ್ನ ಸ್ಮರಿಸುತ ।
ಸೀಮವಾದ ದೇಹವಿದನು । ತ್ಯಜಿಸಿ ಹೋಗುವವನು ತಾನು
ಆ ಮಹಾಪರಮಗತಿಯ ಬಿಡದೆ ಪಡೆವನು ॥ ॥೧೩॥ 13

ಯಾರನನ್ಯ ಚಿತ್ತದಿಂದ । ಸತತವಾಗಿ ನಿತ್ಯವಾಗಿ
ಕೋರಿ ಎನ್ನ ಬಿಡದೆ ಸದಾ ಸ್ಮರಿಸುತಿರುವನೊ ।
ತೋರುವಿಂಥ ನಿತ್ಯಯುಕ್ತ । ನಾದ ಯೋಗಿಗವಗೆ ನಾನು
ಸಾರಿ ಸುಲಭನಾಗಿ ಇರುವೆ ಪಾರ್ಥ ತಿಳಿಯೆಲೊ ॥ ॥೧೪॥ 14

ಪರಮ ಸಂಸಿದ್ಧಿ ಪಡೆದ । ಮಹಾತ್ಮರುಗಳವರು ತಾವು
ಪರಮ ಶ್ರೇಷ್ಠನಾದನೆನ್ನನೇಯೆ ಸೇರುತ ।
ಪರಮ ದುಃಖದಾಲಯವದು । ಆಗಿ ಅಶಾಶ್ವತವದಾಗಿ
ಇರುವ ಪುನರ್ಜನ್ಮವನ್ನು ಪಡೆವುದಿಲ್ಲವು ॥ ॥೧೫॥ 15

ಅದುವೆ ಬ್ರಹ್ಮಲೋಕವಾದಿ । ಲೋಕಗಳವು ಪುನಹ ಪುನಹ
ಉದಿಸಿ ಆವೃತ್ತಿಗೊಂಡು ಬರುವುವರ್ಜುನ ।
ಇದುವು ಇಂತು ಆದರೆನ್ನ । ಪಡೆದ ಮೇಲೆ ಕೌಂತೇಯ
ವಿದಿತವಾದ ಪುನರ್ಜನ್ಮವಿರುವುದಿಲ್ಲವು ॥ ॥೧೬॥ 16

ಸಹಸ್ರಯುಗಗಳವು ಕೂಡಿ । ಬ್ರಹ್ಮನೊಂದು ಹಗಲು ತಿಳಿಯೆ
ಸಹಸ್ರಯುಗ ಮತ್ತೆಯೊಂದು ರಾತ್ರಿಯೆನಿಪುದು ।
ಅಹೋರಾತ್ರಿ ಬ್ರಹ್ಮನಿವುಗ । ಳನ್ನು ತಿಳಿದ ಜನರು ಅವನ
ಅಹೋರಾತ್ರಿಗಳನು ತಾವು ಬಲ್ಲರೆನಿಪರು ॥ ॥೧೭॥ 17

ಆಗಮಿಸಲು ಹಗಲು ಅ । ವ್ಯಕ್ತನಿಂದ ವ್ಯಕ್ತಿಗಳವು
ಆಗ ಎಲ್ಲ ಇರದೆ ತಾವು ಪ್ರಭವಗೊಳ್ಳುವು ।
ಆಗಮಿಸಲು ರಾತ್ರಿ ಅ । ವ್ಯಕ್ತ ಸಂಜ್ಞನಾದನೊಳೆಯೆ
ಆಗ ಎಲ್ಲ ಇರದೆ ತಾ ಪ್ರಲೀಯವಪ್ಪುವು ॥ ॥೧೮॥ 18

ಅದುವೆ ಭೂತರಾ ಸಮೂಹ । ಹುಟ್ಟಿ ಹುಟ್ಟಿ ಅವಶವಾಗಿ
ಅದುವೆ ರಾತ್ರಿ ಬರಲು ತಾ ಪ್ರಲೀಯವಪ್ಪುದು ।
ಅದುವೆ ಹಗಲು ಬರಲು ತಾನು । ಪ್ರಭವಗೊಳ್ವುದಿರದೆ ನಿಜದೆ
ಇದುವೆ ತಾ ಪ್ರಲೀನ ಪ್ರಭವ ಕ್ರಮವ ತಿಳಿಯೆಲೊ ॥ ॥೧೯॥ 19

ಆದರವ್ಯಕ್ತವಿದಕ್ । ಕಿಂತ ಶ್ರೇಷ್ಠ ಸನಾತನವು
ಆದ ಅವ್ಯಕ್ತಭಾವವನ್ಯವಿರುವುದು ।
ಆದರೆಲ್ಲ ಭೂತಗಳುವೆ । ಕೂಡ ತಾವು ಇರದೆ ನಾಶ
ವಾದರೂವೆ ಇದುವು ತಾ ವಿನಾಶಗೊಳ್ಳದು ॥ ॥೨೦॥ 20

ಇದುವೆ ಅವ್ಯಕ್ತವಕ್ಷ । ರವದು ಎನುತಲುಕ್ತವಿಹುದು
ಅದನು ತಾನೆ ಪರಮಗತಿಯು ಎಂದು ಪೇಳ್ವರು ।
ಅದುವೆ ಯಾವುದನ್ನು ಪಡೆದ । ಬಳಿಕ ತಾ ನಿವೃತ್ತಿಪೊಂದ
ರದುವೆ ಪರಮಧಾಮ ತಾನು ನನ್ನ ಪದವದು ॥ ॥೨೧॥ 21

ಪರಮನಾದ ಪುರುಷನವನು । ತಾ ಅನನ್ಯಭಕ್ತಿಯಿಂದ
ಲಿರದೆ ಪಡೆಯೆ ಶಕ್ಯನಹನು ಪಾರ್ಥ ತಿಳಿಯೆಲೊ ।
ಇರುವುವೆಲ್ಲ ಭೂತಗಳವು । ಯಾವನೊಳಗೆ ಸ್ಥಿತವು ಆಗಿ
ಸರುವವಿದುವು ಯಾವನಿಂದ ವ್ಯಾಪ್ತವಿರುವುದೊ ॥ ॥೨೨॥ 22

ಯಾವ ಕಾಲದಲ್ಲಿ ತಾ । ಪ್ರಯಾಣಮಾಡಿ ಯೋಗಿಗಳುವೆ
ತಾವು ಆವೃತ್ತಿಯನ್ನು ಪಡೆವುದಿಲ್ಲವೊ ।
ಯಾವ ಕಾಲದಲ್ಲಿ ಮತ್ತೆ । ಆವೃತ್ತಿಯನ್ನು ಪಡೆವ
ರಾವ ಕಾಲವದನು ಪೇಳ್ವೆ ಭರತಋಷಭನೆ ॥ ॥೨೩॥ 23

ಅದುವೆ ತಾನು ಅಗ್ನಿ ಜ್ಯೋತಿ । ಅಹವು ಶುಕ್ಲ ಸ್ಥಿತಿಗಳಲ್ಲಿ
ಅದುವೆ ಷಣ್ಮಾಸ ತಾನು ಉತ್ತರಾಯಣ ।
ಅದುವೆ ಸ್ಥಿತಿಗಳಲ್ಲಿ ತಾ ಪ್ರ । ಯಾಣಮಾಡಿದಂಥ ಬ್ರಹ್ಮ
ವಿದರು ಜನರು ಬ್ರಹ್ಮನನ್ನು ತಾವು ಹೊಗುವರು ॥ ॥೨೪॥ 24

ಅದುವೆ ತಾನು ಧೂಮ ರಾತ್ರಿ । ಮತ್ತೆ ಕೃಷ್ಣ ಸ್ಥಿತಿಗಳಲ್ಲಿ
ಅದುವೆ ಷಣ್ಮಾಸ ತಾನು ದಕ್ಷಿಣಾಯನ ।
ಅದುವೆ ಸ್ಥಿತಿಗಳಲ್ಲಿ ತೆರಳಿ । ದಂಥ ಯೋಗಿಗಳುವೆ ಚಂದ್ರ
ನದುವೆ ಲೋಕವನ್ನು ಪಡೆದು ತಿರುಗಿ ಬರುವರು ॥ ॥೨೫॥ 25

ಜಗತಿನಿದುವೆ ಶುಕ್ಲ ಕೃಷ್ಣ । ಗತಿಗಳೇಯೆ ತಾವು ನಿಜದೆ
ದ್ವಿಗತಿಗಳಿವು ಶಾಶ್ವತವೆನೆ ತಿಳಿಯಪಟ್ಟಿವೆ ।
ಸುಗತಿಯೊಂದರಿಂದ ತಾನು । ಅನಾವೃತ್ತಿಯನ್ನು ಪಡೆವ
ವಿಗತಿಯನ್ಯದಿಂದ ಪುನಹ ತಿರುಗಿ ಬರುವನು ॥ ॥೨೬॥ 26

ಇದುವೆ ಎರಡು ಗತಿಗಳನ್ನು । ತಿಳಿದ ಯಾವ ಯೋಗಿ ತಾನು
ಅದುವೆ ನಿಜದೆ ಪಾರ್ಥ ಮೋಹಗೊಳ್ಳನೆಂದಿಗು ।
ಇದುವೆ ಕಾರಣದಲಿ ನೀನು । ಸರ್ವಕಾಲಗಳಲಿ ಕೂಡ
ವಿದಿತವಾದ ಯೋಗಯುಕ್ತನಾಗು ಅರ್ಜುನ ॥ ॥೨೭॥ 27

ವೇದಗಳಲಿ ಯಜ್ಞಗಳಲಿ । ತಪಸು ಮತ್ತೆ ದಾನಗಳಲಿ
ವೇದ್ಯವಾಗಿ ಯಾವ ಪುಣ್ಯಫಲಗಳಿರುವುವು ।
ಆದರಿವನು ಎಲ್ಲ ತಿಳಿದು । ಅತಿಯಗಳೆವನವನು ಯೋಗಿ
ಆದ್ಯ ಪರಮಸ್ಥಾನವನ್ನು ಬಿಡದೆ ಪಡೆವನು ॥ ॥೨೮॥ 28

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಎಂಟನೆಯದು**
**ಸಾಂತಗೊಂಡ ಅಕ್ಷರಬ್ರಹ್ಮಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಯ ಒಂಬತ್ತು

# ರಾಜವಿದ್ಯಾ ರಾಜಗುಹ್ಯಯೋಗ

ಇದನು ಗುಹ್ಯತಮವು ಆದ । ಯೋಗವನ್ನು ನಿನಗೆ ಇಂದು
ವಿದಿತವಾಗಿ ಪೇಳ್ವೆನಾನಸೂಯರಹಿತನೆ ।
ಅದುವೆ ಜ್ಞಾನವಿಜ್ಞಾನ । ಸಹಿತವಾದ ಯೋಗವಾವು
ದಿದನು ತಿಳಿದರಶುಭದಿಂದ ಮೋಕ್ಷಪಡೆಯುವೆ ॥ ॥೧॥ 1

ಅದುವೆ ತಾನು ರಾಜವಿದ್ಯ । ಮತ್ತೆ ರಾಜಗುಹ್ಯಯೋಗ
ವಿದುವೆ ನಿಜದೆ ತಾ ಪವಿತ್ರವಾದುದುತ್ತಮ ।
ಅದುವೆ ತಾನು ಪ್ರತ್ಯಕ್ಷ । ವನುಭವಕರ ಧರ್ಮಯುಕ್ತ
ವದುವೆಯಾಚರಿಸಲು ಸುಸುಖವಾದುದವ್ಯಯ ॥ ॥೨॥ 2

ಇದುವೆ ಧರ್ಮದಲ್ಲಿ ಶ್ರದ್ಧೆ । ಯಿಲ್ಲದಂಥ ಪುರುಷರವರು
ಅದುವೆ ನನ್ನ ಪಡೆಯದೇಯೆ ಹೇ ಪರಂತಪ।
ಇದುವೆ ಮೃತ್ಯುಮಯವು ಆದ । ಸಂಸಾರಮಾರ್ಗದಲ್ಲಿ
ಅದುವೆ ತಾ ನಿವರ್ತರಾಗಿ ಮತ್ತೆ ಬರುವರು ॥ ॥೩॥ 3

ಇದುವೆ ಎಲ್ಲ ಜಗತ್ತು ಅವ್ । ಯಕ್ತ ಮೂರ್ತಿಯಾದ ಎನ್ನಿ
ಮದುವೆ ತಾನು ವ್ಯಾಪ್ತವಾಗಿ ಇಹುದು ತಿಳಿಯೆಲೊ ।
ಅದುವೆ ಸರ್ವಭೂತಗಳುವೆ । ಎನ್ನೊಳೇಯೆ ಸ್ಥಿತವು ಇಹವು
ಆದರವುಗಳಲ್ಲಿ ನಾನು ಸ್ಥಿತನು ಅಲ್ಲವು ॥ ॥೪॥ 4

ಭೂತಗಳವು ತಾನು ನನ್ನೊ । ಳಿಹವು ಎಂಬುದದುವು ಇಲ್ಲ
ಭೂತರೀಶನಾದ ನನ್ನ ಯೋಗ ನೋಡೆಲೊ ।
ಭೂತಭಾವನವದು ನನ್ನ । ಆತ್ಮ ಭೂತರಾಧಾರ
ಭೂತಗಳಲಿ ನಾನು ಇರುವುದಿಲ್ಲವಾದರು ॥ ॥೫॥ 5

ಸರುವ ಸ್ಥಳದೆ ಗಮನವುಳ್ಳ । ಅದಾಕಾಶಸ್ಥಿತವು ಆಗಿ
ಇರುವ ನಿತ್ಯವಾದ ಮಹಾ ವಾಯುವಂತೆಯೆ ।
ಸರುವ ಭೂತಗಳವು ಕೂಡ । ನನ್ನೊಳೇಯೆ ಸ್ಥಿತವು ಆಗಿ
ಇರುವುವೆಂಬುದನ್ನು ನೀನು ತಿಳಿಯೊ ಪಾರ್ಥನೆ ॥ ॥೬॥ 6

ಅದುವೆ ಸರ್ವಭೂತಗಳುವೆ । ತಾವು ಕಲ್ಪಕ್ಷಯದೆ ನಿಜದೆ
ಅದುವೆ ನನ್ನ ಪ್ರಕೃತಿಯನ್ನು ಬಿಡದೆ ಸೇರ್ವುವು ।
ಉದಯ ಕಲ್ಪದಾದಿಯಲ್ಲಿ । ಪುನಹ ಅವುಗಳನ್ನು ನಾನು
ವಿಧದೆ ವಿಸೃಜಿಸುವೆ ಕೇಳು ಕುಂತಿತನಯನೆ ॥ ॥೭॥ 7

ನನ್ನ ಪ್ರಕೃತಿವಶಕೆ ಸಿಲುಕಿ । ಕೊಂಡು ಅವಶವಾಗಿ ಇರುವ
ಭಿನ್ನವಾದ ಭೂತಗ್ರಾಮವಿವನು ಎಲ್ಲವ ।
ನನ್ನ ಪ್ರಕೃತಿಯನ್ನು ಅದವ । ಲಂಬನವನು ಮಾಡಿಕೊಂಡು
ಇನ್ನು ಪುನಹ ಪುನಹ ನಾನು ಬಿಡದೆ ವಿಸೃಜಿಪೆ ॥ ॥೮॥ 8

ಕರ್ಮಗಳವು ಮತ್ತೆ ನನ್ನ । ನಿಬದ್ಧಿಸುವುದಿಲ್ಲ ಕೇಳು
ಕರ್ಮವವುಗಳಲ್ಲಿ ಉದಾಸೀನನಂತೆಯೆ ।
ಕರ್ಮಭಾವ ಲೇಪವಿಲ್ಲ । ದಂತಸಕ್ತನಾಗಿ ಇಹೆನು
ಧರ್ಮವಿದುವೆ ನನ್ನದಾಗಿ ಇದೆ ಧನಂಜಯ ॥ ॥೯॥ 9

ನನ್ನ ಅಧ್ಯಕ್ಷತೆಯಲಿ । ಪ್ರಕೃತಿ ಚರಾಚರವು ಆದ
ಮುನ್ನ ಜಗತನಿದನು ತಾನು ಸೃಷ್ಟಿಗೈವುದು ।
ಇನ್ನು ಇದುವೆ ಕಾರಣದಲಿ । ಕುಂತಿತನಯ ನೀನು ತಿಳಿಯೊ
ಸನ್ನುತವಿದು ಜಗತು ತಾನು ತಿರುಗುತಿರುವುದು ॥ ॥೧೦॥ 10

ಮನುಜ ದೇಹವಾಶ್ರಯಿಸಿಹ । ನನ್ನ ತಾವವಜ್ಞೆಗೈವ
ರನನುಭವಿಗಳಾದ ಅವರು ಮೂಢಜನಗಳು ।
ಅನುತ್ತಮನು ಭೂತಗಳಿಗೆ । ಮಹೇಶ್ವರನು ಆದ ನನ್ನ
ಘನದ ಪರಮಭಾವವನ್ನು ತಾವು ತಿಳಿಯದೆ ॥ ॥೧೧॥ 11

ವ್ಯರ್ಥ ಆಶೆಯುಳ್ಳ ಅವರು । ವ್ಯರ್ಥಕರ್ಮಗೈಯುವವರು
ವ್ಯರ್ಥಜ್ಞಾನವುಳ್ಳರಾ ವಿಚೇತಸರುಗಳು ।
ವ್ಯರ್ಥವಾಗಿ ರಾಕ್ಷಸೀಯು । ಆಸುರೀಯು ಆದ ಮತ್ತೆ
ವ್ಯರ್ಥ ಮೋಹಗಳಿಗೆ ಪ್ರಕೃತಿಯಾಶ್ರಯಿಸಿಹರು ॥ ॥೧೨॥ 12

ಆದರದುವೆ ದೈವಿ ಪ್ರಕೃತಿ । ಯಾಶ್ರಯಿಸಿಹ ಮಹಾತ್ಮರುಗ
ಳಾದ ಅವರು ನನ್ನ ಎಂದು ಬಿಡದೆ ಪಾರ್ಥನೆ ।
ಆದಿಯವ್ಯಯನುವೆ ಭೂತ । ಗಳಿಗೆ ಆದಿಯಾದ ನನ್ನ
ಮೇಧೆಯಿಂದ ತಿಳಿದನನ್ಯ ಮನದೆ ಭಜಿಪರು ॥ ॥೧೩॥ 13

ಸತತವಾಗಿ ಕೀರ್ತಿಸುವರು । ತಾವು ಜಿತೇಂದ್ರಿಯರು ಎನಿಪ
ಯತತರುಗಳು ಮತ್ತೆ ದೃಢವ್ರತರು ನನ್ನನು ।
ಮತ್ತೆ ನಮಸ್ಕರಿಪರವರು । ಬಿಡದೆ ಎಲ್ಲ ಭಕ್ತಿಯಿಂದ
ನಿತ್ಯಯುಕ್ತರವರು ನನ್ನನುಪಾಸಿಸುವರು ॥ ॥೧೪॥ 14

ಅದುವೆ ಜ್ಞಾನಯಜ್ಞದಿಂದ । ಲೂವೆ ಅನ್ಯರುಗಳು ಮತ್ತೆ
ಮುದದೆ ನನ್ನ ಯಜನಗೈಯುತುಪಾಸಿಸುವರು ।
ಅದುವೆ ಏಕತ್ವ ತಾ ಪೃ । ಥಕ್ತ್ವಭಾವದಿಂದ ಬಹಳ
ವಿಧದೆ ವಿಶ್ವತೋಮುಖನ ನನ್ನುಪಾಸಿಪರ್ ॥ ॥೧೫॥ 15

ನಾನೆ ಕ್ರತುವು ಆಗಿ ಇಹೆನು । ನಾನೆ ಯಜ್ಞವಾಗಿ ಇಹೆನು
ನಾನೆ ಸ್ವಧೆಯು ಆಗಿ ಇಹೆನು ನಾನೆ ಔಷಧ ।
ನಾನೆ ಮಂತ್ರವಾಗಿ ಇಹೆನು । ನಾನೆ ಆಜ್ಯವಾಗಿ ಇಹೆನು
ನಾನೆ ಅಗ್ನಿಯಾಗಿ ಇಹೆನು ನಾನೆ ಆಹುತ ॥ ॥೧೬॥ 16

ನಾನೆ ಜಗತ ಪಿತನು ಮತ್ತೆ । ನಾನೆ ಮಾತೆಯಾಗಿ ಇಹೆನು
ನಾನೆ ಧಾತ ನಾನೆ ಪಿತಾಮಹನು ಆಗಿಹೆ ।
ನಾನೆ ಆ ಪವಿತ್ರ ವೇದ್ಯ । ವಸ್ತು ಓಂಕಾರ ನಾನೆ
ನಾನೆ ಮತ್ತೆ ಋಕ್ ಸಾಮ ಯಜುರ್ವೇದವು ॥ ॥೧೭॥ 17

ನಾನೆ ಗತಿಯು ನಾನೆ ಭರ್ತ । ನಾನೆ ಪ್ರಭುವು ನಾನೆ ಸಾಕ್ಷಿ
ನಾನೆಯಾ ನಿವಾಸ ನಾನೆ ಶರಣು ಸುಹೃತನು ।
ನಾನೆ ಪ್ರಭವ ನಾನೆ ಪ್ರಲಯ । ನಾನೆ ಸ್ಥಾನವಾ ನಿಧಾನ
ನಾನೆ ಬೀಜ ನಾನೆ ಅವ್ಯಯನು ಆಗಿಹೆ ॥ ॥೧೮॥ 18

ನಾನೆ ತಪಿಪೆಯಲ್ಲದೇಯೆ । ನಾನೆ ವರ್ಷವನ್ನು ಕರೆವೆ
ನಾನೆ ಮತ್ತೆ ವರ್ಷವನ್ನು ಉತ್ಸೃಜಿಸುವೆನು ।
ನಾನೆ ಅಮೃತವಾಗಿ ಇಹೆನು । ನಾನೆ ಮೃತ್ಯುವಾಗಿ ಇಹೆನು
ನಾನೆ ಆ ಸದಸತ್ತಾಗಿ ಇರುವೆನರ್ಜುನ ॥ ॥೧೯॥ 19

ಮೂರು ವೇದನಿಷ್ಠರವರು । ಸೋಮಪಾನ ಮಾಡಿ ಪಾಪ
ದೂರರಾಗಿ ನನ್ನ ಯಜ್ಞಗಳಿಂದಿಷ್ಟಿಸಿ ।
ಕೋರುವವರು ಸ್ವರ್ಗವದುವೆ । ಪುಣ್ಯದಿಂದಲಿಂದ್ರ ಲೋಕ
ಸೇರಿಯಲ್ಲಿ ದಿವ್ಯದೇವ ಭೋಗ ಭೋಗಿಪರ್ ॥ ॥೨೦॥ 20

ಅವರು ಆ ವಿಶಾಲ ಸ್ವರ್ಗ । ಲೋಕವನ್ನು ಭೋಗಿಸುತಲಿ
ಅವರ ಪುಣ್ಯ ತೀರೆ ಮರ್ತ್ಯಲೋಕಕ್ಕೈದುವರ್ ।
ಇವರು ಕಾಮಕಾಮರಾದ । ಮೂರುಧರ್ಮನಿಷ್ಠ ರಿಂತು
ವಿವಶರಾಗಿ ಗತಾಗತಗಳನ್ನು ಪಡೆಯುವರ್ ॥ ॥೨೧॥ 21

ಯಾವ ಜನರು ತಾವು ಬಿಡದ । ನನ್ನ ಚಿಂತೆಯಿಂದಲೆನ್ನ
ಭಾವ ಬುದ್ಧಿಯಿಂದಲುಪಾಸನೆಯ ಮಾಳ್ಪರೊ ।
ಓವಿ ನಿತ್ಯ ಯುಕ್ತರಾದ । ಅವರ ಯೋಗಕ್ಷೇಮವನ್ನು
ಕಾವುದರ್ಕೆ ದಿಟದೆಯದನು ನಾನು ವಹಿಪೆನು ॥ ॥೨೨॥ 22

ಯಾವ ಅನ್ಯದೇವತೆಗಳ । ಭಕ್ತರಾದರೂವೆ ಕೂಡ
ಓವಿ ಶ್ರದ್ಧೆಯಿಂದಲವರ ಬಿಡದೆ ಯಜಿಪರೊ ।
ತಾವು ಕೂಡ ನನ್ನನೇಯೆ । ಯುಜಿಪರವಿಧಿಪೂರ್ವಕದಲಿ
ಭಾವದಿಂದಲಿದನು ತಿಳಿಯೊ ಕುಂತಿತನಯನೆ ॥ ॥೨೩॥ 23

ಸರುವವಾದ ಯಜ್ಞಗಳಿಗು । ಭೋಕ್ತೃ ಮತ್ತೆ ಪ್ರಭುವು ನಾನೆ
ಅರಿಯರಿದನು ಅನ್ಯದೇವತೆಗಳ ಭಕ್ತರು ।
ಅರಿಯರವರು ತತ್ವದಿಂದ । ಲಾದರೆನ್ನನಿಂತು ಎಂದು
ಪರಿಯಲಿಂತು ಅವರು ಇರದೆ ಚ್ಯುತರು ಅಪ್ಪರು ॥ ॥೨೪॥ 24

ಪಡೆವರವರು ದೇವತೆಗಳ । ದೇವತೆಗಳ ಪೂಜಿಪವರು
ಬಿಡದೆ ಪಿತೃವ್ರತರು ಪಿತೃಗಳನ್ನು ಪಡೆವರು ।
ಪಡೆವರವರು ಭೂತಗಳನು । ಭೂತಗಳನು ಪೂಜಿಪವರು
ಬಿಡದೆ ಎನ್ನ ಪೂಜಿಪವರು ಪಡೆವರೆನ್ನನು ॥ ॥೨೫॥ 25

ಯಾವನವನು ಪತ್ರವನ್ನು । ಪುಷ್ಪವನ್ನು ಫಲವ ಜಲವ
ಓವಿ ಭಕ್ತಿಯಿಂದಲೆನಗೆ ಸಮರ್ಪಿಸುವನೊ ।
ತೀವಿದಾ ಪ್ರಯತ್ನಶೀಲ । ಭಕ್ತ್ಯರ್ಪಿತವದು ಅದನು
ಸೇವಿಸುವೆನು ಬಿಡದೆ ನಾನು ಪ್ರೀತಿಯಿಂದಲಿ ॥ ॥೨೬॥ 26

ಏನ ಗೈವೆ ಏನ ತಿಂಬೆ । ಏನ ಹೋಮಗೈವೆ ನೀನು
ಏನ ದಾನ ಕೊಡುವೆ ನೀನು ಬಿಡದೆ ಅವುಗಳ ।
ಏನ ತಪವ ಗೈವೆ ನೀನು । ಅದನು ಕೂಡ ಬಿಡದೆ ಎನಗೆ
ನೀನು ಅರ್ಪಣೇಯಮಾಡು ಕುಂತಿತನಯನೆ ॥ ॥೨೭॥ 27

ಹೀಗೆ ಮಾಡಿದರೆಯು ನೀನು । ಶುಭಾಶುಭದ ಫಲವ ಕೊಡುವು
ದಾಗಿ ಇರುವ ಕರ್ಮಬಂಧ ಮುಕ್ತನಾಗುವೆ ।
ಆಗ ಸಂನ್ಯಾಸಯೋಗ । ಯುಕ್ತ ಆತ್ಮಬಂಧಮುಕ್ತ
ನಾಗಿ ನೀನು ಇರದೆ ನನ್ನ ಬಿಡದೆ ಪಡೆಯುವೆ ॥ ॥೨೮॥ 28

ಸರುವ ಭೂತಗಳೊಳು ಸಹಿತ । ಸಮನು ಆಗಿ ಇಹೆನು ನಾನು
ಇರುವುದಿಲ್ಲ ನನಗೆ ಯಾವ ದ್ವೇಷ ಪ್ರಿಯವದು ।
ನಿರುತ ಭಕ್ತಿಯಿಂದ ನನ್ನ । ನಾರು ಬಿಡದೆ ಭಜಿಸುವವರೊ
ಇರುವರೆನ್ನೊಳವರು ಮತ್ತೆಯವರೊಳಾನಿಹೆ ॥ ॥೨೯॥ 29

ಎಂತ ದುರಾಚಾರಿಯಾದ । ರೂ ಅನನ್ಯಭಕ್ತಿಯಿಂದ
ಲೆಂತು ಬಿಡದೆ ತಾನು ಸದಾ ನನ್ನ ಭಜಿಪನೊ ।
ಅಂತೆ ಅವನು ಸಾಧುವೆಂದು । ಬಗೆಯತಕ್ಕನಹನು ದಿಟವು
ಎಂತು ಎಂದರವನು ಸುನಿರ್ಧಾರವುಳ್ಳವ ॥ ॥೩೦॥ 30

ಅವನು ಕ್ಷಿಪ್ರದಿಂದೆ ಧರ್ । ಮಾತ್ಮನಹನು ನಿಜದೆ ಮತ್ತೆ
ಅವನು ಶಾಶ್ವತದಲಿ ಶಾಂತಿಯನ್ನು ಪಡೆವನು ।
ಲವದೆ ಕೂಡ ನನ್ನ ಭಕ್ತ । ನಿಂಗೆ ತಾ ವಿನಾಶವಿಲ್ಲ
ವಿವನು ನಿಶ್ಚಯದಲಿ ತಿಳಿಯೊ ಕುಂತಿತನಯನೆ ॥ ॥೩೧॥ 31

ನನ್ನನೇಯೆ ಪಾರ್ಥ ಭಕ್ತಿ । ಯಿಂದ ಆಶ್ರಯಿಸುತ ತಾವು
ಇನ್ನು ಬೇರೆಯಿಲ್ಲದಾವ ಪಾಪಯೋನಿಜರ್ ।
ಅನ್ಯರಾದ ಸ್ತ್ರೀಯರವರು । ವೈಶ್ಯ ಶೂದ್ರರುಗಳು ಕೂಡ
ಸನ್ನುತವಹ ಪರಮಗತಿಯ ಬಿಡದೆ ಪಡೆವರು ॥ ॥೩೨॥ 32

ಪರಮಪುಣ್ಯ ಬ್ರಾಹ್ಮಣರುವೆ । ಭಕ್ತರು ರಾಜರ್ಷಿಗಳುವೆ
ಪರಮಗತಿಯ ಪಡೆವರೆಂದು ಹೇಳಲೇನದ ।
ಬರಿದ ನಿತ್ಯವಸುಖ ಘೋರ । ವಾದ ಲೋಕವಿದನು ಸೇರಿ
ಇರುವ ನೀನು ಬಿಡದೆ ನನ್ನ ಭಜಿಸು ಪಾರ್ಥನೆ ॥ ॥೩೩॥ 33

ನನ್ನೊಳು ನೀ ಮನವನಿರಿಸು । ನನ್ನ ಭಕ್ತನಾಗು ನೀನು
ನನ್ನ ಕುರಿತು ಯಜ್ಞ ಮಾಡು ನಮಿಸು ನನ್ನನು ।
ನನ್ನನೇಯೆ ಪರಮಗತಿಯು । ಎಂದು ಆತ್ಮಯುಕ್ತನಾಗಿ
ನನ್ನನೇಯೆ ಭಾವಿಸುತ್ತ ಪಡೆವೆ ನನ್ನನು ॥ ॥೩೪॥ 34

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಒಂಬತನೆಯ**
**ಸಾಂತ ರಾಜವಿದ್ಯ ರಾಜಗುಹ್ಯಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ಹತ್ತು

# ವಿಭೂತಿಯೋಗ

ಕೇಳು ಮಹಾಬಾಹು ಮತ್ತೆ । ನನ್ನ ಪರಮ ವಚನವನ್ನು
ಕೇಳುವಂಥ ಪ್ರೀಯಮಾಣನಾದ ನಿನಗೆಯೆ ।
ಪೇಳುವೆನದ ನಾನು ನಿನ್ನ । ಹಿತದ ಕಾಮನೆಯಿಂ ತಾನೆ
ಕೇಳು ಎನುತ ಸಿರಿಯ ಕೃಷ್ಣ ನುಡಿದ ಪಾರ್ಥಗೆ ॥ ॥೧॥ 1

ಸುರರ ಗಣವು ತಾ ಮಹರ್ಷಿ । ಗಳುವೆ ನನ್ನ ಪ್ರಭವವನ್ನು
ಅರಿಯರವರು ತಾವು ಎಂತು ಏತಕೆಂದರೆ ।
ಸರುವವಾದ ದೇವತೆಗಳಿ । ಗೂವೆ ತಾ ಮಹರ್ಷಿಗಳಿಗು
ಸರುವ ರೀತಿ ನಾನು ಆದಿಯಾಗಿ ಇರುವೆನು ॥ ॥೨॥ 2

ಯಾವನವನು ಲೋಕ ಮಹೇ । ಶ್ವರನು ಆದ ನನ್ನ ತಾನು
ಭಾವಿಸುವನನಾದಿ ಮತ್ತೆ ಅಜನು ಎಂತಲು ।
ಯಾವ ಈ ಮರ್ತ್ಯರಲ್ಲಿ । ಅಸಂಮೂಢನೆನಿಪನವನು
ಯಾವ ಸರ್ವ ಪಾಪಗಳಿಂ ಮುಕ್ತನಾಗುವ ॥ ॥೩॥ 3

ಅದುವೆ ಬುದ್ಧಿ ಜ್ಞಾನವಸಂ । ಮೋಹ ಮತ್ತೆ ಕ್ಷಮೆಯು ತಾನು
ಅದುವೆ ಸತ್ಯ ದಮೆಯು ಮತ್ತೆ ಶಮೆಯು ತಾನದು ।
ಅದುವೆ ಸುಖವು ಮತ್ತೆ ದುಃಖ । ಭಾವವಾ ಅಭಾವ ತಾನು
ಅದುವೆ ಭಯವು ಮತ್ತೆ ತಾನು ಅಭಯವೆನಿಪದು ॥ ॥೪॥ 4

ಅದುವೆ ಆ ಅಹಿಂಸೆ ತಾನು । ಸಮತೆ ಮತ್ತೆ ತುಷ್ಟಿ ತಾನು
ಅದುವೆ ತಪಸು ದಾನ ಯಶವು ಮತ್ತೆ ಅಯಶವು ।
ಅದುವೆ ಭೂತಗಳಲಿ ಕಾಂಬ । ವಿವಿಧವಾದ ಭಾವಗಳಿವು
ಅದುವೆ ತಾವು ನಿಜದೆ ನನ್ನವೇಯೆ ಆಗಿವೆ ॥ ॥೫॥ 5

ಹಿಂದೆ ಸಪ್ತಮಹರ್ಷಿಗಳು । ಅವರುಗಳಿಗೆ ಪೂರ್ವದಲ್ಲಿ
ಸಂದು ಹೋದ ಹಾಗು ನಾಲ್ಕು ಜನರು ಮನುಗಳು ।
ಬಂದರವರು ಹುಟ್ಟಿ ನನ್ನ । ಮನದೆ ಭಾವರೂಪರಾಗಿ
ಮುಂದೆ ಅವರಿನಿಂದ ಲೋಕದಿವರು ಪ್ರಜೆಗಳು ॥ ॥೬॥ 6

ಅದುವೆ ಯಾವನವನು ನನ್ನ । ಈ ವಿಭೂತಿ ಮತ್ತೆ ಯೋಗ
ವಿದನು ತಾನು ತತ್ವದಿಂದ ಬಿಡದೆ ತಿಳಿವನೊ ।
ಅದರಿನವನು ತಾ ವಿಕಂಪ । ವಿಲ್ಲದಂಥ ಪರಮಯೋಗ
ವದನು ಪಡೆವನಿದರೊಳಿಲ್ಲ ಯಾವ ಸಂಶಯ ॥ ॥೭॥ 7

ಸರುವವಾದುದೆಲ್ಲದಕ್ಕು । ಪ್ರಭವವಾಗಿ ಇರುವೆ ನಾನು
ಸರುವವು ನನ್ನಿಂದಲೇಯೆ ಪ್ರವರ್ತಿಸುವುದು ।
ಅರಿತು ಇದನು ಬುಧರು ತಾವು । ಭಾವಸಮನ್ವಿತರು ಆಗಿ
ಇರದೆ ಅವರು ನನ್ನನೇಯೆ ಬಿಡದೆ ಭಜಿಪರು ॥ ॥೮॥ 8

ಚಿತ್ತವೆನ್ನೊಳಿಟ್ಟಿರುವರು । ಪ್ರಾಣವೆನ್ನೊಳರ್ಪಿಸಿಹರು
ಮತ್ತೆ ಬೋಧಿಸುತ್ತಲವರು ಪರಸ್ಪರದಲಿ ।
ನಿತ್ಯ ನನ್ನ ಗುಣದ ಕಥೆಯ । ಕೀರ್ತಿಸುತ್ತಲವರು ಬಿಡದೆ
ಮತ್ತೆ ಸಂತುಷ್ಟರಹರು ರಮಣಗೈವರು ॥ ॥೯॥ 9

ಸತತ ಯುಕ್ತರಾಗಿ ಮತ್ತೆ । ಪ್ರೀತಿಪೂರ್ವಕದೆ ತಾವು
ಸತತವಾಗಿ ಬಿಡದೆ ನನ್ನ ಭಜಿಸುವವರಿಗೆ ।
ರತರು ಅವರಿಗಾನು ಕೊಡುವೆ । ಬುದ್ಧಿಯೋಗವನ್ನು ಅವರು
ನುತರು ಎನಿಸಿ ಅದರಿನಿಂದ ನನ್ನ ಸೇರ್ವರು ॥ ॥೧೦॥ 10

ಅವರ ಮೇಲಿನಾ ಅನುಕಂ । ಪಾರ್ಥವಾಗಿ ನಾನು ಅಲ್ಲಿ
ಅವರ ಆ ಅಜ್ಞಾನದಿಂದಲೊಗೆದ ತಮವನು ।
ಅವರ ಆತ್ಮಭಾವರೂಪ । ಸ್ಥಿತನು ಆಗಿ ನಾಶಗೊಳಿಪೆ
ಜವದೆ ಭಾಸಮಾನ ಜ್ಞಾನದೀಪದಿಂದಲಿ ॥ ॥೧೧॥ 11

ಪರಂಬ್ರಹ್ಮನೆಂದು ನಿನ್ನ । ಮತ್ತೆ ಪರಂಧಾಮನೆಂದು
ಪರಮವಾಗಿ ನೀ ಪವಿತ್ರನಿರುವೆಯೆಂತಲು ।
ಪರಮ ಶಾಶ್ವತನುವೆ ಆದ । ದಿವ್ಯ ಪುರುಷ ನೀನು ಎಂದು
ಸರುವಕಾದಿ ದೇವನಜನು ವಿಭುವು ಎಂತಲು ॥ ॥೧೨॥ 12

ಸರುವ ಋಷಿಗಳವರು ತಾವು । ಬಿಡದೆ ಪೇಳ್ವರಿಂತು ನಿನ್ನ
ಸುರರ ಋಷಿಯು ಆದ ನಾರದರು ಅಂತೆಯೆ ।
ವರರು ಅಸಿತ ದೇವಲನುವೆ । ವ್ಯಾಸ ಸಹಿತ ಪೇಳ್ವರಂತೆ
ಇರದೆ ಸ್ವಯಂ ನೀನು ಕೂಡ ಅಂತೆ ಪೇಳುವೆ ॥ ॥೧೩॥ 13

ನಾನು ಸರ್ವವನ್ನಿದನ್ನು । ಋತವು ಎಂದೆ ಭಾವಿಸುವೆನು
ನೀನು ನನಗೆ ಹೇಳಿದಂಥ ಮಾತ ಕೇಶವ ।
ಏನೆನೆ ಭಗವಂತ ನಿನ್ನ । ಪರಮ ವ್ಯಕ್ತಿತ್ವವನ್ನು
ದಾನವರುವೆ ದೇವತೆಗಳು ಕೂಡ ಅರಿಯರು ॥ ॥೧೪॥ 14

ನೀನೆ ಸ್ವಯಂ ಆಗಿ ನಿನ್ನ । ಆತ್ಮದಿಂದಲಾತ್ಮನನ್ನು
ನೀನೆ ತಿಳಿದು ಇರುವೆಯೆಲ್ಲೈ ಸುಪುರುಷೋತ್ತಮ ।
ನೀನೆ ಎಲ್ಲೈ ಭೂತಭಾವ । ನನೆಯೆ ಎಲ್ಲೈಭೂತೇಶ
ನೀನೆ ಎಲ್ಲೈ ದೇವದೇವ ಜಗತ್ಪತಿಯೆಲ್ಲೈ ॥ ॥೧೫॥ 15

ಅದುವೆ ದಿಟವು ನಿನ್ನ ಆತ್ಮ । ವಿಭೂತಿಗಳು ದಿವ್ಯವಹವು
ಅದನು ನನಗಶೇಷವಾಗಿ ದೇವ ಪೇಳ್ವುದು ।
ಅದುವೆ ಯಾವ ವಿಭೂತಿಗಳಿಂ । ಲೋಕವಿವುಗಳಲ್ಲಿ ನೀನು
ವಿಧದೆ ನಿಂತು ವ್ಯಾಪಿಸಿರುವೆ ಎಂದನರ್ಜುನ ॥ ॥೧೬॥ 16

ಯಾವ ರೀತಿ ತಿಳಿಯಬಲ್ಲೆ । ನಾನು ಯೋಗಿಯಾದ ನಿನ್ನ
ನೋವಿ ನಿರಂತರವು ಬಿಡದೆ ಚಿಂತಿಸುತ್ತಲಿ ।
ಯಾವ ಯಾವ ಭಾವಗಳಲಿ । ಮತ್ತೆ ನಾನು ಇರದೆ ನಿನ್ನ
ಓವುತ ಭಗವಂತ ಚಿಂತಿಸಲುವೆ ಬೇಕೆಲ್ಲೈ ॥ ॥೧೭॥ 17

ಮತ್ತೆಯೊಮ್ಮೆ ನಿನ್ನ ಯೋಗ । ವನ್ನು ಆ ವಿಭೂತಿಯನ್ನು
ಮತ್ತೆ ಸವಿಸ್ತಾರವಾಗಿ ಪೇಳ್ ಜನಾರ್ದನ ।
ಏತಕೆಂದರದುವೆ ನನಗೆ । ನಿನ್ನ ಅಮೃತಮಯವು ಆದ
ಮಾತನೆಷ್ಟು ಕೇಳಿದರದುವೆ ತೃಪ್ತಿಯಿಲ್ಲವು ॥ ॥೧೮॥ 18

ಇರದೆ ಈಗ ನಿನಗೆ ನಾನು । ಕಥಿಪೆನಹುದು ಅದನು ನಿಜದೆ
ಇರುವುವೆನ್ನ ಆತ್ಮವಿಭೂತಿಗಳು ದಿವ್ಯವು ।
ಇರಲಿ ಮುಖ್ಯವಾದ ಎನ್ನ । ಆತ್ಮ ವಿಭೂತಿಗಳ ಪೇಳ್ವೆ
ನಿರದು ಕುರುಶ್ರೇಷ್ಠ ವಿಸ್ತರಾಂತ್ಯವೆನ್ನದು ॥ ॥೧೯॥ 19

ನಾನು ಸರ್ವಭೂತಗಳೊಳು । ಅತ್ಮನಿಹೆನು ಗುಡಾಕೇಶ
ನಾನು ಸರ್ವಭೂತರಾದಿ ಮಧ್ಯ ಅಂತವು । 20
ನಾನು ಆದಿತ್ಯ ವಿಷ್ಣು । ಜ್ಯೋತಿರಂಶುಮಾನ ರವಿಯು
ನಾನು ಆ ಮರುನ್ಮರೀಚಿ ತಾರೆಗಳ ಶಶಿ ॥ ॥೨೦॥ 21

ನಾನು ಎಲ್ಲ ವೇದಗಳೊಳು । ಸಾಮವೇದವಾಗಿ ಇಹೆನು
ನಾನು ದೇವತೆಗಳಲಾಗಿಹೆನು ವಾಸವ ।
ನಾನು ಇಂದ್ರಿಯಗಳಲೆಲ್ಲ । ಮನಸ್ಸಾಗಿ ಇಹೆನು ಮತ್ತೆ
ನಾನು ಭೂತಗಳಲಿ ಆಗಿಹೆನು ಚೇತನ ॥ ॥೨೧॥ 22

ನಾನು ರುದ್ರರುಗಳಲೆಲ್ಲ । ಶಂಕರನುವೆ ಆಗಿ ಇಹೆನು
ನಾನೆಯೆ ವಿತ್ತೇಶ ಯಕ್ಷರಕ್ಷರುಗಳಲಿ ।
ನಾನು ವಸುಗಳಲ್ಲಿ ಮತ್ತೆ । ಪಾವಕನುವೆ ಆಗಿ ಇಹೆನು
ನಾನು ಮೇರುವಾಗಿ ಇಹೆನು ಪರ್ವತಗಳಲಿ ॥ ॥೨೨॥ 23

ವರರು ಪುರೋಹಿತರುಗಳಲಿ । ಮುಖ್ಯ ಬೃಹಸ್ಪತಿಯು ಎಂದು
ಅರಿಯೊ ಪಾರ್ಥ ನನ್ನ ನೀನು ಬಿಡದೆ ಏಗಲು ।
ಪರಮ ಸೇನಾನಿಗಳಲಿ । ಸ್ಕಂದನಾಗಿ ಇಹೆನು ನಾನು
ಸರಸಿಗಳಲಿ ನಾನು ಆಗಿ ಇಹೆನು ಸಾಗರ ॥ ॥೨೩॥ 24

ನಾನು ಮಹರ್ಷಿಗಳಲೆಲ್ಲ । ಭೃಗುಮಹರ್ಷಿ ವಾಕ್ಕುಗಳಲಿ
ನಾನು ಓಂ ಕಾರವೆನಿಪ ಏಕದಕ್ಷರ ।
ನಾನು ಎಲ್ಲ ಯಜ್ಞಗಳಲಿ । ಜಪದ ಯಜ್ಞವಾಗಿ ಇಹೆನು
ನಾನು ಸ್ಥಾವರಂಗಳಲ್ಲಿ ಆ ಹಿಮಾಲಯ ॥ ॥೨೪॥ 25

ಸರ್ವ ವೃಕ್ಷಗಳಲಿ ನಾನು । ಅಶ್ವತ್ಥವಾಗಿ ಇಹೆನು
ಸರ್ವ ದೇವಋಷಿಗಳಲ್ಲಿ ನಾನು ನಾರದ ।
ಸರ್ವ ಗಂಧರ್ವರಲ್ಲಿ । ಚಿತ್ರರಥನು ಆಗಿ ಇಹೆನು
ಸರ್ವ ಸಿದ್ಧರಲ್ಲಿ ನಾನು ಕಪಿಲಮುನಿಯಿಹೆ ॥ ॥೨೫॥ 26

ಅದುವೆ ತಿಳಿಯೊ ಅಶ್ವಗಳಲಿ । ಅಮೃತದಿಂದಲುದ್ಭವಿಸಿದ
ಅದುವೆ ವರೋಚ್ಛೈಶ್ರವಸ್ಸು ಎಂದು ನನ್ನನು ।
ಅದುವೆ ಗಜೇಂದ್ರರುಗಳಲ್ಲಿ । ವರೈರಾವತವು ಎಂದು
ಅದುವೆ ನರರುಗಳಲಿ ನರಾಧಿಪನು ಎಂತಲು ॥ ॥೨೬॥ 27

ನಾನು ಆಯುಧಂಗಳಲ್ಲಿ । ವಜ್ರವಾಗಿ ಇಹೆನು ಮತ್ತೆ
ನಾನು ಧೇನುಗಳಲಿ ಕಾಮಧೇನುವಾಗಿಹೆ ।
ನಾನು ಪ್ರಜನರಲ್ಲಿ[34] ಕಂ । ದರ್ಪನಾಗಿ ಇಹೆನು ಮತ್ತೆ
ನಾನು ಸರ್ಪಗಳೊಳು ವಾಸುಕಿಯು ಆಗಿಹೆ ॥ ॥೨೭॥ 28

ನಾನು ನಾಗಗಳಲಿ ಆ । ಅನಂತನಾಗಿ ಇಹೆನು ಮತ್ತೆ
ನಾನು ಯಾದಸರಲಿ[35] ಆ ವರುಣನಾಗಿಹೆ ।
ನಾನು ಪಿತರುಗಳಲಿ ಆರ್ಯ । ಮನುವೆ ಆಗಿ ಇಹೆನು ಮತ್ತೆ
ನಾನು ಸಂಯಮರುಗಳಲ್ಲಿ ಯಮನು ಆಗಿಹೆ ॥ ॥೨೮॥ 29

ನಾನು ದೈತ್ಯರಲ್ಲಿ ಪ್ರ । ಹ್ಲಾದನಾಗಿ ಇಹೆನು ಮತ್ತೆ
ನಾನು ಕಲಯತರು[36]ಗಳಲ್ಲಿ ಕಾಲನಾಗಿಹೆ ।
ನಾನು ಮೃಗಗಳಲ್ಲಿ ಮತ್ತೆ । ಆ ಮೃಗೇಂದ್ರನಾಗಿ ಇಹೆನು
ನಾನು ಪಕ್ಷಿಗಳೊಳು ವೈನತೇಯನಾಗಿಹೆ ॥ ॥೨೯॥ 30

ನಾನು ಪಾವಿತರೊಳು [37]ನಿಜದೆ । ಪವನನಾಗಿ ಇಹೆನು ಮತ್ತೆ
ನಾನು ಶಸ್ತ್ರಧಾರಿಗಳಲಿ ರಾಮನಾಗಿಹೆ ।
ನಾನು ಜಲದ ಮೀನುಗಳೊಳು । ಮಕರವಾಗಿ ಇಹೆನು ಮತ್ತೆ
ನಾನು ಸ್ರೋತಗಳಲಿ ಜಾಹ್ನವಿಯು ಅಗಿಹೆ ॥ ॥೩೦॥ 31

ನಾನು ಸರ್ಗಗಳಿಗೆ ಆದಿ । ಯಾಗಿ ಅಂತವಾಗಿ ಮತ್ತೆ
ನಾನು ಮಧ್ಯವಾಗಿ ಇಹೆನು ತಿಳಿಯೊ ಅರ್ಜುನ ।
ನಾನು ವಿದ್ಯೆಗಳಲಿ ಆ । ಧ್ಯಾತ್ಮ ವಿದ್ಯೆಯಾಗಿ ಇಹೆನು
ನಾನು ಪ್ರವದತರು[38]ಗಳಲ್ಲಿ ವಾದವಾಗಿಹೆ ॥ ॥೩೧॥ 32

34. ಪ್ರಜನರಲ್ಲಿ = ಪ್ರಜೋತ್ಪತ್ತಿ ಕಾರಣರಲ್ಲಿ
35. ಯಾದಸರಲಿ = ಜಲಜೀವಿಗಳಲ್ಲಿ
36. ಕಲಯತರು = ಭಕ್ಷಕರು, ನಾಶಕಾರರು
37. ಪಾವಿತರೊಳು = ಪಾವನಗೊಳಿಸುವವರಲ್ಲಿ
38. ಪ್ರವದತರು = ವಾದಿಸುವವರು

ನಾನು ಅಕ್ಷರಗಳಿಗೆಲ್ಲ ಆ । ಅ ಕಾರವಾಗಿ ಇಹೆನು
ನಾನು ಆ ಸಮಾಸಗಳಲಿ ದ್ವಂದ್ವವಾಗಿಹೆ ।
ನಾನೆ ಅಕ್ಷಯನುವೆ ಆದ । ಕಾಲನಾಗಿ ಇಹೆನು ಮತ್ತೆ
ನಾನು ವಿಶ್ವತೋಮುಖನು ಆದ ಧಾತನು ॥ ॥೩೩॥ 33

ನಾನು ಸರ್ವಹರವು ಆದ । ಮೃತ್ಯುವಾಗಿ ಇಹೆನು ಮತ್ತೆ
ನಾನು ಆ ಭವಿಷ್ಯರೊಳುದ್ಭವನು ಆಗಿಹೆ ।
ನಾನು ಸ್ತ್ರೀಯ ಭಾವಗಳಲಿ । ಕೀರ್ತಿ ಶ್ರೀಯು ವಾಕ್ಕು ಮತ್ತೆ
ನಾನು ಸ್ಮೃತಿಯು ಮೇಧೆ ಧೃತಿಯು ಕ್ಷಮೆಯು ಆಗಿಹೆ ॥ ॥೩೪॥ 34

ನಾನು ಸಾಮಗಳಲಿ ಬೃಹ । ತ್ಸಾಮವಾಗಿ ಇಹೆನು ಮತ್ತೆ
ನಾನು ಛಂಧಗಳಲಿ ಗಾಯತ್ರಿಯಾಗಿಹೆ ।
ನಾನು ಮಾಸಗಳಲಿ ಮಾರ್ಗ । ಶೀರ್ಷ ಮಾಸವಾಗಿ ಇಹೆನು
ನಾನು ಋತುಗಳಲ್ಲಿ ಆ ವಸಂತನಾಗಿಹೆ ॥ ॥೩೫॥ 35

ನಾನು ಛಲಯತರು[39]ಗಳಲ್ಲಿ । ದ್ಯೂತವಾಗಿ ಇಹೆನು ಮತ್ತೆ
ನಾನು ತೇಜಸ್ವಿಗಳಲಿ ತೇಜವಾಗಿಹೆ ।
ನಾನು ಜಯವು ಆಗಿ ಇಹೆನು । ಆಗಿಹೆ ವ್ಯವಸಾಯವೂವೆ
ನಾನು ಸತ್ವವಂತರಲ್ಲಿ ಸತ್ವವಾಗಿಹೆ ॥ ॥೩೬॥ 36

ನಾನು ವೃಷ್ಣಿಗಳಲಿ ವಾಸು । ದೇವನಾಗಿ ಇಹೆನು ಮತ್ತೆ
ನಾನು ಪಾಂಡವರುಗಳಲ್ಲಿ ಆ ಧನಂಜಯ ।
ನಾನು ಮುನಿಗಳಲ್ಲಿಯೂವೆ । ವ್ಯಾಸಮುನಿಯು ಆಗಿ ಇಹೆನು
ನಾನು ಕವಿಗಳಲ್ಲಿ ಉಶನ ಕವಿ[40]ಯು ಆಗಿಹೆ ॥ ॥೩೭॥ 37

ನಾನು ದಮಯತರು[41]ಗಳಲ್ಲಿ । ದಂಡವಾಗಿ ಇಹೆನು ಮತ್ತೆ
ನಾನು ಆ ಜಿಗೀಷುಗಳಲಿ[42] ನೀತಿಯಾಗಿಹೆ ।
ನಾನು ಗುಹ್ಯಗಳಲಿ ಅದುವೆ । ಮೌನವಾಗಿ ಇಹೆನು ಮತ್ತೆ
ನಾನು ಜ್ಞಾನವಂತರಲ್ಲಿ ಜ್ಞಾನವಾಗಿಹೆ ॥ ॥೩೮॥ 38

39. ಛಲಯತರು = ಜೂಜಾಡುವವರು
40. ಉಶನ ಕವಿ = ಶುಕ್ರಾಚಾರ್ಯ
41. ದಮಯತರು = ದಮನ ಮಾಡುವವರು
42. ಜೀಗಿಷುಗಳಲಿ = ಜಯಾಪೇಕ್ಷಿಗಳಲ್ಲಿ

ಸರುವ ಭೂತಗಳಿಗೆ ಕೂಡ । ಯಾವುದದುವು ಬೀಜವಹುದೊ
ಇರುವೆ ನಾನು ಅದುವೆ ಬೀಜವಾಗಿ ಅರ್ಜುನ ।
ಇರದು ನನ್ನ ವಿನಹ ಅನ್ಯ । ವಾದ ವಸ್ತುವದುವು ನಿಜದೆ
ಇರದು ಯಾವ ಭೂತ ಚರಾಚರವು ತಾನದು ॥ ॥೩೯॥ 39

ಇರುವುದಿಲ್ಲ ತಾನು ನಿಜದೆ । ಅಂತವೆನ್ನ ದಿವ್ಯವಾದ
ಮೆರೆವ ಆ ವಿಭೂತಿಗಳಿಗೆ ಹೇ ಪರಂತಪ ।
ಸರಿಯ ಸುನಿರ್ದೇಶಕಾಗಿ । ವಿಭೂತಿ ವಿಸ್ತಾರವಿದುವು
ಒರೆಯೆಪಟ್ಟುದೆನ್ನಿಮೀಗ ನಿನಗೆ ಅರ್ಜುನ ॥ ॥೪೦॥ 40

ಅದುವೆ ಯಾವು ಯಾವುದದುವು । ಆ ವಿಭೂತಿವಂತ ಸತ್ವ
ವದುವು ಮತ್ತೆ ಶ್ರೀಮದೂರ್ಜಿತವು ಇರುವುದೊ ।
ಅದುವೆಯದನು ಎಲ್ಲವದನು । ನೀನು ಚೆನ್ನಾಗಿ ತಿಳಿಯೊ
ಅದುವೆ ಇರುವುದೆನ್ನ ತೇಜದಂಶ ಸಂಭವ ॥ ॥೪೧॥ 41

ಇನಿತು ಇದುವು ಸವಿಸ್ತಾರ । ವಾಗಿ ವಿಶದವಾಗಿ ಅಥವ
ಎನಿತು ನಿನ್ನಿಮಿದುವು ತಿಳಿದೊಡೇನು ಅರ್ಜುನ ।
ಇನಿತು ಪೂರ್ಣವಾದ ಎಲ್ಲ । ಸ್ಥಿತವು ಅದ ಜಗತನಿದನು
ನನತದೇಕಾಂಶ ಮಾತ್ರದಿಂದ ಧರಿಸಿಹೆ ॥ ॥೪೨॥ 42

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತನೆಯದು**
**ಸಾಂತಗೊಂಡ ಆ ವಿಭೂತಿ ನಾಮಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ಹನ್ನೊಂದು

# ವಿಶ್ವರೂಪ ದರ್ಶನ ಯೋಗ

ನನ್ನ ಆ ಅನುಗ್ರಹಾರ್ಥ । ನೀನು ಅದಧ್ಯಾತ್ಮವೆಂಬು
ದನ್ನು ಪರಮ ಗುಹ್ಯವನ್ನು ಕೃಷ್ಣ ಪೇಳಿದ್ಯೆ ।
ನಿನ್ನಿಮುಕ್ತವಾದ ಅದುವೆ । ಯೋಗ್ಯವಾದ ವಚನಗಳಿಂ
ದೆನ್ನ ಮೋಹವದುವು ಪೂರ್ಣವಿಗತವಾಯಿತು ॥ ॥೧॥ 1

ಭೂತರುಗಳ ಸೃಷ್ಟಿಕಾರ್ಯ । ನಾಶಕಾರ್ಯವದುವು ಕೂಡ
ಬಿತ್ತರದಲಿ ನನಗೆ ಈಗ ಶ್ರುತವು ಆಯಿತು ।
ಮತ್ತೆ ಕಮಲಪತ್ರಾಕ್ಷ । ನಿನ್ನ ಅವ್ಯಯವು ಆದ
ಸತ್ವದಾ ಮಹಾತ್ಮ್ಯ ಕೂಡ ಶ್ರುತವು ಆಯಿತು ॥ ॥೨॥ 2

ಹೇಗೆ ನೀನು ನಿನ್ನ ಆತ್ಮ । ನನ್ನು ಕುರಿತು ನುಡಿದು ಇಹೆಯೊ
ಹಾಗೆ ನೀನು ನಿಜದೆ ಇರುವೆ ಪರಮ ಈಶ್ವರ ।
ಹೀಗೆ ಇರಲು ನೋಡಲಿಚ್ಛಿ । ಸುವೆನು ನಾನು ನಿನ್ನದಾದ
ಯೋಗದೈಶ್ವರದ ರೂಪ ಸುಪುರುಷೋತ್ತಮ ॥ ॥೩॥ 3

ಅದನು ನೋಡಲೆನ್ನಿಮಿಹುದು । ಶಕ್ಯವೆಂದು ಒಂದು ವೇಳೆ
ಅದುವೆ ನೀನು ಭಾವಿಸಿದರೆ ಇಂತು ಓ ಪ್ರಭು ।
ಅದರಿ ನೀನು ನನಗೆ ಈಗ । ಓ ಮಹಯೋಗೇಶ್ವರಾನೆ
ಅದನೆಯೆ ಅವ್ಯಯದ ನಿನ್ನ ರೂಪ ತೋರಿಸು ॥ ॥೪॥ 4

ನೋಡು ಪಾರ್ಥ ನನ್ನನೇಕ । ನೂರು ಮತ್ತೆ ಸಾವಿರಾರು
ನೋಡು ರೂಪಗಳನು ನೀನು ಬಿಡದೆ ಈಗಲೆ ।
ನೋಡನೇಕ ವಿಧವು ಆದ । ಮತ್ತೆ ದಿವ್ಯದವುಗಳಾದ
ನೋಡನೇಕ ವರ್ಣದಾಕೃತಿಗಳರೂಪವ ॥ ॥೫॥ 5

ನೋಡು ಆದಿತ್ಯರನ್ನು । ವಸುಗಳನ್ನು ರುದ್ರರನ್ನು
ನೋಡು ಅಶ್ವಿನಿಗಳ ಮರುತರುಗಳಂತೆಯೆ ।
ನೋಡು ಪೂರ್ವದಲ್ಲಿ ನೀನು । ನೋಡಿ ಇರದ ಅಂಥನೇಕ
ನೋಡು ಆಶ್ಚರ್ಯಗಳನು ನೀನು ಭಾರತ ॥ ॥೬॥ 6

ಇದುವೆ ನನ್ನ ದೇಹದಲ್ಲಿ । ಏಕಗೊಂಡು ಇರುವುದಾದ
ಅದುವೆ ಚರಾಚರವು ಸಹಿತದಖಿಲಜಗತನು ।
ಅದುವೆ ನೋಡು ಈಗ ನೀನು । ಮತ್ತೆ ಅನ್ಯವಾದ ಯಾವು
ದದನು ನೋಡಲಿಚ್ಛಿಸುವೆಯೊ ಗುಡಾಕೇಶನೆ ॥ ॥೭॥ 7

ನೀನು ನೋಡಲಾರೆಯಾದ । ರೆನ್ನ ನಿದುವೆ ಕಣ್ಗಳಿಂದ
ನಾನು ನಿನಗೆ ದಿವ್ಯ ಚಕ್ಷುವನ್ನು ನೀಡುವೆ ।
ನೀನು ನನ್ನದಿದ್ಯೈಶ್ವರದ । ಯೋಗವನ್ನು ಬಿಡದೆ ಪಾರ್ಥ
ನೀನು ನೋಡು ಎನುತಲಿ ಭಗವಂತ ಪೇಳ್ದನು ॥ ॥೮॥ 8

ಆಗ ಸಂಜಯನು ಕೃಷ್ಣ । ಪಾರ್ಥರದುವೆ ಮಾತ ಕೇಳು
ತಾಗಲಾ ಧೃತರಾಷ್ಟ್ರನಿಂಗಿಂತು ಪೇಳ್ದನು ।
ಹೀಗೆ ಹೇಳಿ ಮಹಾಯೋ । ಗೀಶ ಹರಿಯು ರಾಜ! ಪಾರ್ಥ
ಗಾಗ ಪರಮ ಐಶ್ವರ ಸ್ವರೂಪ ತೋರ್ದನು ॥ ॥೯॥ 9

ಅದುವನೇಕ ಮುಖಗಳಿರುವ । ನೇಕ ನಯನಗಳವು ಇರುವ
ಅದುವನೇಕವದ್ಭುತಗಳ ರೂಪದಿಂದಲು ।
ಅದುವನೇಕ ದಿವ್ಯವಾದು । ವಾದ ಆಭರಣಗಳಿರುವ
ಅದುವೆ ಎತ್ತಿಹಿಡಿದನೇಕ ದಿವ್ಯಶಸ್ತ್ರದಿ ॥ ॥೧೦॥ 10

ಅದುವೆ ದಿವ್ಯಮಾಲೆ ವಸ್ತ್ರ । ಗಳನು ಧರಿಸಿ ಇರುವನಾದ
ಅದುವೆ ದಿವ್ಯಗಂಧದಾನುಲೇಪದಿಂದಲು ।
ಅದುವೆ ಸರ್ವವಾಶ್ಚರ್ಯ । ಮಯನನಂತನಾದ ರೂಪ
ನದುವೆ ವಿಶ್ವತೋಮುಖನು ಆದ ದೇವನ ॥ ॥೧೧॥ 11

ಗಗನದಲಿ ಸಹಸ್ರ ಸೂರ್ಯ । ರುಗಳು ಒಂದೆ ಬಾರಿ ತಾವು
ಯುಗವಗೊಂಡು [43]ಉದ್ಭವಿಸಿದರೊಗೆವ ತೇಜವು ।
ಜಗತ ಪಿತನು ಅದ ಆ । ಮಹಾತ್ಮ ವಿಶ್ವರೂಪನಿಂದ
ಲೊಗೆದ ಮಹಾ ತೇಜಸದೃಶವಿರಲು ಬಹುದದು ॥ ॥೧೨॥ 12

ಅಲ್ಲಿ ಏಕಸ್ಥಿತವು ಆದ । ಪೂರ್ಣಜಗತು ಆಗ ತಾನೆ
ಯಲ್ಲನೇಕ ವಿಧದೆ ತಾ ವಿಭಾಗಗೊಂಡುದ ।
ಅಲ್ಲಿ ವಿಶ್ವರೂಪ ದೇವ । ದೇವನಾ ಶರೀರದಲ್ಲಿ
ಅಲ್ಲಿಯೆ ನೋಡಿದನು ತಾನು ಆಗ ಪಾಂಡವ ॥ ॥೧೩॥ 13

ಅದುವೆ ಬಳಿಕ ವಿಸ್ಮಯದಲಿ । ಮುಳುಗಿದವನು ಆದ ಮತ್ತೆ
ಯದುವೆ ರೋಮಾಂಚಗೊಂಡ ಆ ಧನಂಜಯ ।
ಅದುವೆ ದೇವನಿಂಗೆ ಶಿರದೆ । ತಾ ಪ್ರಣಾಮವನ್ನು ಗೈದು
ಅದುವೆ ತಾನು ಕೃತಾಂಜಲಿಯಿನಾಗ ನುಡಿದನು ॥ ॥೧೪॥ 14

ಈಗ ನೋಳ್ಪೆ ದೇವರುಗಳ । ದೇವ ನಿನ್ನ ದೇಹದಲ್ಲಿ
ಹಾಗೆ ಭೂತರಾ ವಿಶೇಷ ಸಂಘ ಸರ್ವವ ।
ಹಾಗು ಈಶನಾದ ಕಮಲ । ಪೀಠಬ್ರಹ್ಮನನ್ನು ಮತ್ತೆ
ಹಾಗೆ ಸರ್ವ ಋಷಿಗಳುರಗಗಳನು ದಿವ್ಯವ ॥ ॥೧೫॥ 15

ಅದುವನೇಕ ಬಾಹು ಉದರ । ವಕ್ತ್ರನೇತ್ರಗಳಾ ನಿನ್ನ
ದದುವೆ ಸರ್ವವಾದನಂತರೂಪ ನೋಡುವೆ ।
ಅದುವೆ ನಿನ್ನ ಅಂತವನ್ನು । ಮಧ್ಯ ಪುನಹ ಆದಿಯನ್ನು
ಅದುವೆ ಕಾಣೆ ವಿಶ್ವೇಶ ವಿಶ್ವರೂಪನೆ ॥ ॥೧೬॥ 16

ಅದೆ ಕಿರೀಟಧಾರಿ ಗದಾ । ಧಾರಿ ಚಕ್ರಧಾರಿ ಮತ್ತೆ
ಯದೆಯೆ ತೇಜರಾಶಿ ಸರ್ವ ದೀಪ್ತಿಮಂತನ ।
ಸುದುರ್ನಿರೀಕ್ಷ್ಯ[44] ನಿನ್ನ ನೋಳ್ಪೆ । ಸುತ್ತ ದೀಪ್ತ ಅನಲ ಅರ್ಕ
ನದುವೆ ದ್ಯುತಿಯು ಕೂಡಿದಪ್ರಮೇಯ ನಿನ್ನನು ॥ ॥೧೭॥ 17

43. ಯುಗವನೊಂಡು = ಒಟ್ಟುಗೂಡಿ
44. ಸುದುರ್ನಿರೀಕ್ಷ್ಯ = ನೋಡಲು ಕಷ್ಟವಾದ

ನೀನು ಅಕ್ಷರನು ಆ । ಪರಮವೇದ್ಯವಾದ ವಸ್ತು
ನೀನು ವಿಶ್ವದಿದುದೆ ಪರಮದಾ ನಿಧಾನವು ।
ನೀನು ಅವ್ಯಯನು ಶಾ । ಶ್ವತದ ಧರ್ಮಗೋಪ್ತಾರ
ನೀನು ಸನಾತನನು ಪುರುಷನೆನ್ನ ಮತವದು ॥ ॥೧೮॥ 18

ಅನಾದಿಯಾ ಮಧ್ಯ ಅಂತ । ರಹಿತನಾ ಅನಂತರೂಪ
ಅನಂತದಾ ಬಾಹು ಚಂದ್ರ ಸೂರ್ಯ ನೇತ್ರನು ।
ನಾನು ನೋಳ್ಪೆ ದೀಪ್ತವಾದ । ಅಗ್ನಿಮುಖನು ಆದ ನಿನ್ನ
ತನ್ನದಾ ಸ್ವತೇಜದಿಂದ ವಿಶ್ವತಪಿಪನ ॥ ॥೧೯॥ 19

ಇದುವೆ ದಿವಿಯ ಪೃಥಿವಿ ಮಧ್ಯ । ದಂತರಿಕ್ಷ ಸರ್ವದಿಕ್ಕು
ಮದುವು ನಿನ್ನಿಮೊಬ್ಬನಿಂದಲೇಯೆ ವ್ಯಾಪ್ತವು ।
ಅದುವೆ ನಿನ್ನದಿದದ್ಭುತದ । ಉಗ್ರವಾದ ರೂಪ ನೋಡಿ
ಯದುವೆ ಲೋಕತ್ರಯವು ವ್ಯಥಿಸುತಿದೆ ಮಹಾತ್ಮನೆ ॥ ॥೨೦॥ 20

ಸುರರ ಸಂಘಗಳವು ನಿನ್ನೊ । ಳೆಯೆ ಪ್ರವೇಶಿಸುತ್ತಲಿಹವು
ಇರದೆ ಭಯದೆ ಕೆಲರು ಕೈಯ ಮುಗಿದು ಸ್ತುತಿಪರು ।
ಒರೆಯುತಲಿಯೆ 'ಸ್ವಸ್ತಿ' ಎನುತ । ಆ ಮಹರ್ಷಿ ಸಿದ್ಧ ಸಂಘ
ವರರೆ ಪುಷ್ಕಳದೆಯೆ ಸ್ತುತಿಗಳಿಂದ ಸ್ತುತಿಪರು ॥ ॥೨೧॥ 21

ರುದ್ರರಾದಿತ್ಯ ವಸುಗ । ಳವರು ಸಾಧ್ಯ ವಿಶ್ವದೇವ
ಭದ್ರರಶ್ವಿನಿಗಳು ಮರುತರವರು ಉಷ್ಮಪರ್ ।
ಸಿದ್ಧ ಗಂಧರ್ವ ಯಕ್ಷ । ಸುರರ ಸಂಘದವರು ಎಲ್ಲ
ರದ್ದಿ ವಿಸ್ಮಯದಲಿ ನಿನ್ನ ನೋಡುತಿರುವರು ॥ ॥೨೨॥ 22

ಅದುವೆ ನಿನ್ನ ಮಹದ್ರೂಪ । ದಾ ಅನೇಕ ವಕ್ತ್ರನೇತ್ರ
ವದುವನೇಕ ಊರು ಪಾದ ಮಹಾಬಾಹುವೆ ।
ಅದುವನೇಕ ಉದರವಾ ಕ । ರಾಲವಾದನೇಕ ದಂಷ್ಟ್ರ
ವದನು ನೋಡಿ ಲೋಕ ವ್ಯಥಿಪುದಾನು ಅಂತೆಯೆ ॥ ॥೨೩॥ 23

ನಭವ ಮುಟ್ಟಿ ಇರುವ ದೀಪ್ತ । ವಾದನೇಕ ವರ್ಣವುಳ್ಳ
ಪ್ರಭೆಯದಾ ವಿಶಾಲ ನೇತ್ರ ತೆರೆದ ಬಾಯಿಯ ।
ಪ್ರಭುವೆ ನಿನ್ನ ಕಂಡು ಅತಿ । ವ್ಯಥಿಪುದಂತರಾತ್ಮವೆನ್ನ
ಉಭಯ ಧೃತಿಯ ಶಮೆಯ ಪಡೆಯಲಾರೆ ವಿಷ್ಣುವೆ ॥ ॥೨೪॥ 24

ಅಸಮ ನಿನ್ನ ದಂಷ್ಟ್ರದಾ । ಕರಾಲ ಪ್ರಳಯಕಾಲದಗ್ನಿ
ಸುಸನ್ನಿಭದ ಮುಖಗಳನ್ನು ನಾನು ನೋಡುತ ।
ಬಸದೆ ದಿಕ್ಕುಕಾಣದಾದೆ । ಮತ್ತೆ ಶಮೆಯ ಪಡೆಯದಾದೆ
ಪ್ರಸನ್ನನಾಗು ದೇವೇಶ ಜಗನಿವಾಸನೆ ॥ ॥೨೫॥ 25

ನಿನ್ನೊಳೆ ಧೃತರಾಷ್ಟ್ರಪುತ್ರ । ರುಗಳು ಮತ್ತೆ ಸರ್ವರಾದ
ಅನ್ಯರವನಿಪಾಲಸಂಘ ಸಹಿತರಾಗಿಯೆ ।
ಉನ್ನತರಾ ಭೀಷ್ಮ ದ್ರೋಣ । ಹಾಗೆ ಸೂತಪುತ್ರ ಕರ್ಣ
ಇನ್ನು ಸಹಿತ ನಮ್ಮ ಕಡೆಯ ಯೋಧಮುಖ್ಯರ ॥ ॥೨೬॥ 26

ನಿನ್ನ ದಂಷ್ಟ್ರದಾ ಕರಾಲ । ಭಯಾನಕವು ಆದ ಮುಖಗ
ಳನ್ನು ತ್ವರಿತದಿಂದೆ ತಾ ಪ್ರವೇಶಿಸುತ್ತಿಹರ್ ।
ಇನ್ನು ಕೆಲರು ತಮ್ಮ ತಮ್ಮ । ಉತ್ತಮಾಂಗಚೂರ್ಣರಾಗಿ
ನಿನ್ನ ದಂತ ಮಧ್ಯೆ ಸಿಕ್ಕಿದಂತೆ ಕಾಣುವರ್ ॥ ॥೨೭॥ 27

ಎಂತು ನದಿಗಳಾ ಅನೇಕ । ವಾದ ನೀರಿನಾ ಪ್ರವಾಹ
ವೆಂತು ಸಮುದ್ರಾಭಿಮುಖಕೆ ಧಾವಿಸುತ್ತವೊ ।
ಅಂತೆಯೆ ನರಲೋಕವೀರ । ರಿವರು ತಾವು ನಿನ್ನದಾ ಜ್ವ
ಲಂತ ವಕ್ತ್ರಗಳನು ತಾ ಪ್ರವೇಶಗೈವರು ॥ ॥೨೮॥ 28

ಹೇಗೆ ಪತಂಗಗಳು ತಾವೆ । ತಮ್ಮ ನಾಶಕಾಗಿ ಅಧಿಕ
ವೇಗದಿಂದಲುರಿವ ಅಗ್ನಿಯನ್ನು ಪೊಗುವುವೊ।
ಹಾಗೆ ಲೋಕಗಳಿವು ತಾವೆ । ತಮ್ಮ ನಾಶಕಾಗಿ ಅಧಿಕ
ವೇಗದಿಂದ ನಿನ್ನ ವಕ್ತ್ರಗಳನೆ ಪೊಗುವುವು॥ ॥೨೯॥ 29

ಎಲ್ಲ ಕಡೆಯಿನೆಲ್ಲ ಲೋಕ । ಗಳನು ಗ್ರಾಸಮಾನನಾಗಿ
ನಿಲ್ಲದೇಯೆ ಜ್ವಲಿಪ ಮುಖಗಳಿಂದ ನೆಕ್ಕುವೆ ।
ಎಲ್ಲ ಜಗತನಿದನು ತೇಜ । ದಿಂದ ತುಂಬಿದಂಥ ನಿನ್ನ
ನಿಲ್ಲದುಗ್ರ ಪ್ರಭೆಯು ತಪಿಪುತಿಹುದು ವಿಷ್ಣುವೆ ॥ ॥೩೦॥ 30

ನನಗೆ ಹೇಳು ಉಗ್ರರೂಪ । ನೀನು ಯಾರು ಎಂಬುದನ್ನು
ನಿನಗೆ ದೇವವರ ನಮೋ ಪ್ರಸನ್ನನಾಗೆಲೈ ।
ನಾನು ತಿಳಿಯಲಿಚ್ಛಿಸುವೆನು । ಆದಿ ಪುರುಷನಾದ ನಿನ್ನ
ನಾನು ತಿಳಿಯದಾದೆ ನಿನ್ನದೀ ಪ್ರವೃತ್ತಿಯ ॥ ॥೩೧॥ 31

ಲೋಕ ಕ್ಷಯವ ಮಾಡುವಂಥ । ಕಾಲ ನಾನೆ ಆಗಿ ಇಹೆನು
ಲೋಕಗಳನು ಸಂಹರಿಸಲು ಇದೊ ಪ್ರವೃತ್ತನು ।
ಸಾಕು ನೀನು ಇಲ್ಲದಿದ್ದ । ರೂವೆ ಸರ್ವರಿರರು ಪ್ರತ್ಯ
ನೀಕದಲ್ಲಿ ಸ್ಥಿತರು ಆದರಿವರು ಯೋಧರು ॥ ॥೩೨॥ 32

ಅದರಿನೇಳು ನೀನು ಯಶವ । ಪಡೆಯೊ ಗೆದ್ದು ಶತ್ರುಗಳನು
ಇದುವೆ ತಾ ಸಮೃದ್ಧವಾದ ರಾಜ್ಯಭೋಗಿಸು ।
ಮೊದಲೆ ಎನ್ನಿಮೇಯೆ ಇವರು । ಹತರು ಆಗಿ ಇಹರು ಆಗು
ಅದರಿ ನೀ ನಿಮಿತ್ತ ಮಾತ್ರ ಸವ್ಯಸಾಚಿಯೆ ॥ ॥೩೩॥ 33

ಅದುವೆ ದ್ರೋಣ ಮತ್ತೆ ಭೀಷ್ಮ । ಮತ್ತೆಯಾ ಜಯದ್ರಥನ
ಅದುವೆ ಕರ್ಣ ಹಾಗೆ ಅನ್ಯ ಯೋಧ ವೀರರ ।
ಮೊದಲೆ ಹತರು ಎನ್ನಿಮಿವರ । ಕೊಲ್ಲು ನೀನು ವ್ಯಥಿಸಬೇಡ
ಕದನ ಮಾಡು ರಣದೆ ಗೆಲ್ಲುವೀ ಸಪತ್ನರ ॥ ॥೩೪॥ 34

ಇದುವೆ ಕೇಶವನ ವಚನ । ವನ್ನು ಕೇಳಿ ಕೈಯ ಮುಗಿದು
ಗದಗದಿಸುತ ನಡುಕದಿಂದಲಾ ಕಿರೀಟಿಯು ।
ಪದಕೆ ನಮಸ್ಕರಿಸಿ ಪುನಹ । ಕೃಷ್ಣಗಿಂತು ಪೇಳ್ದನಾಗ
ಗದ್ಗದದಲಿ ಭೀತಿಯಿಂ ಪ್ರಣಾಮಗೈಯುತ ॥ ॥೩೫॥ 35

ಅದುವೆ ಯೋಗ್ಯವಿಹುದು ಹೃಷೀ । ಕೇಶ ನಿನ್ನ ಕೀರ್ತನೆಯಲಿ
ಇದುವು ಜಗತು ಹರ್ಷಿಪುದನುರಾಗಗೊಳ್ವುದು ।
ಅದದೊ ಭೀತ ರಾಕ್ಷಸರುಗ । ಳೋಡುತಿಹರು ದಿಕ್ಕುಗೆಟ್ಟು
ಅದುವೆ ಸರ್ವ ಸಿದ್ಧ ಸಂಘ ನಮಸ್ಕರಿಪುದು ॥ ॥೩೬॥ 36

ನಮಿಸರೇಕೆ ನಿನ್ನನವರು । ಓ ಮಹಾತ್ಮ ಶ್ರೇಷ್ಠ ನೀನು
ಕಮಲಪೀಠ ಬ್ರಹ್ಮಗಿಂತಲಾದಿ ಕರ್ತೃವು ।
ಅಮರನೇ ಅನಂತ ದೇ । ವೇಶನೇ ಜಗನ್ನಿವಾಸ
ವಿಮಲನಕ್ಷರನು ಸತ್ತಸತ್ತಿಗೂ ಪರ ॥ ॥೩೭॥ 37

ನೀನೆ ಆದಿದೇವನಾ ಪು । ರಾಣಪುರುಷನಾಗಿ ಇರುವೆ
ನೀನೆ ಇದುವೆ ವಿಶ್ವದಾ ನಿಧಾನ ಪರಮವು ।
ನೀನೆ ವೇತ್ತ ನೀನೆ ವೇದ್ಯ । ಮತ್ತೆ ನೀನೆ ಪರಮಧಾಮ
ನಿನ್ನಿದೋ ಅನಂತರೂಪ ವಿಶ್ವವ್ಯಾಪ್ತವು ॥ ॥೩೮॥ 38

ನೀನೆ ವಾಯು ಯಮನು ಅಗ್ನಿ । ವರುಣನಾ ಶಂಶಾಕ ಮತ್ತೆ
ನೀನೆ ಪ್ರಜಾಪತಿಯು ಆ ಪ್ರಪಿತಾಮಹನಿಹೆ ।
ನಿನಗೆ ನಮೋ ನಮವು ಸಲಲಿ । ಸಾವಿರ ಸಲ ನಮಸ್ಕಾರ
ಪುನಹ ಮತ್ತೆ ಪುನಹ ನಮೋ ನಮಹ ನಿನಗೆಯು ॥ ॥೩೯॥ 39

ನಿನಗೆ ನಮಸ್ಕಾರ ಮುಂದು । ಗಡೆಯು ಹಿಂದುಗಡೆಯು ಸಹಿತ
ನಿನಗೆ ನಮವು ಸಲಲಿ ಎಲ್ಲ ಕಡೆಯು ಸರ್ವನೆ ।
ನೀನು ಓ ಅನಂತವೀರ್ಯ । ಅಮಿತ ವಿಕ್ರಮನು ಇರುವೆ
ನೀನು ಸರ್ವಪೂರ್ಣವ್ಯಾಪ್ತನದರಿ ಸರ್ವನು ॥ ॥೪೦॥ 40

ನಿನ್ನ ಸಖನು ಎಂದು ಬಗೆದು । ಬಲದೆ ಏನ ನುಡಿದುದನ್ನು
ನಿನ್ನ ಕೃಷ್ಣ ಯಾದವಾ ಸಖನೆ ಎಂತಲು ।
ನಿನ್ನದಿದುವೆ ಮಹಿಮೆಯನ್ನು । ತಿಳಿಯದಾಗ ನುಡಿದುದನ್ನು
ಎನ್ನಿಮಾ ಪ್ರಮಾದಿಂದಲಥವ ಪ್ರಣಯದೆ ॥ ॥೪೧॥ 41

ಹಾಸ್ಯಕಾಗಿ ಮತ್ತೆ ನೀನು । ಎನ್ನಿಮಸತ್ಕೃತನು ಆದ
ಆಸನಾ ವಿಹಾರ ಶಯ್ಯೆ ಭೋಜನಾದಿಯೊಳ್ ।
ಆ ಸಮಕ್ಷವಥವ ಒಬ್ಬ । ನಾಗಿಯೊ ಅಚ್ಯುತನೆ ನೀನು
ಏಸು ತಪ್ಪಿದೆನ್ನ ಕ್ಷಮಿಸು ಅಪ್ರಮೇಯನೆ ॥ ॥೪೨॥ 42

ನೀನು ಪಿತನು ಚರಾಚರವು । ಆದ ಲೋಕವಿದಕೆ ಮತ್ತೆ
ನೀನು ಇದಕೆ ಪೂಜ್ಯ ಶ್ರೇಷ್ಠ ಗುರುವು ಆಗಿಹೆ ।
ನಿನಗೆ ಸಮರು ಯಾರು ಇಲ್ಲ । ಅಧಿಕನನ್ಯನಾವನಿನ್ನು
ನಿನಗೆ ಲೋಕತ್ರಯದೆ ಅಪ್ರತಿಮ ಪ್ರಭಾವನೆ ॥ ॥೪೩॥ 43

ಅದುವೆ ಕಾರಣದಲಿ ಸಾ । ಷ್ಟಾಂಗ ನಮಸ್ಕರಿಸಿ ನಿನ್ನ
ಸದಯ ಪೂಜ್ಯನೀಶನೆ ಪ್ರಸಾದ ಬೇಡುವೆ ।
ಅದುವೆ ಪಿತನು ಪುತ್ರನನ್ನು । ಸಖನು ಸಖನ ಪ್ರಿಯನು ಪ್ರಿಯೆಯ
ಅದುವೆ ಸಹಿಸುವಂತೆ ದೇವ ನೀನು ಸಹಿಪುದು ॥ ॥೪೪॥ 44

ನಿನ್ನದಾ ಅದೃಷ್ಟಪೂರ್ವ । ರೂಪ ನೋಡಿ ಹರ್ಷಿಸಿಹೆನು
ಎನ್ನ ಮನವು ಭಯದೆ ಮತ್ತೆ ಅತಿವ್ಯಥಿಸಿದೆ ।
ನಿನ್ನದದುವೆ ಮೊದಲರೂಪ । ತೋರು ನನಗೆ ದೇವನೇ ಪ್ರ
ಸನ್ನನಾಗು ದೇವೇಶ ಜಗನಿವಾಸನೆ ॥ ॥೪೫॥ 45

ನಿನ್ನದಾ ಕಿರೀಟಧಾರಿ । ರೂಪ ಗದಾಚಕ್ರಹಸ್ತ
ವನ್ನು ನೋಡಲಿಚ್ಛಿಸುವೆನು ಮುನ್ನಿನಂತೆಯೆ।
ನಿನ್ನ ಚತುರ್ಭುಜದ ರೂಪ । ದಿಂದಲೇಯೆ ನೀನು ಕಾಣಿ
ಸಿನ್ನು ಓ ಸಹಸ್ರ ಬಾಹು ವಿಶ್ವಮೂರ್ತಿಯೆ ॥ ॥೪೬॥ 46

ವರದೆ ಸುಪ್ರಸನ್ನನೆನ್ನಿ । ಮರ್ಜುನಾ ನಿನಗೆ ಇದುವು
ಪರಮ ರೂಪ ತೋರೆಪಟ್ಟುದಾತ್ಮಯೋಗದೆ ।
ಮೆರೆವ ತೇಜದಾ ಅನಂತ । ಮಾದ್ಯವೆನ್ನ ವಿಶ್ವರೂಪ
ವಿರದು ನೋಡೆಪಟ್ಟು ನಿನ್ನಿಮಲ್ಲದನ್ಯರಿಂ ॥ ॥೪೭॥ 47

ವರದೆ ವೇದಯಜ್ಞವದ । ಧ್ಯಯನ ದಾನದಿಂದ ಮತ್ತೆ
ಸರುವ ಕ್ರಿಯೆಗಳಿಂದ ಉಗ್ರತಪಗಳಿಂದಲು ।
ನರರ ಲೋಕದಲ್ಲಿ ಇಂಥ । ರೂಪದಾನು ಶಕ್ಯನಲ್ಲ
ಪರರು ನೋಡೆ ನಿನ್ನ ಹೊರತು ಕುರುಪ್ರವೀರನೆ ॥ ॥೪೮॥ 48

ನಿನಗೆ ವ್ಯಥೆಯು ಬೇಡ ಮತ್ತೆ । ಯಾ ವಿಮೂಢಭಾವ ಬೇಡ
ನನ್ನ ಘೋರರೂಪವಿದನು ಕಂಡು ಇಂಥದ ।
ನೀನು ಭೀತಿರಹಿತನಾಗಿ । ಪ್ರೀತಮನನು ಆಗಿ ಪುನಹ
ನನ್ನದದೇ ರೂಪವಿದನು ನೋಡು ಪಾರ್ಥನೆ ॥ ॥೪೯॥ 49

ಇಂತು ಅರ್ಜುನನಿಗೆ ವಾಸು । ದೇವ ನುಡಿದು ತಾನು ಮತ್ತೆ
ಅಂತೆ ತನ್ನದಾ ಸ್ವರೂಪವನ್ನು ತೋರಿಸಿ ।
ಅಂತು ಭೀತನವನನಾ । ಶ್ವಾಸಿಸಿದನು ಪುನಹ ತಾನು
ಅಂತೆ ಸೌಮ್ಯ ವಪುವ ಧರಿಸಿ ಆ ಮಹಾತ್ಮನು ॥ ॥೫೦॥ 50

ಇದುವೆ ತಾ ಮನುಷ್ಯ ರೂಪ । ವನ್ನು ಕಂಡು ನಾನು ಈಗ
ಲಿದುವೆ ನಿನ್ನ ಸೌಮ್ಯರೂಪವಂ ಜನಾರ್ದನ ।
ಅದರಿನೀಗತಾನೆ ನಾನು । ಶಾಂತಚಿತ್ತನಾದೆನಿನ್ನು
ಮುದದೆ ಸಚೇತನನು ಪ್ರಕೃತಿಗತನು ಆದೆನು ॥ ॥೫೧॥ 51

ಇದುವೆ ನನ್ನ ರೂಪವಿದನು । ನೋಡಲತಿಯದುರ್ಲಭವದು
ಅದುವೆ ಯಾವುದನ್ನು ನೀನು ನೋಡಿದವನಿಹೆ ।
ಅದುವೆ ದೇವತೆಗಳು ಕೂಡ । ತಾವು ಎಲ್ಲ ಇರದೆ ರೂಪ
ವಿದರ ನಿತ್ಯ ದರ್ಶನಕಾಂಕ್ಷಿಗಳು ಇರುವರು ॥॥ ೫೨॥ 52

ಯಾವ ವೇದಗಳಿಂದಲುವೆ । ತಪಸಿನಿಂದಲೂವೆ ಮತ್ತೆ
ಯಾವ ದಾನದಿಂದ ತಾನು ಯಜ್ಞದಿಂದಲು ।
ಈ ವಿಧದಲಿ ನೋಡಲೆಂದಿ । ಗೂವೆ ಶಕ್ಯನಲ್ಲ ನಾನು
ಯಾವ ರೀತಿ ನನ್ನ ನೀನು ನೋಡಿದವನಿಹೆ ॥ ॥೫೩॥ 53

ಆದರಾ ಅನನ್ಯವಾದ । ಭಕ್ತಿಯಿಂದ ಮಾತ್ರ ನಾನು
ಸಾಧ್ಯನಾಗೆ ಶಕ್ಯನೀ ವಿಧದೊಳರ್ಜುನ ।
ಶುದ್ಧ ತತ್ವದಿಂದ ತಿಳಿಯ । ಲೆನ್ನ ಮತ್ತೆ ನೋಡಲೆನ್ನೊ
ಳದ್ದಿ ಪ್ರವೇಶಿಸಲು ಶಕ್ಯ ಓ ಪರಂತಪ ॥ ॥೫೪॥ 54

ನನ್ನ ಕರ್ಮಮಾಡುವವನು । ನನ್ನ ಪರಮನೆನ್ನುವನು
ನನ್ನ ಭಕ್ತನವನು ತಾನು ಸಂಗವರ್ಜಿತ ।
ಅನ್ಯ ಸರ್ವಭೂತಗಳಲಿ । ವೈರವಿಲ್ಲದವನು ಯಾರು
ನನ್ನನೇಯೆ ಪಡೆವನವನು ಬಿಡದೆ ಪಾಂಡವ ॥ ॥೫೫॥ 55

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ಒಂದು**
**ಸಾಂತ ವಿಶ್ವರೂಪ ದರ್ಶನದುವೆ ಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಹನ್ನೆರಡು

# ಭಕ್ತಿಯೋಗ

ಯಾರು ಹೀಗೆ ಸತತ ಯುಕ್ತ । ರಾಗಿ ಭಕ್ತರುಗಳು ನಿನ್ನ
ಕೋರಿ ಬಿಡದೆ ಸಗುಣರೂಪದಿಂದುಪಾಸಿಪರ್ ।
ಯಾರು ಅಕ್ಷರನು ಅವ್ಯಕ್ತ । ನೆಂದುಪಾಸಿಸುವರೊ
ಯಾರು ಇವರುಗಳೊಳು ತಾವು ಯೋಗವಿತ್ತಮರ್ ॥ ॥೧॥ 1

ಎನ್ನೊಳೇಯೆ ಮನವನಿಟ್ಟು । ಯಾರು ಭಕ್ತಿಯಿಂದ ಬಿಡದೆ
ಎನ್ನ ನಿತ್ಯಯುಕ್ತರಾಗಿ ತಾವುಪಾಸಿಪರ್ ।
ಉನ್ನತದಾ ಶ್ರದ್ಧೆಯಿಂದ । ಕೂಡಿದಂಥ ಅವರು ನಿಜದೆ
ನನ್ನ ಮತದೆ ಯೋಗವಿತ್ತಮರು ಅರ್ಜುನ ॥ ॥೨॥ 2

ಯಾರು ಅನಿರ್ದೇಶ್ಯವಾದ । ಅಕ್ಷರವನುಪಾಸಿಪರೊ
ಸರ್ವಗ ಕೂಟಸ್ಥ ಧ್ರುವವಚಿಂತ್ಯವಚಲವ । 3
ಸರ್ವ ಸಮದ ಬುದ್ಧಿಯುಳ್ಳ । ಸನ್ನಿಯಮಿಸಿದಿಂದ್ರಿಯಗಳ
ಸರ್ವ ಭೂತಹಿತರು ಅವರು ಪಡೆವರೆನ್ನನೆ ॥ ॥೩॥ 4

ಅಧಿಕತಮವು ಆದ ಕ್ಲೇಶ । ವವರಿಗಹುದು ಅವ್ಯಕ್ತ
ವದರೊಳಾಸಕ್ತ ಚೇತರಿಂಗೆ ಪಾರ್ಥನೆ ।
ಅದುವೆ ಅವ್ಯಕ್ತಗತಿಯು । ಬಹಳ ದುಃಖದಿಂದಲೇಯೆ
ಅದುವೆ ದೇಹಧಾರಿಗಳಿಂ ಪಡೆಯೆ ಬಪ್ಪುದು ॥ ॥೪॥ 5

ಆದರಾರು ಸರ್ವವಾದ । ಕರ್ಮಗಳನು ನನ್ನೊಳೇಯೆ
ವೇದ್ಯಗೈದು ನನ್ನ ಪರಾಯಣರು ಎನಿಪರೊ ।
ಬೋಧದಾ ಅನನ್ಯಯೋಗ । ದಿಂದಲೇಯೆ ಬಿಡದೆ ಎನ್ನ
ಮೋದದಿಂದೆ ಧ್ಯಾನಿಸುತ್ತಲುಪಾಸಿಸುವರೊ ॥ ॥೫॥ 6

ಅವರ ನಾನು ಸಮುದ್ಧರಣ । ಗೈಯುವವನು ಕೇಳು ನಿಜದೆ
ಭವದ ಮೃತ್ಯು ಸಂಸಾರ ಜಲಧಿಯಿಂದಲಿ ।
ಜವದೆ ಸಮುದ್ಧರಣಗೈವೆ । ನಹೆನು ನಾನು ಬಿಡದೆ ಪಾರ್ಥ
ಅವರನೆನ್ನೊಳೇ ನಿಮಗ್ನರಾದ ಚೇತರ ॥ ॥೬॥ 7

ನನ್ನೊಳೇಯೆ ಮನವನಿರಿಸು । ನನ್ನೊಳೇಯೆ ಬುದ್ಧಿಯಿರಿಸು
ನನ್ನೊಳೇಯೆ ವಸಿಪೆ ನೀನು ಇನ್ನ ಸಂಶಯ । 8
ನನ್ನೊಳು ನೀ ಸ್ಥಿರದೆ ಮನಸ । ನಿಡಲು ಶಕ್ತನಾಗದಿದ್ದ
ರೆನ್ನ ಪಡೆಯಲಿಚ್ಛಿಸಭ್ಯಾಸಯೋಗದೆ ॥ ॥೭॥ 9

ನೀನಶಕ್ತನಾದರದ । ಭ್ಯಾಸಯೋಗದಿಂದಲೂವೆ
ನನ್ನ ಕರ್ಮ ಪರಮವೆಂದು ಗೈವನಾಗೆಲೊ ।
ನನ್ನ ಅರ್ಥಕಾಗಿ ನೀನು । ಕರ್ಮಗಳನು ಮಾಡುತಲಿಯೆ
ಸನ್ನುತದಾ ಸಿದ್ಧಿಯನ್ನು ಬಿಡದೆ ಪಡೆಯುವೆ ॥ ॥೮॥ 10

ಇದನು ಸಹಿತ ನೀನು ಗೈಯೆ । ಶಕ್ತನಾಗದಿದ್ದರೆನ್ನ
ದಿದಭ್ಯಾಸಯೋಗವನ್ನು ಆಶ್ರಯಿಸುತಲಿ ।
ಅದರಿನೆಲ್ಲ ಕರ್ಮಗಳಾ । ಫಲತ್ಯಾಗಮಾಡು ನೀನು
ಅದುವೆ ಯತತ ಆತ್ಮವಂತನಾಗುತರ್ಜುನ ॥ ॥೯॥ 11

ಅದಭ್ಯಾಸಕಿಂತಲೂವೆ । ಜ್ಞಾನ ಶ್ರೇಯವಾಗಿ ಇಹುದು
ಅದುವೆ ಜ್ಞಾನಕಿಂತಲೂ ವಿಶೇಷ ಧ್ಯಾನವು ।
ಅದುವೆ ಧ್ಯಾನಕಿಂತಲೂವೆ । ಕರ್ಮಫಲದ ತ್ಯಾಗ ಶ್ರೇಯ
ವದುವೆ ತ್ಯಾಗದಿಂದ ಶಾಂತಿಯಾ ಅನಂತರ ॥ ॥೧೦॥ 12

ಯಾವನವನು ದ್ವೇಷವಿಲ್ಲ । ದಿಹನೊ ಸರ್ವಭೂತಗಳೊಳು
ಓವ ಮಿತ್ರ ಕರುಣೆವಂತ ತಾನು ಮತ್ತೆಯು ।
ಭಾವದಿಂದ ಮಮತೆರಹಿತ । ನಹಂಕಾರ ರಹಿತನಾಗಿ
ಯಾವನಿಹನೊ ಸಮದೆ ದುಃಖ ಸುಖದೆ ತಾ ಕ್ಷಮೀ ॥ ॥೧೧॥ 13

ಯಾವನಿಹನೊ ಸತತ ಸಂ । ತುಷ್ಟನಾಗಿ ತಾನು ಮತ್ತೆ
ಭಾವದಿಂದಲಾತ್ಮವಂತ ದೃಢದ ನಿಶ್ಚಯಿ ।
ಯಾವನರ್ಪಿಸಿಹನು ಎನ್ನೊ । ಳೇಯೆ ಮನೋಬುದ್ಧಿಯನ್ನು
ಯಾವನೆನ್ನ ಭಕ್ತನವನು ನನಗೆ ಪ್ರಿಯನಹ ॥ ॥೧೨॥ 14

ಯಾವನಿಂದ ಲೋಗರಿಗು । ದ್ವೇಗವಿಲ್ಲದಿಹುದೊ ಮತ್ತೆ
ಯಾವನವನು ಲೋಗರಿನುದ್ವೇಗಗೊಳ್ಳನೊ ।
ಯಾವನಾ ಅಮರ್ಷ ಹರ್ಷ । ಕ್ರೋಧ ಭಯೋದ್ವೇಗದಿಂದ
ತಾ ವಿಮುಕ್ತನಿಹನೊ ಅವನು ನನಗೆ ಪ್ರಿಯನಹ ॥ ॥೧೩॥ 15

ಏನಪೇಕ್ಷೆಯಿಲ್ಲದವನು । ಶುಚಿಯು ದಕ್ಷನಾದ ಮತ್ತೆ
ತಾನು ಉದಾಸೀನ ಮನದ ವ್ಯಥೆಯ ಕಳೆದವ ।
ಇನ್ನು ಸರ್ವವದಾರಂಭ । ಪರಿತ್ಯಾಗಿಯಾದ ಯಾವ
ನೆನ್ನ ಭಕ್ತನವನು ನಿಜದೆ ನನಗೆ ಪ್ರಿಯನಹ ॥ ॥೧೪॥ 16

ಯಾವನವನು ಹರ್ಷಿಸುವುದು । ಇಲ್ಲ ದ್ವೇಷಿಸುವುದು ಇಲ್ಲ
ತೀವಿ ಶೋಚಿಸುವುದು ಕಾಂಕ್ಷಿಸುವುದು ಇಲ್ಲವು ।
ಆವ ಶುಭಾಶುಭದ ಪರಿ । ತ್ಯಾಗಿಯಾಗಿ ಇರುವನಾವ
ನಾ ವಿಶುದ್ಧ ಭಕ್ತನವನು ನನಗೆ ಪ್ರಿಯನಹ ॥ ॥೧೫॥ 17

ಸಮನು ಆಗಿ ಶತ್ರು ಮತ್ತೆ । ಮಿತ್ರರಲ್ಲಿ ತಾನು ಮತ್ತೆ
ಸಮನು ಅಂತೆ ಮಾನವಾಪಮಾನದಲ್ಲಿಯು ।
ಸಮನು ಆಗಿ ಶೀತ ಉಷ್ಣ । ಗಳಲಿ ಸುಖವು ದುಃಖಗಳಲಿ
ಸಮನು ಆಗಿ ಸಂಗವಿವರ್ಜಿತನು ಆದವ ॥ ॥೧೬॥ 18

ಸಮನು ಅಗಿ ನಿಂದೆ ಸ್ತುತಿ । ಗಳಲ್ಲಿ ಮತ್ತೆ ಮೌನಿಯಾಗಿ
ಸಮದೆ ಸಂತುಷ್ಟನೆಷ್ಟೊ ಅಷ್ಟರಲ್ಲಿಯೆ ।
ಸಮದೆಯಾ ನಿಕೇತನಾನಿ । ಕೇತಭಾವಿ ಸ್ಥಿರದ ಮತಿಯು
ಸಮದಲಿಂತು ಇರುವನೆನಗೆ ಪ್ರಿಯನು ನರನವ ॥ ॥೧೭॥ 19

ಆದರಾರು ಇಂತು ಉಕ್ತ । ವಾದ ಧರ್ಮದಮೃತವಿದನು
ಸಾದರದಲಿ ತಾವು ಬಿಡದೆ ಪರ್ಯುಪಾಸಿಪರ್ ।
ಶ್ರದ್ಧೆಯಿಂದ ಕೂಡಿದಂಥ । ನನ್ನ ಪರಾಯಣರು ಆದ
ಶುದ್ಧ ಭಕ್ತರವರು ನನಗತೀವ ಪ್ರಿಯರಹರ್ ॥ ॥೧೮॥ 20

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ಎರಡು**
**ಸಾಂತಗೊಂಡ ಧರ್ಮಯುಕ್ತ ಭಕ್ತಿಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ಹದಿಮೂರು

# ಕ್ಷೇತ್ರ ಕ್ಷೇತ್ರಜ್ಞ ವಿಭಾಗಯೋಗ

ಇದುವೆ ಈ ಶರೀರ ತಾನು । ಕೌಂತೇಯ ಕ್ಷೇತ್ರವೆಂದು
ಅದಭಿದಾನವನ್ನು ಪಡೆದು ಇಹುದು ಕೇಳೆಲೊ ।
ಇದನು ಯಾವನವನು ತಿಳಿವ । ನವನೆ ಕ್ಷೇತ್ರಜ್ಞನೆಂದು
ಮುದದೆ ಪೇಳ್ವರವರು ಆ ತತ್ವಜ್ಞಾನಿಗಳ್ ॥ ॥೧॥ 1

ಕ್ಷೇತ್ರಜ್ಞ ಮತ್ತೆ ನಾನೆ । ಆಗಿ ಇಹೆನು ಎಂದು ತಿಳಿಯೊ
ಕ್ಷೇತ್ರ ಸರ್ವವಿದರೊಳೆಲ್ಲ ಬಿಡದೆ ಪಾಂಡವ ।
ಕ್ಷೇತ್ರ ಕ್ಷೇತ್ರಜ್ಞರುಗಳ । ಜ್ಞಾನವಾವುದಿರುವುದದುವು
ಮಾತ್ರ ಸತ್ಯಜ್ಞಾನವೆಂಬ ಮತವು ನನ್ನದು ॥ ॥೨॥ 2

ಯಾವುದದುವು ಕ್ಷೇತ್ರವೆಂಬು । ದೆಂತು ಇಹುದು ಮತ್ತೆಯದರ
ದಾ ವಿಕಾರವೆಂಥದೆಲ್ಲಿಂದ ಬಂದುದು ।
ಯಾವನವನು ಕ್ಷೇತ್ರಜ್ಞ । ಮತ್ತೆ ಅವನದೆಂಥದಾ ಪ್ರ
ಭಾವವದನು ನೀ ಸಮಾಸದಿಂದೆ ಕೇಳೆಲೊ ॥ ॥೩॥ 3

ಇದುವು ಋಷಿಗಳಿಂದ ಬಹಳ । ವಿಧದೆ ಗಾನಗೊಂಡು ಇಹುದು
ಇದುವು ಛಂದಗಳಿಂ ವಿವಿಧ ಭಾಗವಾಗಿಯು ।
ಅದುವೆ ಮತ್ತೆ ಯುಕ್ತಿಯುಕ್ತ । ಬ್ರಹ್ಮಸೂತ್ರಪದಗಳಿಂದ
ಲಿದುವು ವಿನಿಶ್ಚಿತವದಾಗಿ ಪೇಳೆ ಪಟ್ಟಿದೆ ॥ ॥೪॥ 4

ಅದುವೆ ಮಹಾಭೂತಗಳವು । ಮತ್ತೆಯಹಂಕಾರವದುವು
ಅದುವೆ ಬುದ್ಧಿ ತಾನದವ್ಯಕ್ತವೆಂಬುದು ।
ವಿಧದೆ ಇಂದ್ರಿಯಗಳು ಹತ್ತು । ಮೇಲದೊಂದು ಮನಸು ಮತ್ತೆ
ಯದುವೆ ಪಂಚವಿಷಯವಿಂದ್ರಿಯಗಳ ಗೋಚರ॥ ॥೫॥ 5

ಅದುವೆ ಇಚ್ಛೆ ದ್ವೇಷವದುವು । ಮತ್ತೆ ಸುಖವು ದುಃಖವದುವು
ಅದುವೆ ಸಂಘಾತ ಮತ್ತೆ ಚೇತನಾ ಧೃತಿ ।
ಇದುವೆ ಕ್ಷೇತ್ರವೆನಿಸಿದಿದನು । ತಾ ಸಮಾಸದಿಂದಲಲ್ಲಿ
ಇದು ವಿಕಾರ ಸಹಿತ ಕ್ಷೇತ್ರವೆಂದುದಾಹೃತ ॥ ॥೬॥ 6

ಅದುವು ಅಮಾನತೆಯು ಮತ್ತೆ । ಅದಂಭತೆಯು ಅದುವು ಮತ್ತೆ
ಅದುವಹಿಂಸೆ ಕ್ಷಾಂತಿ ಮತ್ತೆಯದುವೆ ಆರ್ಜವ[45] ।
ಅದುವೆಯಾಚಾರ್ಯರುಪಾ । ಸನೆಯು ಮತ್ತೆ ಶೌಚವದುವು
ಅದುವೆ ಸ್ಥೈರ್ಯವದುವು ಆತ್ಮದಾ ವಿನಿಗ್ರಹ ॥ ॥೭॥ 7

ಅದುವೆ ಇಂದ್ರಿಯಾರ್ಥ ವಿಷಯ । ಗಳಲಿ ವೈರಾಗ್ಯಭಾವ
ವದುವೆ ಆ ನಿರಹಂಕಾರಭಾವ ಮತ್ತೆಯು ।
ಅದುವೆ ಜನ್ಮಮೃತ್ಯುಜರೆಯು । ಮತ್ತೆ ವ್ಯಾಧಿಯಾದಿಗಳಲಿ
ಹದನನರಿವ ದುಃಖ ದೋಷದಾನುದರ್ಶನ ॥ ॥೮॥ 8

ಮಮತೆ ರಹಿತ ಭಾವವಾ । ಸಕ್ತಿರಹಿತ ಭಾವವದುವು
ಕ್ರಮದೆ ಮಗನು ಮಡದಿ ಮನೆಗಳಾದಿಯಲ್ಲಿಯು ।
ಭ್ರಮೆಯ ಇಷ್ಟ ಮತ್ತೆಯಾ । ಅನಿಷ್ಟ ಪ್ರಾಪ್ತಿಯವುಗಳಲ್ಲಿ
ಸಮದೆ ನಿತ್ಯ ಸಮದಚಿತ್ತದಿಂದಲಿರುವುದು ॥ ॥೯॥ 9

ನನ್ನೊಳೇ ಅನನ್ಯಯೋಗ । ದಿಂದಲೇಯೆ ಮಾಳ್ಪುದಾದ
ಸನ್ನುತಾವ್ಯಭಿಚಾರಿಣೀ [46]ಭಕ್ತಿತಾನದು ।
ಇನ್ನದಾ ವಿವಿಕ್ತಸ್ಥಾನ । ಸೇವನೇಯ ಗೈವಭಾವ
ವಿನ್ನು ತಾ ಅನಿಚ್ಛೆಭಾವ ಜನಸಮೂಹದಿ ॥ ॥೧೦॥ 10

45. ಆರ್ಜವ = ಸರಳತೆ
46. ಅವ್ಯಭಿಚಾರಿಣೀ ಭಕ್ತಿ = ಶುದ್ಧವಾದ ಭಕ್ತಿ

ಅದಧ್ಯಾತ್ಮಜ್ಞಾನದಲ್ಲಿ । ನಿತ್ಯನಿರತವಾದ ಭಾವ
ವದುವೆ ತತ್ವಜ್ಞಾನದರ್ಥ ಸತ್ಯದರ್ಶನ ।
ಇದುವೆ ಮೇಲೆ ಪೇಳ್ದುದೆಲ್ಲ । ಜ್ಞಾನವೆಂದೆನಿಸಿ ಇಹುದು
ಅದುವೆ ಅಜ್ಞಾನ ಯಾವುದಿದಕೆ ಅನ್ಯಥಾ ॥ ॥೧೧॥ 11

ಯಾವುದದುವು ಜ್ಞೇಯ ವಸ್ತು । ವೆಂಬುದನ್ನು ಪೇಳ್ವೆ ನಾನು
ಯಾವುದನ್ನು ತಿಳಿದರಮೃತವನ್ನು ಪಡೆವನು ।
ತಾ ವಿಶುದ್ಧವಾದನಾದಿ । ಪರಮ ಬ್ರಹ್ಮ ಪೇಳೆಪಡುವು
ದಾವ ಸತ್ತುವಾ ಅಸತ್ತುವಲ್ಲವೆಂದದು ॥ ॥೧೨॥ 12

ಸರ್ವಸ್ಥಳಗಳಲ್ಲು ಅದಕೆ । ಪಾಣಿಪಾದಗಳವು ಇಹವು
ಸರ್ವಸ್ಥಳಗಳಲ್ಲು ಅಕ್ಷಿ ಶಿರವು ಮುಖಗಳು ।
ಸರ್ವಸ್ಥಳಗಳಲ್ಲು ಅದಕೆ । ಶ್ರುತಿಗಳಿಹವು ಲೋಕದಲ್ಲಿ
ಸರ್ವವನ್ನು ಆವರಿಸಿಯೆ ಸ್ಥಿತವು ಇರುವುದು ॥ ॥೧೩॥ 13

ಸರುವ ಇಂದ್ರಿಯಗಳ ಗುಣಗ । ಳಾಭಾಸವುಳ್ಳುದದುವು
ಸರುವ ಇಂದ್ರಿಯದೆಯು ವಿವರ್ಜಿತವು ತಾನದು ।
ಇರುವುದದುವಸಕ್ತವಾಗಿ । ಸರುವವನ್ನು ಭರಿಸಿ ಇಹುದು
ಇರುವುದು ನಿರ್ಗುಣವು ಗುಣದ ಭೋಕ್ತೃಮತ್ತೆಯು ॥ ॥೧೪॥ 14

ಇರುವುದದುವು ಭೂತಗಳಾ । ಬಾಹ್ಯ ಅಂತದೊಳಗು ಮತ್ತೆ
ಇರುವುದದು ಚರಾಚರಾತ್ಮಕವು ಆಗಿಯು ।
ಇರುವುದರಿಂ ಸೂಕ್ಷ್ಮವಾಗಿ । ಅವಿಜ್ಞೇಯವಾಗಿ ಇಹುದು
ಇರುವುದದುವು ದೂರ ಮತ್ತೆಯಾ ಸಮೀಪವು ॥ ॥೧೫॥ 15

ಭೂತಗಳಲಿ ಅದವಿಭಕ್ತ । ವಾಗಿ ಇಹುದು ಹಾಗೆ ಬಿಡದೆ
ಮತ್ತೆಯದು ವಿಭಕ್ತವಾಗಿ ಇಹವೊಲಿರುವುದು।
ಭೂತಗಳಾ ಭರ್ತೃ ಜ್ಞೇಯ । ಸಂಹರಿಸುವಾ ಗ್ರಸಿಷ್ಣು
ಮತ್ತದಿಹುದು ಸೃಷ್ಟಿಪ ಪ್ರಭವಿಷ್ಣುವಾಗಿಯು ॥ ॥೧೬॥ 16

ಅದುವೆ ಎಲ್ಲ ಜ್ಯೋತಿಗಳಲಿ । ಪರಮ ಜ್ಯೋತಿಯಾಗಿ ಇಹುದು
ಅದುವು ತಮಸಿನಿಂದ ಪರವು ಎನಿಸಿ ಇರುವುದು ।
ಅದುವೆ ಜ್ಞಾನವದುವೆ ಜ್ಞೇಯ । ಜ್ಞಾನಗಮ್ಯವಾಗಿ ಇಹುದು
ಅದುವೆ ಸರ್ವರಾ ಹೃದಯದೆ ನೆಲಸಿ ಇರುವುದು ॥ ॥೧೭॥ 17

ಹೀಗೆ ಕ್ಷೇತ್ರವಿದುವು ಮತ್ತೆ । ಜ್ಞಾನವದುವು ಜ್ಞೇಯವದುವು
ಈಗಲಾ ಸಮಾಸದಿಂದೆ ಪೇಳೆಪಟ್ಟುವು ।
ಯೋಗದಲ್ಲಿ ನಿರತನಾದ । ನನ್ನ ಭಕ್ತನಿದನು ತಿಳಿದು
ವೇಗದಿಂದೆ ನನ್ನ ಭಾವವನ್ನೆ ಪಡೆವನು ॥ ॥೧೮॥ 18

ಸಿರಿಯ ಉಭಯ ಪ್ರಕೃತಿ ಮತ್ತೆ । ಪುರುಷ ಇವುಗಳನ್ನು ನಿಜದೆ
ಅರಿಯನಾದಿಯಾದುವೆನುತ ನೀನು ಅರ್ಜುನ ।
ಸರುವವಾ ವಿಕಾರಗಳವು । ಮತ್ತೆ ಗುಣಗಳೆಲ್ಲ ತಾವು
ಅರಿಯೊ ಪ್ರಕೃತಿಯಿಂದ ಸಂಭವಿಸಿದುವೆನುತಲಿ ॥ ॥೧೯॥ 19

ಸರುವವಾದ ಅದುವೆ ಕಾರ್ಯ । ಕಾರಣ ಕರ್ತೃತ್ವಗಳಿಗೆ
ಮೆರೆವ ಪ್ರಕೃತಿ ಹೇತುವೆಂದು ಪೇಳೆಪಡುವುದು ।
ಬರುವುದಾದ ಅದುವೆ ದುಃಖ । ಸುಖದ ಭೋಕ್ತೃತ್ವವದಕೆ
ಪುರುಷನವನು ಹೇತುವೆಂದು ಪೇಳೆಪಡುವನು ॥ ॥೨೦॥ 20

ಪುರುಷನವನು ಪ್ರಕೃತಿಯೊಳುವೆ । ಸ್ಥಿತನು ಆಗಿ ಅಲ್ಲಿ ತಾನು
ಇರದೆ ಭುಂಜಿಸುವನು ಪ್ರಕೃತಿಯೊಗೆದ ಗುಣಗಳ ।
ಸರಿಯ ಕಾರಣವದು ತಾನು । ಗುಣಗಳಾ ಸಂಗವವನ
ಪರಿಯದಾದ ಸತ್ತಸತ್ತು ಯೋನಿಜನ್ಮಕೆ ॥ ॥೨೧॥ 21

ಅವನು ಉಪದ್ರಷ್ಟನೆಂದು । ಅನುಮತಿಸುವನವನು ಎಂದು
ಅವನು ಭರ್ತ ಭೋಕ್ತ ಮಹೇಶ್ವರನು ಎಂತಲು ।
ಅವನೆಯೆ ಪರಮಾತ್ಮನೆಂದು । ಕೂಡ ಪೇಳೆಪಟ್ಟು ಇಹನು
ಇವನು ದೇಹವಿದರೊಳಿರುವ ಪರಮ ಪುರುಷನು ॥ ॥೨೨॥ 22

ಇದುವೆ ರೀತಿ ತಿಳಿವನಾವ । ನವನು ಪುರುಷನನ್ನು ಮತ್ತೆ
ಅದುವೆ ಗುಣಗಳಿಂದ ಕೂಡಿದಂಥ ಪ್ರಕೃತಿಯ ।
ಅದರಿನವನು ಸರ್ವವಿಧದೆ । ವರ್ತಿಸುತ್ತಲಿದ್ದರೂವೆ
ಅದುವೆ ಅವನು ಪುನಹ ಜನ್ಮಿಸುವುದು ಇಲ್ಲವು ॥ ॥೨೩॥ 23

ಕೆಲರು ಅದುವೆ ಧ್ಯಾನದಿಂದ । ಲಾತ್ಮನಲ್ಲಿ ಕಾಂಬರವರು
ನಿಲದೆ ಅದುವೆ ಆತ್ಮನನ್ನು ಆತ್ಮದಿಂದಲಿ ।
ಕೆಲರು ಅನ್ಯರದುವೆ ಸಾಂಖ್ಯ । ಯೋಗದಿಂದ ಕಾಂಬರವರು
ಕೆಲರು ಬೇರೆಯವರು ಕರ್ಮಯೋಗದಿಂದಲಿ ॥ ॥೨೪॥ 24

ಅನ್ಯರಾದರಿಂತು ತಿಳಿಯ । ಲಾರದವರು ಆಗಿ ತಾವು
ಅನ್ಯರಿಂದ ಕೇಳಿ ಉಪಾಸನೆಯ ಗೈವರು ।
ಇನ್ನು ಅವರು ಸಹಿತ ದಿಟದೆ । ದಾಟುವರಾ ಮೃತ್ಯುವನ್ನು
ನನ್ನ ವಿಷಯ ಶ್ರುತಿಯ ಪರಾಯಣರು ಎನಿಪರು ॥ ॥೨೫॥ 25

ಯಾವುದಾದರಿನ್ನು ಸಂ । ಜನಿಸುವಾ ವಸ್ತುವದುವು
ಸ್ಥಾವರವದು ಜಂಗಮವದು ಏನೆ ಆಗಲಿ ।
ಓವ ಕ್ಷೇತ್ರ ಕ್ಷೇತ್ರಜ್ಞ। ಸಂಯೋಗದಿಂದಲೆಂದು
ನೀ ವಿವೇಕದಿಂದ ತಿಳಿಯೊ ಭರತ ಋಷಭನೆ ॥ ॥೨೬॥ 26

ಸರುವವಾದ ಭೂತಗಳೊಳು । ತಾನು ಸಮನು ಆಗಿ ಇರುತ
ಲಿರುವನಾ ಪ್ರಸನ್ನ ಪ್ರಭುವು ಪರಮ ಈಶ್ವರ ।
ಸರುವವಾದುವಾ ವಿನಾಶ । ಗಳಲಿಯೆ ಅವಿನಾಶಿಯಾಗಿ
ಇರುವನಾವನವನ ಕಾಂಬನವನೆ ಕಾಂಬನು ॥ ॥೨೭॥ 27

ಸಮನು ಆಗಿ ಕಾಣುವವನೆ । ಸರ್ವವಾದ ಸ್ಥಳಗಳಲ್ಲು
ಸಮದೆ ಸ್ಥಿತನು ಅಗಿ ಇರುವ ಈಶ್ವರನನು ।
ಭ್ರಮದೆ ಆತ್ಮದಿಂದಲಾತ್ಮ । ನನ್ನು ಘಾತಗೊಳಿಸನವನು
ಸಮದೆ ಬಳಿಕ ಪಡೆವನವನು ಪರಮಗತಿಯನು ॥ ॥೨೮॥ 28

ಇರದೆ ಪ್ರಕೃತಿಯಿಂದಲೇಯೆ । ಸರ್ವವಾದ ಕರ್ಮಗಳವು
ಸರುವ ರೀತಿ ತಾವು ಕ್ರಿಯೆಯಗೊಳ್ವವೆನುತಲಿ ।
ಸರಿಯದಾಗಿ ಯಾವನವನು । ತತ್ವದಿಂದ ಕಾಂಬನದುವೆ
ಪರಿಯಲಾತ್ಮನಕರ್ತಾರನೆನುತ ಕಾಂಬನು ॥ ॥೨೯॥ 29

ಇರುವುದಾದರೂವೆ ಭೂತ । ಗಳವು ಭಿನ್ನಭಾವದಿಂದ
ಇರುವುವೇಕನಲ್ಲಿ ಎಂಬುದೇಗ ಕಾಂಬನೊ ।
ಸರುವ ವಿಸ್ತಾರವದುವು । ಆತನಿಂದಲೇಯೆ ಎನುತ
ಲರಿವನವನು ಬ್ರಹ್ಮವನ್ನು ಪಡೆವನಾಗಲು ॥ ॥೩೦॥ 30

ಅದುವೆ ಅನಾದಿತ್ವವುಳ್ಳ । ಮತ್ತೆ ನಿರ್ಗುಣತ್ವವುಳ್ಳ
ಅದುವೆ ಅವ್ಯಯನು ಅದ ಪರಮ ಆತ್ಮನು ।
ಇದುವೆ ಈ ಶರೀರ ಸ್ಥಿತನು । ಆದರೂವೆ ಕೌಂತೇಯ
ಹದನನೇನ ಗೈವುದಿಲ್ಲ ಲಿಪ್ತನಲ್ಲವು ॥ ॥೩೧॥ 31

ಯಾವ ರೀತಿ ಸರ್ವಗತವು । ಆದ ತನ್ನ ಸೂಕ್ಷ್ಮತೆಯಿಂ
ತೀವಿದಾಕಾಶ ತಾನು ಲಿಪ್ತವಾಗದೊ ।
ಓವಿ ಈ ಶರೀರದಲ್ಲಿ । ಸರ್ವಸ್ಥಳದೆ ಸ್ಥಿತನು ಆಗಿ
ತೀವಿದಾತ್ಮನದೇರೀತಿ ಲಿಪ್ತನಾಗನು ॥ ॥೩೨॥ 32

ಯಾವ ರೀತಿ ತಾ ಪ್ರಕಾಶ । ಗೈವನವನು ಒಬ್ಬನೇಯೆ
ತಾ ವಿಶೇಷದೆಲ್ಲ ಲೋಕವಿದನು ಆ ರವಿ ।
ಆ ವಿಧಾನದೇಯೆ ಎಲ್ಲ । ಕ್ಷೇತ್ರವನ್ನು ಕ್ಷೇತ್ರಿ ತಾನು
ತಾ ವಿಶೇಷದಿಂ ಪ್ರಕಾಶಗೈವ ಭಾರತ ॥ ॥೩೩॥ 33

ಅದುವೆ ಕ್ಷೇತ್ರಕ್ಷೇತ್ರಜ್ಞ । ರಿಬ್ಬರಾ ಮಧ್ಯೆ ಇರುವ
ಅದುವೆ ಅಂತರವನು ಜ್ಞಾನಚಕ್ಷುವಿಂದಲಿ ।
ಅದುವೆ ಮತ್ತೆ ಭೂತಗಳಾ । ಪ್ರಕೃತಿ ಮೋಕ್ಷವನ್ನು ಯಾರು
ವಿಧದೆ ತಿಳಿವರವರು ಪರಮ ಪದವ ಪಡೆವರು ॥ ॥೩೪॥ 34

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ಮೂರು**
**ಸಾಂತ ಕ್ಷೇತ್ರ ಕ್ಷೇತ್ರಜ್ಞವಿಭಾಗ ಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಹದಿನಾಲ್ಕು

# ಗುಣತ್ರಯ ವಿಭಾಗಯೋಗ

ಪರಮವಾದ ಮತ್ತೆ ಜ್ಞಾನ । ಗಳಲಿ ಉತ್ತಮವು ಆದ
ಪರಮಜ್ಞಾನವನ್ನು ನಿನಗೆ ಪುನಹ ಪೇಳ್ವೆನು ।
ಸರುವ ಮುನಿಗಳಾವುದನ್ನು । ತಿಳಿದು ಇದುವೆ ಲೋಕದಿಂದ
ಪರಮ ಸಿದ್ಧಿಯನ್ನು ಪಡೆದು ಪೋದರದನೆಯೆ ॥ ॥೧॥ 1

ಇದುವೆ ಪರಮ ಜ್ಞಾನವನ್ನು । ಆಶ್ರಯಿಸಿಯೆ ನನ್ನದಾದ
ಅದೆ ಸಧರ್ಮವನ್ನು ಬಿಡದೆ ಪಡೆದ ಜನಗಳು ।
ಅದುವೆ ಸರ್ಗದಲ್ಲಿ ಕೂಡ । ಜನ್ಮಿಸುವುದು ಇಲ್ಲ ಮತ್ತೆ
ಯದುವೆ ಪ್ರಳಯದಲ್ಲಿ ವ್ಯಥೆಯ ಪಡುವುದಿಲ್ಲವು ॥ ॥೨॥ 2

ನನ್ನ ಯೋನಿಯಾದ ಮಹದ್ । ಬ್ರಹ್ಮವೆಂಬುದದರ ಒಳಗೆ
ನಾನು ಬಿಡದೆ ಗರ್ಭವನ್ನು ಇಡುವೆನದರೊಳು ।
ಭಿನ್ನ ಭಿನ್ನವಾದ ಸರ್ವ । ಭೂತಗಳಾ ಸಂಭವವದು
ಇನ್ನು ಬಿಡದೆ ಅದರಿನಿಂದಲಹುದು ಭಾರತ ॥ ॥೩॥ 3

ಸರುವವಾದ ಯೋನಿಗಳಲಿ । ಕೌಂತೇಯ ಯಾವ ಯಾವ
ತೆರೆದ ಮೂರ್ತಿಗಳವು ತಾವು ಸಂಭವಿಸುವುವೊ ।
ಸರುವವಕೆ ಮಹದ್ ಬ್ರಹ್ಮ । ಉತ್ಪತ್ತಿಸ್ಥಾನಯೋನಿ
ಸರುವವಕೆ ನಾನು ಬೀಜರೂಪ ಪಿತನೆಲೊ ॥ ॥೪॥ 4

ಸತ್ವ ರಜವು ತಮವು ಎಂಬ । ಪ್ರಕೃತಿಯಿಂದ ಸಂಭವಿಸಿದ
ತತ್ವದಿಂದೆ ಪೇಳಲಾದ ಮೂರು ಗುಣಗಳು ।
ಸ್ವತ್ವದಿಂದೆ ನಿಬದ್ಧಿಪುವು । ಮಹಾಬಾಹು ದೇಹದಲ್ಲಿ
ನಿತ್ಯನವ್ಯಯನು ಆದ ದೇಹಿಯಿವನನು ॥ ॥೫॥ 5

ಅಲ್ಲಿ ಸತ್ವವದುವು ನಿರ್ಮ । ಲತೆಯದಾದ ಕಾರಣದಲಿ
ಪುಲ್ಲ ಪ್ರಕಾಶಕರವಹುದು ಅನಾಮಯವದು ।
ಅಲ್ಲಿ ಸುಖದ ಸಂಗದಿಂದ । ಮತ್ತೆ ಜ್ಞಾನಸಂಗದಿಂದ
ಲಲ್ಲಿ ದೇಹಿಯನ್ನು ಬಂಧಿಸುವುದು ಅನಘನೆ ॥ ॥೬॥ 6

ಅದುವೆ ರಜೋಗುಣವು ರಾಗ । ದಾಸಕ್ತಿಯುತವು ತಿಳಿಯೊ
ಅದುವೆ ತೃಷ್ಣೆ ಸಂಗದಿಂದ ಸಮುದ್ಭವಿಸಿದ ।
ಅದುವು ಬಂಧಿಸುವುದು ಬಿಡದೆ । ಕೌಂತೇಯ ಕೇಳೊ ನೀನು
ಅದುವೆ ಕರ್ಮಸಂಗದಿಂದ ದೇಹಿಯಿವನನು ॥ ॥೭॥ 7

ಅರಿಯೊ ಆದರದಜ್ಞಾನ । ದಿಂದ ಜನಿಸಿ ಇಹುದು ತಮವು
ಸರುವ ದೇಹಿಗಳನು ಮೋಹಗೊಳಿಸುವಂಥದು ।
ಭರದೆ ಅದುವು ಆ ಪ್ರಮಾದ । ವಾಲಸ್ಯ ನಿದ್ರೆಗಳಿಂ
ದಿರದೆ ದೇಹಿಯನ್ನು ಬಂಧಿಸುವುದು ಭಾರತ ॥ ॥೮॥ 8

ಪರಿಣಮಿಸುವುದದುವು ಸತ್ವ । ಗುಣವು ಸುಖದೆ ರಜೋಗುಣವು
ಪರಿಣಮಿಸುವುದದುವು ಕರ್ಮಗಳಲಿ ಭಾರತ ।
ಇರದೆ ತಮೋಗುಣವು ಆದ । ರಾವರಿಸುತ ಜ್ಞಾನವನ್ನು
ಪರಿಣಮಿಪುದು ಆ ಪ್ರಮಾದದಲ್ಲಿ ತಾನದು ॥ ॥೯॥ 9

ಅದುಮಿ ರಜೋಗುಣವ ಮತ್ತೆ । ತಮೋಗುಣವನೆರಡನಲ್ಲಿ
ಅದುವೆ ಸತ್ವಗುಣವು ಬಿಡದೆಯಹುದು ಭಾರತ ।
ಅದುಮಿ ಮತ್ತೆ ಸತ್ವತಮಗ । ಳೆರಡ ಬಿಡದೆಯಹುದು ರಜವು
ಅದುಮಿ ಸತ್ವರಜಗಳನ್ನು ತಮವು ಹಾಗೆಯೆ ॥ ॥೧೦॥ 10

ಏಗಲಿದುವೆ ದೇಹದಲ್ಲಿ । ಸರ್ವ ದ್ವಾರಗಳಲಿ ಬಿಡದೆ
ಏಗಲಾ ಪ್ರಕಾಶ ಹಾಗು ಜ್ಞಾನ ಜನಿಪುದೊ ।
ಆಗ ಸತ್ವಗುಣ ವಿವೃದ್ಧಿ । ಯಾಗಿ ಇಹುದು ಎಂಬುದನ್ನು
ಆಗಲಲ್ಲಿ ತಿಳಿಯಬೇಕು ಕೇಳು ಅರ್ಜುನ ॥ ॥೧೧॥ 11

ಅದುವೆ ಲೋಭವಾ ಪ್ರವೃತ್ತಿ । ಕರ್ಮಗಳಾರಂಭ ಭಾವ
ವದುವೆ ಆ ಅಶಾಂತಿ ಮತ್ತೆ ಸ್ಪೃಹೆಯ ಭಾವವು ।
ವಿಧದ ಇವುಗಳೆಲ್ಲ ಬಿಡದೆ । ಜನಿಸಿ ಬಹವು ದೇಹದಲ್ಲಿ
ಅದುವೆ ರಜದ ವಿವೃದ್ಧಿಯಲಿ ಭರತ ಋಷಭನೆ ॥ ॥೧೨॥ 12

ಅಪ್ರಕಾಶಭಾವ ಮತ್ತೆ । ಅಪ್ರವೃತ್ತಿಭಾವವದುವು
ಆ ಪ್ರಮಾದಭಾವ ಮತ್ತೆ ಮೋಹವಿಂತಿವು ।
ಈ ಪ್ರಕಾರವಿವುಗಳೆಲ್ಲ । ಜನ್ಮಿಸುವುವು ತಮೋಗುಣದ
ಕುಪ್ರಭಾವಿ ವಿವೃದ್ಧಿಯಲಿ ಕುರುವನಂದನ ॥ ॥೧೩॥ 13

ಏಗಲದುವೆ ಸತ್ವಗುಣದ । ಆ ಪ್ರವೃದ್ಧಿಕಾಲದಲ್ಲಿ
ಆಗ ದೇಹಧಾರಿ ಪ್ರಲಯವನ್ನು ಪಡೆವನೊ ।
ಆಗಲವನು ಉತ್ತಮವಿದ । ರಾದ ಜ್ಞಾನಿಗಳಿಗೆ ದೊರೆವ
ಭೋಗದಮಲ ಲೋಕವನ್ನು ಬಿಡದೆ ಪಡೆವನು ॥ ॥೧೪॥ 14

ಪಡೆದರವನು ಪ್ರಲಯವನ್ನು । ರಜೋಗುಣದವೃದ್ಧಿಯಲ್ಲಿ
ಬಿಡದೆ ಕರ್ಮಸಂಗಿಗಳಲಿ ತಾನು ಜನಿಪನು ।
ಪಡೆದರವನು ಹಾಗೆ ಪ್ರಲಯ । ವನ್ನು ತಮದ ವೃದ್ಧಿಯಲ್ಲಿ
ಬಿಡದೆ ಮೂಢಯೋನಿಗಳಲಿ ತಾನು ಜನಿಪನು ॥ ॥೧೫॥ 15

ಅದುವೆ ಸುಕೃತವಾದ ಸತ್ವ । ಗುಣದ ಕರ್ಮಗಳಿಗೆಯಲ್ಲಿ
ಮುದದ ಸಾತ್ವಿಕವದು ನಿರ್ಮಲದ ಫಲವದು ।
ಅದುವೆ ರಜೋಗುಣದ ಕರ್ಮ । ಗಳಿಗೆಯಲ್ಲಿ ದುಃಖಫಲವು
ಅದುವೆ ಅಜ್ಞಾನ ತಮದ ಕರ್ಮಫಲವದು ॥ ॥೧೬॥ 16

ಜನಿಸಿ ಬಹುದು ಸತ್ವಗುಣದ । ಲಿಂದ ಜ್ಞಾನವದುವು ಮತ್ತೆ
ಜನಿಸಿ ಬಹುದು ರಜೋಗುಣದೆ ಲೋಭ ತಾನದು ।
ಜನಿಸಿ ಬಹವು ಆ ಪ್ರಮಾದ । ಮೋಹವಜ್ಞಾನಗಳವು
ಕೊನೆಯದಾದ ತಮೋಗುಣದಲಿಂದಲಲ್ಲಿಯು ॥ ॥೧೭॥ 17

ಮುದದೆ ಸತ್ವಸ್ಥರುಗಳು । ಊರ್ಧ್ವದೆಡೆಗೆ ನಡೆವರವರು
ಅದುವೆ ರಾಜಸರುಗಳವರು ಮಧ್ಯೆ ನಿಲ್ವರು ।
ಅಧಮವಾದ ಜಘನ ಗುಣದ ವೃತ್ತಿಯುಳ್ಳ ತಾಮಸರುಗ
ಳಧೋಗತಿಯ ಎಡೆಯ ಕಡೆಗೆ ಬಿಡದೆ ನಡೆವರು ॥ ॥೧೮॥ 18

ಗುಣಗಳಲ್ಲದನ್ಯನಿಲ್ಲ । ಕರ್ತಾರನೆಂಬುದಾಗಿ
ಗುಣಜ್ಞಾನಿ ದ್ರಷ್ಟಾರನೇಗ ಕಾಂಬನೊ ।
ಗುಣಗಳಿವುಗಳಿಂದಲೆಲ್ಲ । ಪರನನೇಗಲರಿವನವನು
ಗುಣವ ದಾಟಿ ನನ್ನ ಭಾವವನ್ನು ಪಡೆವನು ॥ ॥೧೯॥ 19

ಇದುವೆ ಮೂರು ಗುಣಗಳಿವನು । ತಾನು ಮೀರಿದವನು ಆಗಿ
ಯದುವೆ ದೇಹಿ ದೇಹ ಸಮುದ್ಭವಗಳಿವುಗಳ ।
ಅದುವೆ ಜನ್ಮ ಮೃತ್ಯು ಜರೆಯು । ದುಃಖವವುಗಳಿಂದಲೆಲ್ಲ
ವಿಧದೆ ಮುಕ್ತನಾಗಿಯಮೃತವನ್ನು ಪಡೆವನು ॥ ॥೨೦॥ 20

ಹೀಗೆ ಮೂರು ಗುಣಗಳಿವು । ಗಳನ್ನು ದಾಟಿದಂಥ ಅವನು
ಹೇಗೆ ಯಾವ ಲಕ್ಷಣದಲಿ ಇಹನು ಓ ಪ್ರಭು ।
ಹೇಗೆ ಅದುವು ಇರುವುದವನ । ಅಚರಣೆಯು ಇನ್ನು ತಾನು
ಹೇಗೆ ಮೂರು ಗುಣಗಳಿವನು ದಾಟಿ ಪೋಪನು ॥ ॥೨೧॥ 21

ಫುಲ್ಲ ಸತ್ವದಾ ಪ್ರಕಾಶ । ದಲ್ಲಿ ರಜದ ಆ ಪ್ರವೃತ್ತಿ
ಯಲ್ಲಿ ಮತ್ತೆ ತಮದ ಮೋಹಗಳಲಿ ಪಾಂಡವ ।
ಎಲ್ಲ ಪ್ರಾಪ್ತಿಗಳಲಿ ದ್ವೇಷ । ಪಡನು ಆ ನಿವೃತ್ತಿಗಳಲಿ
ಯಲ್ಲಿ ಯಾವನವನು ಕಾಂಕ್ಷೆಪಡುವುದಿಲ್ಲವು ॥ ॥೨೨॥ 22

ಯಾವನುದಾಸೀನ ಭಾವ । ದವನು ಇರುವನಂತೆ ಇರುತ
ತಾ ವಿಚಲಿತನಾಗನವನು ಗುಣಗಳಿಂದಲಿ ।
ಈ ವಿಧದಲಿ ವರ್ತಿಸುವುವು । ಗುಣಗಳೇಯೆ ಎಂಬುದಾಗಿ
ಯಾವನವನು ಸ್ಥಿರದೆ ಸ್ಥಿತನು ವಿಚಲನಾಗನೊ ॥ ॥೨೩॥ 23

ಸಮದೆ ಸ್ಥಿತನು ದುಃಖಸುಖ । ಗಳಲ್ಲಿ ಸ್ವಸ್ಥಚಿತ್ತನಿಹನು
ಸಮದೆ ಭಾವಿಸುವನು ಮಣ್ಣು ಕಲ್ಲು ಚಿನ್ನವ ।
ಸಮದೆ ಇರುವನವನು ಪ್ರಿಯವ । ದಪ್ರಿಯದಲಿ, ಧೀರನಹನು
ಸಮದೆ ಭಾವಿಸುವನು ನಿಂದೆ ಆತ್ಮಸ್ತುತಿಗಳ ॥ ॥೨೪॥ 24

ಮಾನವಾಪಮಾನಗಳಲಿ । ಸಮನು ಆಗಿ ಇರುವನವ ಸ
ಮಾನವಾರಿಗಹುದು ಮಿತ್ರ ಅರಿಯ ಪಕ್ಷಗಳ್ ।
ತಾನು ಸರ್ವಕಾರ್ಯಗಳಾ । ರಂಭ ಪರಿತ್ಯಾಗಿಯಾ ಮ
ಹಾನುಭಾವನವನು ಗುಣಾತೀತನೆನಿಪನು ॥ ॥೨೫॥ 25

ಇನ್ನು ಯಾವನವನು ಅವ್ಯ । ಭಿಚಾರಿಣೀ ಭಕ್ತಿಯಿಂದ
ಲೆನ್ನ ಬಿಡದೆ ನಿತ್ಯಸೇವಿಸುತ್ತಲಿರುವನೊ ।
ಇನ್ನು ಅವನೆ ಗುಣಗಳಿವುಗ । ಳನ್ನು ಪೂರ್ಣದಾಟಿ ಹೋಗಿ
ಸನ್ನುತದಾ ಬ್ರಹ್ಮಭಾವ ಪಡೆಯಲರ್ಹನು ॥ ॥೨೬॥ 26

ಅದುವೆ ಬ್ರಹ್ಮವಸ್ತುವದಕೆ । ತಾ ಪ್ರತಿಷ್ಠನಾಗಿ ಇಹೆನು
ಅದುವೆ ಅಮೃತ ಮತ್ತೆ ಅವ್ಯಯವು ಎನಿಸಿದ ।
ಅದುವೆ ಶಾಶ್ವತದ ಧರ್ಮ । ಕಾಶ್ರಯವಿಹೆ ನಾನೆ ಮತ್ತೆ
ಯದುವೆ ಏಕಾಂತವಾದ ಸುಖಕು ಆಶ್ರಯ ॥ ॥೨೭॥ 27

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ನಾಲ್ಕು**
**ಸಾಂತಗೊಂಡ ಗುಣತ್ರಯವಿಭಾಗಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಹದಿನೈದು

# ಪುರುಷೋತ್ತಮ ಯೋಗ

ಅದಕೆ ಊರ್ಧ್ವದಲ್ಲಿ ಮೂಲ । ಅಧದೆ ಶಾಖೆ ಇಹುದು ಬಲ್ಲ
ರದನು ಪೇಳ್ವರವ್ಯಯದಶ್ವತ್ಥವೆನುತಲಿ ।
ಅದಕೆ ಛಂದಗಳವೆ ಪರ್ಣ । ವಾಗಿ ಇಹವು ಎಂಬರಾವ
ನದನು ಬಲ್ಲನವನೆ ವೇದವಿದನು ಪಾರ್ಥನೆ ॥ ॥೧॥ 1

ಅಧದೆ ಮತ್ತೆಯೂರ್ಧ್ವದಲ್ಲಿ । ಯದರ ಶಾಖೆ ಪ್ರಸರಿಸಿಹವು
ಅದುವು ಗುಣಪ್ರವೃದ್ಧ ವಿಷಯಗಳುವೆ ಚಿಗುರೆಲೆ ।
ಅಧದೆ ಮೂಲ ಸಂತತಿಗಳು । ಹಬ್ಬಿ ಇಹವು ಕರ್ಮಬಂಧ
ವದನು ಮಾಳ್ಪುದಾವುವೀ ಮನುಷ್ಯ ಲೋಕದೆ ॥ ॥೨॥ 2

ಇದರ ರೂಪವಿಹವೆ ನಿಜದೆ । ಯದುವು ದೊರೆವುದಿಲ್ಲ ಇಲ್ಲ
ವಿದಕೆ ಅಂತ ಆದಿ ಮತ್ತೆಯಾ ಪ್ರತಿಷ್ಠೆಯು ।
ಇದನು ಬಹಳ ರೂಢಮೂಲ । ವಾದ ಅಶ್ವತ್ಥವನ್ನು
ಅದುವೆಯಾ ಅಸಂಗಶಸ್ತ್ರದಿಂದ ಛೇದಿಸಿ ॥ ॥೩॥ 3

ಪರಿಯೊಳರಸ ಬೇಕು ಬಳಿಕ । ಲದುವೆ ಪದವನೇತರಿಂದ
ನರರು ಪುನಹ ಪಡೆವುದಿಲ್ಲ ತಾ ನಿವರ್ತಿಯಂ ।
ಶರಣು ಪೋಪೆನಾದಿ ಪುರುಷ । ನವನನೇಯೆ ಯಾವನಿಂದ
ಹರಡಿ ಇಹುದು ಪುರಾತನಪ್ರವೃತ್ತಿಯೆನ್ನುತ ॥ ॥೪॥ 4

ಅದುವೆ ಮಾನ ಮೋಹರಹಿತ । ಸಂಗದೋಷವನ್ನು ಗೆದ್ದ
ಅದಧ್ಯಾತ್ಮರತರು ಕಾಮನೆಗಳ ರಹಿತರು ।
ಅದುವೆ ದುಃಖ ಸುಖದ ಸಂಜ್ಞ। ದ್ವಂದ್ವಮುಕ್ತರಾ ಅಮೂಢ
ರದುವೆ ಅವ್ಯಯದ ಪರಮ ಪದವ ಪಡೆವರು ॥ ॥೫॥ 5

ಅದನು ಭಾಸಗೊಳಿಪುದಿಲ್ಲ । ಸೂರ್ಯನಥವ ಚಂದ್ರತಾನು
ಅದನು ಭಾಸಗೊಳಿಪುದಿಲ್ಲ ತಾನು ಪಾವಕ ।
ಮುದದೆ ಯಾವುದನ್ನು ಸೇರಿ । ನರರು ನಿವರ್ತಿಸುವುದಿಲ್ಲ
ವದುವೆ ಅವ್ಯಯದ ಪರಮ ಧಾಮ ನನ್ನದು ॥ ॥೬॥ 6

ನನ್ನದೇಯೆ ಅಂಶವಾದ । ಜೀವಲೋಕದಲ್ಲಿ ಜೀವ
ವಿನ್ನದೇಯೆ ಜೀವಭೂತ ಸನಾತನವದು ।
ಇನ್ನು ಬಿಡದೆ ಮನಸಮೇತ । ವಾದ ಆರು ಇಂದ್ರಿಯಗಳ
ಮುನ್ನ ಪ್ರಕೃತಿ ಸ್ಥಿತವವನ್ನು ಕರ್ಷಿಸುವುದದು[47] ॥ ॥೭॥ 7

ಯಾವುದೇ ಶರೀರವನ್ನು । ಪಡೆವನಾವುದನ್ನು ಬಿಡುವ
ಜೀವರೂಪನಾದ ಈಶ್ವರನು ಆಗಲು ।
ತಾವಿವಾರು ಇಂದ್ರಿಯಗಳ । ವಾಯು ಗಂಧಗಳನು ಒಯ್ಯು
ವಾ ವಿಧದಲೆ ಬಿಡದೆ ಸೆಳೆದುಕೊಂಡು ಒಯ್ವನು ॥ ॥೮॥ 8

ಅದುವೆ ಶ್ರೋತ್ರ ಚಕ್ಷುವದುವು । ಸ್ಪರ್ಶನವದು ಮತ್ತೆ ರಸನ
ವದುವು ಮತ್ತೆ ಘ್ರಾಣವದುವು ತಾನು ಆಗಲು ।
ಅಧಿಷ್ಠಾಪಿಸುತಲಿ ಮತ್ತೆ । ಮನವು ಸಹಿತಿವಿಂದ್ರಿಯಗಳ
ನದುವೆ ಬಿಡದೆ ವಿಷಯಗಳುಪಸೇವೆ ಗೈವನು ॥ ॥೯॥ 9

ಅದೆ ಶರೀರ ಬಿಡುವ ಅವನು । ಅಥವ ಅದರೊಳಿರುವ ಅವನು
ಅದೆಯೆ ಭುಂಜಿಪವನು ಅಥವ ಗುಣದೆ ಸಹಿತನು ।
ಅದವನಾವನೆಂಬುದನು ವಿ । ಮೂಢರವರು ಕಾಂಬುದಿಲ್ಲ
ವದುವೆ ಕಾಂಬರವರು ಜ್ಞಾನಚಕ್ಷುವಂತರು ॥ ॥೧೦॥ 10

47. ಕರ್ಷಿಸುವುದು = ಎಳೆದುಕೊಳ್ಳುವುದು

ಯತತರುಗಳು ಆದ ಯೋಗಿ । ಗಳುವೆ ಇವನ ಆತ್ಮಚಿತ್ತ
ಯುತರು ಆಗಿ ಆತ್ಮದಲ್ಲಿ ಇಹನ ಕಾಂಬರು ।
ಯತತರಾದರೂವೆ ಅಕೃತ । ದಾತ್ಮವಂತರಾದರವರು
ಮತಿಯೊಳಚೇತಸರು ಇವನ ಕಾಂಬುದಿಲ್ಲವು ॥ ॥೧೧॥ 11

ಯಾವುದದಾದಿತ್ಯನೆನಿಪ । ಸೂರ್ಯನಲ್ಲಿ ಇರುವ ತೇಜ
ತೀವಿಯಖಿಲ ಜಗತನಿದನು ಭಾಸಗೊಳಿಪುದೊ ।
ಯಾವ ತೇಜ ಚಂದ್ರನಲಿದೆ । ಯಾವ ತೇಜವಗ್ನಿಯೊಳಿದೆ
ಭಾವಿಸದುವೆ ತೇಜ ನನ್ನದೆನುತ ಪಾರ್ಥನೆ ॥ ॥೧೨॥ 12

ನಾನು ಪೃಥ್ವಿಪ್ರವೇಶಿಸುತ । ಮತ್ತೆ ಭೂತಗಳನು ಅಲ್ಲಿ
ನಾನು ಧಾರಣೇಯ ಗೈವೆನೆನ್ನ ಓಜದೆ ।
ನಾನು ಮತ್ತೆ ಓಷಧಿಗಳ । ನೆಲ್ಲ ಪೋಷಿಸುವೆನು ಬಿಡದೆ
ನಾನು ರಸಾತ್ಮಕನು ಆದ ಚಂದ್ರನಾಗುತ ॥ ॥೧೩॥ 13

ನಾನು ವೈಶ್ವಾನರಾಗ್ನಿ । ಯಾಗಿ ಎಲ್ಲ ಪ್ರಾಣಿಗಳಾ
ಜನ್ಯ ದೇಹಗಳನು ಬಿಡದೆ ಆಶ್ರಯಿಸುತಲಿ ।
ತಾನು ಪ್ರಾಣವಾ ಅಪಾನ । ಸಮಾಯುಕ್ತ ಚತುರ್ವಿಧದ
ಅನ್ನವನ್ನು ನಾನು ಅಲ್ಲಿ ಪಚನಗೊಳಿಪೆನು ॥ ॥೧೪॥ 14

ನಾನು ಮತ್ತೆ ಸರ್ವಪ್ರಾಣಿ । ಹೃದಯದಲ್ಲಿ ನೆಲಸಿ ಇಹೆನು
ಎನ್ನಿಮೇಯೆ ಸ್ಮೃತಿಯು ಜ್ಞಾನವಾ ಅಪೋಹವು ।
ನಾನೆ ಮತ್ತೆ ಸರ್ವವೇದ । ಗಳಿಂ ವೇದ್ಯನಾಗಿ ಇಹೆನು
ನಾನೆ ವೇದಾಂತ ಕರ್ತೃ ವೇದವಿದ ಸಹ ॥ ॥೧೫॥ 15

ಪುರುಷರಿಬ್ಬರವರು ಇಹರು । ನೋಡು ಇದುವೆ ಲೋಕದಲ್ಲಿ
ಕ್ಷರವು ಎನುತ ಮತ್ತೆಯದಕ್ಷರವು ಎನುತಲಿ ।
ಕ್ಷರವು ಎನಿಪುದದುವು ಸರ್ವ । ವಾದ ಭೂತಗಳವು ತಾವು
ಒರೆವರದಕ್ಷರವು ಕೂಟಸ್ಥವೆನುತಲಿ ॥ ॥೧೬॥ 16

ಇರುವನಾದರುತ್ತಮನು । ಆದ ಪುರುಷನನ್ಯನೊಬ್ಬ
ಧರೆಯಲಿ ಪರಮಾತ್ಮನೆಂದವನುದಾಹೃತ ।
ಇರದೆ ಯಾವನವನು ಮೂರು । ಲೋಕಗಳನು ವ್ಯಾಪಿಸುತಲಿ
ಭರಿಸಿ ಪೋಷಿಸುವನು ಅವ್ಯಯನು ಈಶ್ವರ ॥ ॥೧೭॥ 17

ಏತಕೆನಲು ನಾಶವುಳ್ಳ । ಕ್ಷರವ ಮೀರಿ ಇಹೆನು ನಾನು
ಮತ್ತಿಹೆನಕ್ಷರಕ್ಕಿಂತಲಾನು ಉತ್ತಮ ।
ರೀತಿಯಿಂದಲದರಿನಾನು । ಲೋಕದಲ್ಲು ವೇದದಲ್ಲು
ಖ್ಯಾತನಾಗಿ ಸುಪುರೋಷತ್ತಮನು ಎನಿಸಿಹೆ ॥ ॥೧೮॥ 18

ಇರದೆ ಯಾವನವನು ನನ್ನ । ನೇಯೆ ಅಸಂಮೂಢನಾಗಿ
ಅರಿವನೋವಿ ಸುಪುರುಷೋತ್ತಮನು ಎನುತಲಿ ।
ಸರುವ ರೀತಿ ಸರುವವನ್ನು । ಬಲ್ಲನೆನಿಪನವನು ಬಿಡದೆ
ಸರುವ ಭಾವದಿಂದ ನನ್ನನೇಯೆ ಭಜಿಪನು ॥ ॥೧೯॥ 19

ಇಂತುಗುಹ್ಯತಮವು ಆದ । ಶಾಸ್ತ್ರವದುವು ಬಿಡದೆ ಈಗ
ಅಂತು ನಿನಗೆ ಉಕ್ತವಾಯಿತೆನ್ನಿ ಮನಘನೆ ।
ಇಂತು ಇದನು ಬುದ್ಧಿಯಿಂದ । ತಿಳಿದು ಮನುಜ ಬಿಡದೆ ಬುದ್ಧಿ
ವಂತ ಮತ್ತೆ ತಾ ಕೃತಾರ್ಥನಹನು ಭಾರತ ॥ ॥೨೦॥ 20

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ಐದು**
**ಸಾಂತಗೊಂಡ ಸುಪುರುಷೋತ್ತಮನ ಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

## ಅಧ್ಯಾಯ ಹದಿನಾರು

# ದೈವಾಸುರ ಸಂಪದ್ಯೋಗ

ಅದುವೆ ಅಭಯ ಸತ್ವಸಂ । ಶುದ್ಧಿಯದುವು ತಾನು ಮತ್ತೆ
ಯದುವೆ ಜ್ಞಾನಯೋಗದಲ್ಲಿ ಇರುವ ಸ್ಥಿತಿಯದು ।
ಅದುವೆ ದಾನವದುವು ದಮವು । ಮತ್ತೆ ಯಜ್ಞವದುವು ಮತ್ತೆ
ಯದುವೆ ಸ್ವಾಧ್ಯಯನ ತಪವು ಮತ್ತೆಯಾರ್ಜವ ॥ ॥೧॥ 1

ಅದುವೆ ತಾನಹಿಂಸೆಯದುವೆ । ಸತ್ಯ ಮತ್ತೆಯದಕ್ರೋಧ
ವದುವೆ ತ್ಯಾಗ ಶಾಂತಿ ಮತ್ತೆಯಾ ಅಪೈಶುನ ।
ಅದುವೆ ದಯೆಯು ಭೂತಗಳಲಿ । ಮತ್ತೆಯದುವು ಅಲೋಲುಪತೆ
ಅದುವೆ ಮಾರ್ದವವು ಲಜ್ಜೆಯಚಾಪಲತೆಯು ॥ ॥೨॥ 2

ಅದುವೆ ತೇಜವದುವು ಕ್ಷಮೆಯು । ಅದುವೆ ಧೃತಿಯು ಶೌಚವದುವು
ಅದದ್ರೋಹ ಮತ್ತೆಯದತಿಮಾನದೂರತೆ ।
ವಿಧದ ಗುಣಗಳಿವುಗಳೆಲ್ಲ ದೈವಿ । ಸಂಪದವನು ಪಡೆದು
ಉದಿಸಿ ಬಂದವನಿಗೆ ಒದಗಿ ಬಹವು ಭಾರತ ॥ ॥೩॥ 3

ಅದುವೆ ದಂಭ ದರ್ಪವದುವು । ಮತ್ತೆಯದಭಿಮಾನ ತಾನು
ಅದುವೆ ಕ್ರೋಧವಾ ಪರುಷತೆ ತಾನು ಮತ್ತೆಯು ।
ಅದಜ್ಞಾನವಿವುಗಳೆಲ್ಲ । ಆಸುರೀಯ ಸಂಪದದಲಿ
ಉದಿಸಿ ಬಂದವನಿಗೆ ಒದಗಿ ಬಹವು ಪಾರ್ಥನೆ ॥ ॥೪॥ 4

ತಾನು ದೈವಿ ಸಂಪದವದು । ಆ ವಿಮೋಕ್ಷಕಾಗಿ ಎನಿಸಿ
ತಾ ನಿಬಂಧಕಾಗಿ ಆಸುರೀಯವೆನಿಸಿದೆ ।
ನೀನು ಶೋಚನೆಯನು ಗೈಯ । ಬೇಡ ದೈವಿ ಸಂಪದದಲಿ
ನೀನು ನಿಜದೆ ಉದಿಸಿ ಬಂದು ಇರುವೆ ಪಾಂಡವ ॥ ॥೫॥ 5

ಇದುವೆ ಲೋಕ ಭೂತಗಳಲಿ । ಎರಡವಾ ಪ್ರಕಾರವುಂಟು
ಅದುವೆ ದೈವ ಮತ್ತೆ ಆಸುರವು ಎಂತಲು ।
ಅದುವೆ ದೈವವನ್ನು ವಿಸ್ತ । ರದಲಿ ಪೇಳಿಯಾದುದೀಗ
ಲದುವೆ ಆಸುರವನು ಪಾರ್ಥ ಎನ್ನಿಮಾಲಿಸು ॥ ॥೬॥ 6

ಮಾಡುವಾಪ್ರವೃತ್ತಿ ಮತ್ತೆ । ಮಾಡದಾ ನಿವೃತ್ತಿಗಳನು
ನೋಡಿ ತಿಳಿಯರಾಸುರೀಸ್ವಭಾವಜನಗಳು ।
ಮೂಢರವರೊಳಿಲ್ಲ ಶೌಚ । ವಾಚಾರ ಸಹಿತವಿಲ್ಲ
ನೋಡಲದುವೆ ಮತ್ತೆ ಸತ್ಯವವರೊಳಿಲ್ಲವು ॥ ॥೭॥ 7

ಜಗವಸತ್ಯವಾದುದಪ್ರ । ತಿಷ್ಠವಾದುದೆಂಬರವರು
ಜಗಕೆ ಈಶ್ವರನು ಕೂಡ ಇಲ್ಲವೆಂಬರು ।
ಜಗವು ಪರಸ್ಪರದ ಯೋಗ । ದಿಂದ ಸಂಭವಿಸಿಯಿಲ್ಲ
ಜಗದೆ ಕಾಮಭೋಗವಲ್ಲದನ್ಯವೇನಿದೆ ॥ ॥೮॥ 8

ದೃಷ್ಟಿಭಾವವಿಂಥದನ್ನು । ಬಿಡದೆಯೆ ಅವಲಂಬಿಸುತಲಿ
ನಷ್ಟ ಆತ್ಮರಲ್ಪಬುದ್ಧಿಯುಳ್ಳ ಜನಗಳು ।
ದುಷ್ಟರಾಗಿ ಉಗ್ರಕರ್ಮಿ । ಗಳುವೆ ಆಗಿ ಪ್ರಭವಿಸುವರ
ನಿಷ್ಟಕ್ಷಯಕೆ ಆಗಿ ಜಗಕಹಿತರು ಆಗಿಯು ॥ ॥೯॥ 9

ಎಂದು ಪೂರ್ಣಗೊಳ್ಳದಂಥ । ಕಾಮನೆಗಳನಾಶ್ರಯಿಸುತ
ನಿಂದ್ಯವಾದ ದಂಭಮಾನ ಮದದೆ ಕೂಡಿಯು ।
ಅಂಧಮೋಹದಿಂದ ಅಸತ್ । ಕಲ್ಪನೆಗಳ ಮಾಡಿಕೊಂಡು
ನಿಂದ್ಯರಶುಚಿವ್ರತರು ಆಗಿ ಪ್ರವರ್ತಿಸುವರು ॥ ॥೧೦॥ 10

ಇರದೆ ಅಪರಿಮೇಯವಾದ । ಪ್ರಲಯದಂತವುಳ್ಳುದಾದ
ಬರಿದೆ ವ್ಯರ್ಥವಾದ ಚಿಂತೆಯಾ ಉಪಾಶ್ರಿತರ್ ।
ಪರಮವೆಂದು ಬಗೆಯ ಕಾಮ । ದದುಪಭೋಗವನ್ನೆ ತಾನ
ದಿರುವುದಷ್ಟೆ ಎನುತ ಬಿಡದೆ ತಾವು ನಿಶ್ಚಿತರ್ ॥ ॥೧೧॥ 11

ಆ ಮಹಾಶೆ ಪಾಶಶತ । ಗಳಿಂದ ಬದ್ಧರಾದ ಅವರು
ಕಾಮಕ್ರೋಧಪರಾಯಣರು ಅವರು ಮತ್ತೆಯು ।
ಕಾಮಭೋಗ ಭೋಗದರ್ಥ । ಕಾಗಿ ತಾವು ಬಿಡದೆ ಇರದೆ
ಕಾಮಿಪರನ್ಯಾಯದರ್ಥಸಂಚಯಂಗಳ ॥ ॥೧೨॥ 12

ಇದುವು ಇಂದು ನನಗೆ ಲಬ್ಧ । ವಾಯಿತೀಗಲಿನ್ನು ನಾನು
ಮುದದೆ ಬಿಡದೆ ಪಡೆವೆನಿದುವೆ ಮನೋರಥವನು ।
ಇದುವೆ ಧನವು ನನಗೆ ಇಹುದು । ಮತ್ತೆ ಇದುವು ಕೂಡ ಬಹಳ
ವಿಧದೆ ನಾಳೆ ನನಗೆಯಹುದು ಪುನಹ ಧನವದು ॥ ॥೧೩॥ 13

ಎನ್ನಿಮಿವನು ಶತ್ರುತಾನು । ಹತನು ಆಗಿ ಇಹನು ನಾನು
ಇನ್ನು ಹತವ ಮಾಳ್ಪೆನಿರದೆ ಬೇರೆಯವರನು ।
ನಾನೆ ಈಶ್ವರನು ಇಹೆನು । ನಾನೆ ಭೋಗಿಯಾಗಿ ಇಹೆನು
ನಾನೆ ಸಿದ್ಧ ನಾನೆ ಬಲನು ಸುಖಿಯು ನಾನೆಯೆ ॥ ॥೧೪॥ 14

ನಾನು ಆಢ್ಯನಾಗಿ ಇಹೆನು । ನಾನು ಸತ್ಕುಲಜನಿಹೆನು
ಏನು ಯಾವನಿಹನು ತಾ ಸಮಾನನೆನ್ನಯ ।
ನಾನು ಯಜ್ಞಗೈವೆ ನಾನು । ದಾನಮಾಳ್ಪೆನಾನಂದ
ನಾನು ಪಡೆವೆಯೆನುತಲಜ್ಞಾನ ಮೋಹಿತರ್ ॥ ॥೧೫॥ 16

ಇಂತನೇಕ ವಿಧದೆ ಚಿತ್ತ । ವಿಭ್ರಾಂತಿಯುಳ್ಳರಾಗಿ
ಅಂತು ಮೋಹಜಾಲ ಸಮಾವೃತರು ಆಗಿಯು ।
ಅಂತೆ ಕಾಮಭೋಗದಲ್ಲಿ । ಬಿಡದೆ ತಾ ಪ್ರಸಕ್ತರಾಗಿ
ಯಂತು ಬೀಳ್ವರವರು ಅಶುಚಿಯಾದ ನರಕದೆ ॥ ॥೧೬॥ 17

ತಮ್ಮ ತಾವೆ ಸಂಭಾವಿ । ಸುವರು ವಿನಯಹೀನರವರು
ಹೆಮ್ಮೆ ಧನವು ಮಾನ ಮದದೆ ಅವರು ಮತ್ತರು ।
ಸುಮ್ಮನೇಯೆ ನಾಮಮಾತ್ರ । ಯಜ್ಞದಿಂದ ಯುಜಿಪರವರು
ಹಮ್ಮು ದಂಭದಿಂದ ತಾವು ವಿಧಿವಿರುದ್ಧದೆ ॥ ॥೧೭॥ 18

ಒದಗಿದಹಂಕಾರದಿಂದೆ । ಬಲದೆ ದರ್ಪದಿಂದೆ ಮತ್ತೆ
ಯದುವೆ ಕಾಮಕ್ರೋಧದಿಂದ ಕೂಡಿ ಇರುವರು ।
ಪುದಿದು ಪರರ ದೇಹದಲ್ಲಿ । ಆತ್ಮರೂಪನಾದ ನನ್ನ
ನಧಮರಿವರು ದ್ವೇಷಿಸುವರಸೂಯವಂತರು ॥ ॥೧೮॥ 18

ಅವರ ನಾನು ದ್ವೇಷಿಗಳನು । ಕ್ರೂರರುಗಳ ಬಿಡದೆಯಲ್ಲಿ
ಭವದ ಸಂಸಾರದಲ್ಲಿ ನರಾಧಮರನು ।
ಜವದೆ ತಳ್ಳಿ ನೂಕುವೆನೆಂ । ದೆಂದಿಗೂವೆ ಅಶುಭವಾದ
ಅವರನಾಸುರಂಗಳಾದ ಯೋನಿಗಳಲಿಯೆ ॥ ॥೧೯॥ 19

ಆಸುರೀಯ ಯೋನಿಯನ್ನು । ಬಿಡದೆ ಪಡೆದುಕೊಂಡ ಅವರು
ಪಾಶವೀಯ ಮೂಢಜನರು ಜನ್ಮ ಜನ್ಮದಿ ।
ಏಸುಗೈದರೂವೆ ನನ್ನ । ಪಡೆಯದೇಯೆ ಕೌಂತೇಯ
ಹೇಸಿಕೊಳ್ಳುವಂತೆ ಸೇರ್ವರಧಮಗತಿಯನು ॥ ॥೨೦॥ 20

ಮೂರು ವಿಧಗಳಾದ ಇದುವೆ । ನರಕಕೊಯ್ವ ದ್ವಾರಗಳಿವು
ಸೇರಿ ಬಿಡದೆ ಆತ್ಮನನ್ನು ನಾಶಗೊಳಿಪುವು ।
ಮೂರು ದ್ವಾರಗಳವು ಕಾಮ । ಕ್ರೋಧ ಹಾಗು ಲೋಭವದುವೆ
ಕಾರಣದಲಿ ಮೂರನಿವನು ತ್ಯಜಿಸಬೇಕೆಲೊ ॥ ॥೨೧॥ 21

ಮೀರಿ ಇವುಗಳಿಂ ವಿಮುಕ್ತ । ನಾದ ನರನು ಕೌಂತೇಯ
ಮೂರಿವಾದ ತಮದ ದ್ವಾರವಿವುಗಳಿಂದಲಿ ।
ಕೋರಿಯಾಚರಿಸುವನವನು । ಆತ್ಮನದುವೆ ಶ್ರೇಯವನ್ನು
ಹಾರಿಯದರಿನವನು ಪಡೆವ ಪರಮಗತಿಯನು ॥ ॥೨೨॥ 22

ಯಾವನವನು ಶಾಸ್ತ್ರವಿಧಿಗ । ಳನ್ನು ತ್ಯಜಿಸಿ ಸ್ವೇಚ್ಛೆಯಾದ
ಭಾವದಿಂದ ವರ್ತಿಸುವನು ಕಾಮಕಾರಿಯು ।
ಯಾವ ರೀತಿ ಕೂಡ ಅವನು । ಸಿದ್ಧಿಯನ್ನು ಪಡೆವುದಿಲ್ಲ
ಯಾವ ಸುಖವ ಅಥವ ಪರಮಗತಿಯ ಪಡೆಯನು ॥ ॥೨೩॥ 23

ಅದುವೆ ಕಾರಣದಲಿ ಶಾಸ್ತ್ರ । ಗಳವು ತಾ ಪ್ರಮಾಣಗಳವು
ವಿಧಿಯ ಕಾರ್ಯವಾ ಅಕಾರ್ಯದಾ ವ್ಯವಸ್ಥೆಯೊಳ್ ।
ಅದನು ತಿಳಿದು ಶಾಸ್ತ್ರದಾ । ವಿಧಾನದಲ್ಲಿ ಉಕ್ತವದನು
ವಿಧದೆ ಕರ್ಮವನ್ನು ನೀನು ಮಾಡಬೇಕೆಲೊ ॥ ॥೨೪॥ 24

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ಆರು**
**ಸಾಂತ ದೈವ ಅಸುರ ಸಂಪದದ ಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ಹದಿನೇಳು

# ಶ್ರದ್ಧಾತ್ರಯ ವಿಭಾಗ ಯೋಗ

ಯಾರು ಶಾಸ್ತ್ರದಾ ವಿಧಾನ । ಗಳನು ತ್ಯಜಿಸಿಬಿಟ್ಟು ತಾವು
ಪೂರ ಶ್ರದ್ಧೆಯುಳ್ಳರಾಗಿ ಬಿಡದೆ ಯಜಿಪರೊ ।
ಮೀರಿದವರ ನಿಷ್ಠೆಯಾದ । ರಾವುದದುವು ಕೃಷ್ಣ ಪೇಳು
ಮೂರರಲ್ಲಿ ಸತ್ವ ರಜವೊ ತಮವೊ ಯಾವುದು ॥ ॥೧॥ 1

ಅರಿಯೊ ಮೂರು ವಿಧಗಳಾದ । ಶ್ರದ್ಧೆಯಿರುವುದೆಂಬುದನ್ನು
ಸರುವ ದೇಹಿಗಳಿಗೆ ತಾ ಸ್ವಭಾವಜನ್ಯವು ।
ಮೆರೆವ ಸಾತ್ವಿಕೀಯು ಮತ್ತೆ । ಯದುವೆ ರಾಜಸೀಯು ಮತ್ತೆ
ಇರುವ ತಾಮಸೀಯು ಇಂತು ಅವನು ಕೇಳೆಲೊ ॥ ॥೨॥ 2

ಸರುವರುಗಳ ಶ್ರದ್ಧೆ ತಾನು । ಅವರು ಅವರುಗಳಲಿ ಪುದಿದು
ಇರುವ ಸತ್ವದಾನುರೂಪವಹುದು ಭಾರತ ।
ಪುರುಷನಿವನು ಶ್ರದ್ಧೆವಂತ । ನಿಹನು ಎಂಬರಾವನದುವು
ಇರುವುದೆಂತು ಶ್ರದ್ಧೆ ಇರುವನವನು ಅಂತೆಯೆ ॥ ॥೩॥ 3

ಯುಜಿಪರವರು ಸಾತ್ವಿಕರುಗ । ಳವರು ದೇವರುಗಳ ಬಿಡದೆ
ಯುಜಿಪರವರು ಯಕ್ಷರಾಕ್ಷಸರನು ರಾಜಸರ್ ।
ಭಜಿಸುತಲಿಯೆ ಪ್ರೇತ ಮತ್ತೆ । ಭೂತಗಣಗಳನ್ನು ತಾವು
ಯುಜಿಪರವರು ಅನ್ಯತಾಮಸೀಯಜನಗಳು ॥ ॥೪॥ 4

ಮೆರೆವ ಶಾಸ್ತ್ರವಿಹಿತ ವಿಧಕೆ । ತಾ ವಿರುದ್ಧವಾಗಿ ಅವರು
ಇರದೆ ಘೋರ ತಪವ ತಪಿಪರಾವ ಜನಗಳು ।
ಬರಿದೆ ದಂಭವಹಂಕಾರ । ಸಂಯುಕ್ತರಾಗಿ ಅವರು
ಭರದ ಕಾಮರಾಗ ಬಲದೆ ಬಿಡದೆ ಕೂಡಿಯು ॥ ॥೫॥ 5

ಹಿರಿದು ನೋಯಿಸುವರು ತಾ । ಶರೀರದಲ್ಲಿ ಸ್ಥಿತವು ಆಗಿ
ಇರುವ ಭೂತಗ್ರಾಮವದನ ಚೇತಸರುಗಳು ।
ಇರದೆ ನೋಯಿಸುವರು ನನ್ನ । ನೂ ಶರೀರದಂತಸ್ಥಿತನ
ಅರಿಯೊ ನಿಶ್ಚಯದಲಿ ಅವರನಸುರರೆನ್ನುತ ॥ ॥೬॥ 6

ಇಹದೆ ಆಹಾರವಾದ । ರೂವೆ ಕೂಡ ಸರ್ವರಿಂಗು
ಅಹುದು ಮೂರು ವಿಧದೆ ಬಿಡದೆಯದುವು ಪ್ರಿಯಕರ ।
ಇಹದ ಯಜ್ಞವದುವು ತಪವು । ದಾನವದುವು ಕೂಡ ಅಂತೆ
ಇಹವು ಅವುಗಳೊಳಗಣದುವೆ ಭೇದ ತಿಳಿಯೆಲೊ ॥ ॥೭॥ 7

ಧರೆಯೊಳಾಯು ಸತ್ವವನ್ನು । ಬಲವ ಆರೋಗ್ಯವನ್ನು
ಪಿರಿದು ಸುಖವು ಪ್ರೀತಿಯನ್ನು ವಿವರ್ಧಿಸುವವು ।
ಸ್ಥಿರತೆ ರಸವನುಳ್ಳ ಸ್ನಿಗ್ಧ । ಹೃದ್ಯವಾದುದಾಹಾರ
ವಿರದೆ ಸಾತ್ವಿಕರಿಗೆ ತಾವು ಪ್ರಿಯಕರಂಗಳು ॥ ॥೮॥ 8

ಪಿರಿದು ಕಾರವುಳ್ಳ ಹುಳಿಯ । ಲವಣಯುಕ್ತ ಅತಿಯ ಉಷ್ಣ
ಭರದೆ ತೀಕ್ಷ್ಣರೂಕ್ಷವಾಗಿ ದಹಿಸುವಂಥವು ।
ಪರಿಯ ಆಹಾರವಿವುಗ । ಳೇಯೆ ರಾಜಸರಿಗೆ ಇಷ್ಟ
ವಿರದೆ ತಾವು ದುಃಖ ಶೋಕ ರೋಗಕಾರಿಗಳ್ ॥ ॥೯॥ 9

ಜಾವ ಕಳೆದು ಹಳೆಯದಾದ । ರಸವು ಹೋದ ನಾರುವಂಥ
ಆವುದದುವು ಮತ್ತೆ ರಾತ್ರಿ ಕಳೆದು ಹೋದುದು ।
ಯಾವುದುಚ್ಛಿಷ್ಟ ಮತ್ತ । ಮೇಧ್ಯವಾದುದದುವು ಕೂಡ
ಯಾವ ಇಂಥ ಭೋಜನವದು ತಾಮಸಪ್ರಿಯ ॥ ॥೧೦॥ 10

ಫಲದ ಆಕಾಂಕ್ಷೆಯಿಲ್ಲ । ದಂತೆ ಯಜ್ಞವಾವುದದುವು
ಸಲುವ ವಿಧಿಯರೀತಿಯಿಂದ ಮಾಡಿದಂಥದು ।
ಸಲುವ ಕರ್ತವ್ಯ ಯಜ್ಞ । ಮಾಡಬೇಕು ಎನುತ ಮನದ
ಒಲವಿನಿಂದ ಸಮದೆ ಗೈವುದದುವು ಸಾತ್ವಿಕ ॥ ॥೧೧॥ 11

ಫಲದ ಉದ್ದೇಶವನ್ನೆ । ಇಟ್ಟುಕೊಂಡು ಬಿಡದೆ ಮತ್ತೆ
ಚಲದ ದಂಭದರ್ಥಕಾಗಿ ಕೂಡ ಯಾವುದು ।
ನಿಲದೆ ಮಾಡೆಪಡುವುದಾದ । ಅದನು ಭರತಶ್ರೇಷ್ಠ ನೀನು
ಫಲದ ಆಶೆ ಯಜ್ಞ ರಾಜಸವು ಎಂದರಿ ॥ ॥೧೨॥ 12

ವಿಧಿವಿಹೀನವಾದ ಮತ್ತೆ । ಅನ್ನದಾನವಿಲ್ಲದಾದ
ಅದುವೆ ಮಂತ್ರಹೀನ ದಕ್ಷಿಣೆಯದಿಲ್ಲದ ।
ಅದುವೆ ಶ್ರದ್ಧೆವಿರಹಿತವದು । ಆದ ಇಂಥ ಯಜ್ಞವಾವು
ದದನು ತಾಮಸವು ಎಂದೆನುತ ಪೇಳ್ವರು ॥ ॥೧೩॥ 13

ದೇವರುಗಳ ದ್ವಿಜರು ಗುರುಗ । ಳದುವೆ ಪ್ರಾಜ್ಞರುಗಳ ಪೂಜೆ
ಓವಿ ಮಾಳ್ಪ ಶೌಚವದುವು ಮತ್ತೆಯಾರ್ಜವ ।
ತಾ ವಿಚರಿಪ ಬ್ರಹ್ಮಚರ್ಯ । ಮತ್ತೆ ತಾನಹಿಂಸೆಯದುವು
ಭಾವಿಸಲಿವು ತಾ ಶರೀರತಪವು ಎನಿಪುದು ॥ ॥೧೪॥ 14

ಅದುದ್ವೇಗರಹಿತವಾದ । ಮತ್ತೆ ಸತ್ಯಯುಕ್ತವಾದ
ಮುದವನೀವ ಪ್ರಿಯದ ಹಿತದ ವಾಕ್ಯವಾವುದು ।
ಅದುವೆ ಮತ್ತೆ ಸ್ವಾಧ್ಯಯನ । ದಭ್ಯಸನವು ಇವುಗಳೆಲ್ಲ
ವಿಧದೆ ಇಂತು ವಾಙ್ಮಯದ ತಪವು ಎನಿಪುದು ॥ ॥೧೫॥ 15

ಮನಸಿನಾ ಪ್ರಸನ್ನತೆಯದು । ಸೌಮ್ಯತೆಯದು ತಾನು ಮತ್ತೆ
ಮೌನವದುವು ಮತ್ತೆ ಆತ್ಮದಾ ವಿನಿಗ್ರಹ ।
ತಾನು ಭಾವ ಸಂಶುದ್ಧಿ । ಯದುವೆ ಇವುಗಳೆಲ್ಲ ಕೂಡಿ
ಮಾನಸಿಕವು ಆದ ತಪವು ಎಂದು ಎನಿಪುದು ॥ ॥೧೬॥ 16

ಪರಮ ಶ್ರದ್ಧೆಯಿಂದ ಕೂಡಿ । ಮೇಲೆ ಹೇಳಿದಂಥ ಮೂರು
ಪರಿಯ ತಪವು ತಪಿತವಾಗೆ ನರರಿನಿಂದಲಿ ।
ಸರುವ ಫಲದ ಕಾಂಕ್ಷೆಯಿಲ್ಲ । ದಂತೆ ಗೈದ ತಪಸುಗಳಿವು
ಮೆರೆವ ಸಾತ್ವಿಕವದೆಂದು ಪೇಳೆಪಡುವುದು ॥ ॥೧೭॥ 17

ಅದುವೆ ಸತ್ಕಾರಕಾಗಿ । ಮಾನಕಾಗಿ ಪೂಜೆಗಾಗಿ
ಮದದೆ ದಂಭದಿಂದ ಕೂಡಿ ತಪವು ಯಾವುದು ।
ಅದುವೆ ಮಾಡೆಪಡುವ ಅಂಥ । ತಪವು ಪೇಳೆಪಟ್ಟು ಇಹುದು
ಅದುವೆ ರಾಜಸವು ಎನುತ ಚಲವದಧ್ರುವ ॥ ॥೧೮॥ 18

ಇರದೆ ಮೂಢಗ್ರಹಣ ಬುದ್ಧಿ । ಯಿಂದ ಕೂಡಿ ಯಾವ ತಪವು
ಬರಿದೆ ಆತ್ಮಪೀಡೆಗಾಗಿ ಅಥವ ತಾನದು ।
ಪರರ ಆ ಅನಿಷ್ಟಕಾಗಿ । ಮಾಡೆಪಡುವುದದುವು ತಪವು
ಧರೆಯೊಳುದಾಹೃತವು ತಾಮಸವು ಎನುತಲಿ ॥ ॥೧೯॥ 19

ದಾನಕೊಡುವುದದುವು ಕರ್ । ತವ್ಯವೆಂದು ತಿಳಿದು ಯಾವ
ದಾನವದುವು ಅನುಪಕಾರಿಗಳಿಗೆ ಕೊಡುವುದು ।
ತಾನು ದೇಶ ಕಾಲ ಮತ್ತೆ । ಪಾತ್ರವರಿತು ಕೊಡುವುದಾದ
ದಾನವದುವು ಸಾತ್ವಿಕವದು ಎನಿಸಿ ಇರುವುದು ॥ ॥೨೦॥ 20

ದಾನವಾದರಾವುದದುಪ । ಕಾರ ಪ್ರತಿಯ ಅರ್ಥಕಾಗಿ
ತಾನು ಫಲವನುದ್ದೇಶಿಸಥವ ಪುನಹವು ।
ತಾನು ಮನದ ಪರಿಕ್ಲಿಷ್ಟ । ತೆಯಲಿ ಕೊಡುವುದಾದ ಅಂಥ
ದಾನವದುವು ರಾಜಸವದೆನಿಸಿ ಇರುವುದು ॥ ॥೨೧॥ 21

ಅರಿಯದೇಯೆ ದೇಶಕಾಲ । ಗಳನು ಯಾವ ದಾನವದುವು
ಬರಿದೆ ತಾನಪಾತ್ರನಿಂಗೆ ಕೊಡಲ್ಪಡುವುದೊ ।
ಸರಿಯ ಸತ್ಕಾರವಿಲ್ಲ । ದದುವು ತಿರಸ್ಕಾರದಿಂದ
ಲಿರದೆ ಕೊಡುವ ದಾನ ತಾಮಸವು ಎನಿಸಿದೆ ॥ ॥೨೨॥ 22

ಓಂ ತತ್ ಸತ್ ಅದೆಂಬ । ನಿರ್ದೇಶ ಬ್ರಹ್ಮನದುವು
ತಾಂ ನಿಜದೆ ಮೂರು ವಿಧವದೆನಿಸಿ ಇರುವುದು ।
ತಾಂ ಅದರಿನಿಂದ ಬ್ರಾಹ್ಮ । ಣರುವೆ ವೇದಗಳುವೆ ಮತ್ತೆ
ತಾಂ ಯಜ್ಞಗಳುವೆ ವಿಹಿತವಿಹವು ಪೂರ್ವದೆ ॥ ॥೨೩॥ 23

ಅದರಿನಿಂದಲೋಮೆನುತ್ತ । ಲುಚ್ಚಾರಗೊಳ್ಳುತಲಿಯೆ
ಅದುವೆ ಯಜ್ಞದಾನ ತಪಗಳೆಂಬ ಕ್ರಿಯೆಗಳು ।
ವಿಧಿಯಲುಕ್ತವಾದ ಬ್ರಹ್ಮ । ವಾದಿಗಳೀ ಕ್ರಿಯೆಗಳೆಲ್ಲ
ಮೊದಲುಗೊಳ್ಳುವಿರದೆ ತಾವು ಸತತವಾಗಿಯು ॥ ॥೨೪॥ 24

ಫಲವನುದ್ದೇಶಿಸದೆಯೆ । 'ತತ್' ಎಂಬ ಭಾವದಿಂದ
ಸಲುವ ಯಜ್ಞ ತಪವು ಮುಂತಾದ ಕ್ರಿಯೆಗಳು ।
ನಿಲದೆಯಂತೆ ವಿವಿಧವಾದ । ದಾನಕ್ರಿಯೆಗಳೆಲ್ಲ ಮತ್ತೆ
ಸಲುವ ಮೋಕ್ಷ ಕಾಂಕ್ಷಿಗಳಿಂ ಮಾಡೆಪಡುವುವು ॥ ॥೨೫॥ 25

ಮುದದೆ ಸದ್ಭಾವದಲ್ಲಿ । ಮತ್ತೆ ಸಾಧುಭಾವದಲ್ಲಿ
ಅದುವೆ ಸತ್ ಎಂಬುದದು ಪ್ರಯೋಗಗೊಳ್ವುದು ।
ವಿಧದೆ ತಾ ಪ್ರಶಸ್ತವಾದ । ಎಲ್ಲ ಕರ್ಮಗಳಲಿ ಅಂತೆ
ಅದುವೆ ಸತ್ ಶಬ್ದ ಪಾರ್ಥ ಯೋಗಗೊಳ್ವುದು ॥ ॥೨೬॥ 26

ಸರುವ ಯಜ್ಞದಲ್ಲಿ ತಪಸಿ । ನಲ್ಲಿ ಮತ್ತೆ ದಾನದಲ್ಲಿ
ಇರುವ ಸ್ಥಿತಿಯು ಸತ್ ಎನುತ ಪೇಳೆಪಡುವುದು ।
ಇರದೆ ತಾ ತದರ್ಥಕಾಗಿ । ಗೈದ ಕರ್ಮವದುವು ಕೂಡ
ಉರುವ ಸತ್ ಎನುತಲಾಭಿದಾನಗೊಳ್ವುದು ॥ ॥೨೭॥ 27

ತಾನು ಶ್ರದ್ಧೆಯಿಲ್ಲದೇಯೆ । ಗೈದ ಯಜ್ಞ ಕೊಟ್ಟದಾನ
ತಾನು ಗೈದ ತಪವು ಮತ್ತೆ ಯಾವ ಕಾರ್ಯವು ।
ತಾನದೆಲ್ಲ ಅಸತ್ ಎಂದು । ಎನಿಸಿಕೊಳ್ವುದಿನ್ನು ಪಾರ್ಥ
ಏನು ಫಲವು ಅದರೊಳಿಲ್ಲ ಪರದೊಳಿಹದೊಳು ॥ ॥೨೮॥ 28

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ಏಳು**
**ಸಾಂತ ಶ್ರದ್ಧಾತ್ರಯವಿಭಾಗ ಯೋಗವು ॥**

ಓಂ

ಗೀತಾಯೋಗ

ಕನ್ನಡ ಭಗವದ್ಗೀತೆ

ಅಧ್ಯಾಯ ಹದಿನೆಂಟು

# ಮೋಕ್ಷ ಸಂನ್ಯಾಸ ಯೋಗ

ಗುರುವೆ ಮಹಾಬಾಹು ಸಂ । ನ್ಯಾಸದದುವೆ ತತ್ವವನ್ನು
ಅರಿಯಲಿಚ್ಛಿಸುವೆನು ಪೂರ್ಣವಾಗಿ ಮತ್ತೆಯು ।
ಮೆರೆವ ತ್ಯಾಗ ತತ್ವವನ್ನು । ಹೃಷೀಕೇಶ ಬೇರೆಯಾಗಿ
ಅರಿಪು ಕೇಶಿನಿಷೂದನಾ ಎಂದನರ್ಜುನ ॥ ॥೧॥ 1

ಅದುವೆ ಕಾಮ್ಯ ಕರ್ಮಗಳಾ । ನ್ಯಾಸವೆಂಬ ತ್ಯಾಗವನ್ನು
ವಿದಿತ ಸಂನ್ಯಾಸವೆಂದು ಕವಿಗಳರಿವರು ।
ವಿಧದ ಸರ್ವ ಕರ್ಮಗಳಾ । ಫಲದ ತ್ಯಾಗವನ್ನು ತ್ಯಾಗ
ವದುವು ಎನುತ ಪೇಳ್ವರಾ ವಿಚಕ್ಷಣರುಗಳು ॥ ॥೨॥ 2

ಕರ್ಮವೆಂಬುದದುವು ದೋಷ । ಯುಕ್ತವದರಿನಿಂದ ತ್ಯಾಜ್ಯ
ಕರ್ಮವೆಂದು ಪೇಳ್ವನೊಬ್ಬನಾ ಮನೀಷಿಯು ।
ಧರ್ಮ ಯಜ್ಞ ದಾನ ತಪದ । ಕರ್ಮತ್ಯಾಜ್ಯವಲ್ಲವೆಂದು
ಕರ್ಮಗೈವುದೆನುತ ಬೇರೆ ಕೆಲರು ಪೇಳ್ವರು ॥ ॥೩॥ 3

ನನ್ನ ನಿಶ್ಚಯದ ಮತವ । ಕೇಳು ನೀನು ಈಗ ಬಿಡದೆ
ಇನ್ನು ತ್ಯಾಗ ವಿಷಯದಲ್ಲಿ ಭರತಸತ್ತಮ ।
ಇನ್ನದೇ ತ್ಯಾಗವದುವು । ಇಹುದು ಪುರುಷವ್ಯಾಘ್ರ ಕೇಳು
ತಾನು ಮೂರು ವಿಧದೆ ಸ್ಪಷ್ಟವಾಗಿ ವರ್ಣಿತ ॥ ॥೪॥ 4

ಯಜ್ಞ ದಾನ ತಪದ ಕರ್ಮ । ವೆಂದಿಗೂವೆ ತ್ಯಾಜ್ಯವಲ್ಲ
ಸುಜ್ಞರೀತಿಯರಿಯೆ ತಾನವಶ್ಯಕಾರ್ಯವು ।
ಯಜ್ಞಕರ್ಮ ದಾನಕರ್ಮ । ಮತ್ತೆ ತಪದ ಕರ್ಮವಿಂತು
ವಿಜ್ಞರಾ ಮನೀಷಿಗಳಿಗೆ ಪಾವನಂಗಳು ॥ ॥೫॥ 5

ಕರ್ಮವಿವುಗಳನ್ನು ಅದ । ರೂವೆ ಕೂಡ ಸಂಗ ತ್ಯಜಿಸಿ
ಕರ್ಮಫಲಗಳೇಚ್ಛೆಯನ್ನು ಕೂಡ ತ್ಯಜಿಸುತ ।
ಕರ್ಮ ಕರ್ತವ್ಯಗಳಿವು । ಎನುತ ಮಾಡಬೇಕು ಪಾರ್ಥ
ಧರ್ಮದೆನ್ನ ವಿನಿಶ್ಚಿತದ ಮತವಿದುತ್ತಮ ॥ ॥೬॥ 6

ಮರೆವ ನಿಯತವಾದ ಕರ್ಮ । ಗಳಾ ಸಂನ್ಯಾಸವದುವು
ಅರಿಯೆ ತಾನು ಯೋಗ್ಯವಾದುದಲ್ಲವೆಂದಿಗು ।
ಬರಿದೆ ಮೋಹದಿಂದ ಗೈದ । ಅದರ ಪರಿತ್ಯಾಗ ತಾನು
ಇರದೆ ತಾಮಸೀಯ ತ್ಯಾಗವೆಂದು ಎನಿಪುದು ॥ ॥೭॥ 7

ಕರ್ಮವಾವುದದುವು ದುಃಖ । ಕಾರಿ ಎಂಬುದಾಗಿ ತಿಳಿದು
ಕರ್ಮ ಕಾಯಕ್ಲೇಶಭಯದೆ ತ್ಯಜಿಸಿದಂಥದು ।
ಕರ್ಮತ್ಯಾಗವದುವು ರಾ । ಜಸದ ತ್ಯಾಗವೆನ್ನಿಸುವುದು
ಕರ್ಮತ್ಯಾಗಫಲವು ಲಭಿಪುದಿಲ್ಲವದರೊಳು ॥ ॥೮॥ 8

ಕರ್ಮವಾವುದದುವು ಕರ್ । ತವ್ಯಕಾರ್ಯವೆಂದು ಬಗೆದು
ಕರ್ಮನಿಯತವದುವು ಮಾಡೆಪಡುವುದರ್ಜುನ ।
ಕರ್ಮಸಂಗವನ್ನು ಮತ್ತೆ । ಕರ್ಮಫಲವ ತ್ಯಜಿಸಿ ಗೈದ
ನಿರ್ಮಮ ತ್ಯಾಗ ಸಾತ್ವಿಕವು ಮತವಿದು ॥ ॥೯॥ 9

ತಾನಕುಶಲವಾದ ಕರ್ಮ । ವನ್ನು ದ್ವೇಷಿಸುವುದು ಇಲ್ಲ
ತಾನು ಕುಶಲ ಕರ್ಮದಲ್ಲಿ ಸಕ್ತನಲ್ಲವು ।
ತಾನು ಸತ್ವಸಂಪನ್ನ । ನಾದ ತ್ಯಾಗಿಯವನು ಮತ್ತೆ
ತಾನು ಮೇಧಾವಿ ಸಂಶಯದೆ ರಹಿತನು ॥ ॥೧೦॥ 10

ನೋಡೆ ದೇಹಧಾರಿ ಪುರುಷ । ಗೆಂದಿಗೂವೆ ಶಕ್ಯವಲ್ಲ
ರೂಢಿ ಕರ್ಮಗಳನುಶೇಷವಾಗಿ ತ್ಯಜಿಪುದು ।
ಮಾಡುವಂಥ ಕರ್ಮಗಳಾ । ಫಲದ ತ್ಯಾಗಿಯಾವನವನೆ
ರೂಢಿಯಲ್ಲಿ ತಾನು ತ್ಯಾಗಿ ಎಂದು ಎನಿಪನು ॥ ॥೧೧॥ 11

ಧರೆಯೊಳಾ ಅನಿಷ್ಟ ಇಷ್ಟ । ಮತ್ತೆ ಮಿಶ್ರವೆಂಬುದಾಗಿ
ಇರುವ ಮೂರು ವಿಧದ ಕರ್ಮಫಲವು ತಾನದು ।
ಬರುವುದೊದಗಿ ತ್ಯಾಗಿಯಲ್ಲ । ದವಗೆ ಪ್ರೇತನಾದಮೇಲು
ಬರುವುದಿಲ್ಲ ಸಂನ್ಯಾಸಿಗೆಂದಿಗಾದರು ॥ ॥೧೨॥ 12

ಅರಿಯೊ ಪಂಚ ಕಾರಣಗಳ । ನಿವುಗಳನ್ನು ಎನ್ನಿಮೀಗ
ಲರಿಯುವಂತೆ ಬೋಧಿಸುವೆನು ಮಹಾಬಾಹುವೆ ।
ಮೆರೆವ ಸಾಂಖ್ಯಸಿದ್ಧಾಂತ । ದಲ್ಲಿ ಪೇಳೆಪಟ್ಟು ಇಹವು
ಸರುವ ಕರ್ಮಗಳಾ ಸಿದ್ಧಿಗಾಗಿ ಇವುಗಳು ॥ ॥೧೩॥ 13

ಅಧಿಷ್ಠಾನವೆಂಬ ಆ । ಧಾರ ಹಾಗು ಕರ್ತ ಮತ್ತೆ
ವಿಧದೆ ಬೇರೆ ಬೇರೆಯಾದ ಕರಣವವುಗಳು ।
ವಿಧವು ವಿಧವು ಆದ ಬೇರೆ । ಬೇರೆ ಚೇಷ್ಟೆಗಳವು ಮತ್ತೆ
ಯದುವೆಯಲ್ಲಿ ಹಾಗು ದೈವವೆನಿಪ ಪಂಚಮ ॥ ॥೧೪॥ 14

ಇರದೆ ತಾ ಶರೀರದಿಂದ । ವಾಕ್ಕಿನಿಂದ ಮನಸಿನಿಂದ
ನರನು ಯಾವ ಕರ್ಮವನ್ನು ಆರಭಿಸುವನೊ ।
ಸರಿಯ ನ್ಯಾಯವಥವ ತಾ । ವಿರೋಧವಾದ ಕರ್ಮವದಕೆ
ಇರುವುದಾಗಿ ಇವುಗಳೈದು ಕಾರಣಂಗಳು ॥ ॥೧೫॥ 15

ಹೀಗೆ ವಿಷಯವಿರುತಲಿರಲು । ತಾನು ಕರ್ತಾರನೆಂಬು
ದಾಗಿ ಕೇವಲದಲಿ ಆತ್ಮನನ್ನು ಯಾವನು ।
ರಾಗದಕೃತಬುದ್ಧಿಯಿಂದ । ತಾನು ಕಾಂಬನವನು ಇರದೆ
ಯಾಗಿ ದುರ್ಮತಿಯು ತಾನು ನಿಜವ ಕಾಣನು ॥ ॥೧೬॥ 16

ಯಾವನಿಂಗೆ ಅಹಂಕಾರ । ರಹಿತವಾದ ಭಾವವಿಹುದೊ
ಯಾವನದುವು ಬುದ್ಧಿ ಲಿಪ್ತಗೊಳ್ವುದಿಲ್ಲವೊ ।
ತೀವಿದಿದುವೆ ಲೋಕವನ್ನು । ತಾನೆ ಹತವಗೈದರೂವೆ
ಭಾವಿಸವನು ಹತಿಪುದಿಲ್ಲ ಬದ್ಧನಾಗನು ॥ ॥೧೭॥ 17

ಜ್ಞಾನವೆಂದು ಜ್ಞೇಯವೆಂದು । ಪರಿಜ್ಞಾತನೆಂಬುದಾಗಿ
ತಾನು ಮೂರು ವಿಧದ ಕರ್ಮಪ್ರೇರಕಂಗಳು ।
ತಾನು ಕರಣವೆಂದು ಕರ್ಮ । ವೆಂದು ಕರ್ತನೆಂಬುದಾಗಿ
ತಾನು ಮೂರು ವಿಧದ ಕರ್ಮಸಂಗ್ರಹಂಗಳು ॥ ॥೧೮॥ 18

ಭೂರಿಜ್ಞಾನ ಮತ್ತೆ ಕರ್ಮ । ವದುವು ಮತ್ತೆ ಕರ್ತ ತಾನು
ಮೂರು ವಿಧವು ಎಂದು ಗುಣದ ಭೇದದಿಂದಲಿ ।
ಸಾರ ಸಾಂಖ್ಯಶಾಸ್ತ್ರದಲ್ಲಿ । ಪೇಳೆಪಟ್ಟು ಇಹವು ಅದನು
ಸಾರದಿಂದೆ ಯಥಾವಿಧದಿ ಕೇಳು ಪಾರ್ಥನೆ ॥ ॥೧೯॥ 19

ಸರುವ ಭೂತಗಳಲಿ ಯಾವ । ಜ್ಞಾನದಿಂದಲೇಕವಾಗಿ
ಇರುವ ಅವ್ಯಯದ ಭಾವವನ್ನು ಕಾಂಬನು ।
ಇರದೆ ಮತ್ತೆಯಾ ವಿಭಕ್ತ । ಗಳಲಿಯೆ ಅವಿಭಕ್ತವನ್ನು
ಅರಿತು ಕಾಂಬನದುವೆ ಜ್ಞಾನ ತಿಳಿಯೊ ಸಾತ್ವಿಕ ॥ ॥೨೦॥ 20

ಬೇರೆ ಬೇರೆ ಬಗೆಗಳಿಂದ । ಲಾದರಾವ ಜ್ಞಾನವದುವು
ಬೇರೆ ಬೇರೆ ವಿಧದನೇಕ ಭಾವಗಳನದು ।
ಕೋರಿ ತಿಳಿಯುತದೆಯೊ ಸರುವ । ಭೂತಗಳಲಿ ಬಿಡದೆ ತಾನು
ತೋರವದುವೆ ಜ್ಞಾನವನ್ನು ತಿಳಿಯೊ ರಾಜಸ ॥ ॥೨೧॥ 21

ಯಾವಜ್ಞಾನದಿಂದ ತನ್ನ । ದೊಂದೆ ಕಾರ್ಯದಲ್ಲಿ ಸರ್ವ
ಭಾವಿ ಸಕ್ತನವನು ಕಾರಣವದಿಲ್ಲದೆ ।
ಆವ ತತ್ವದರ್ಥವಿಲ್ಲ । ದಂಥಮತ್ತೆಯಲ್ಪವಾದ
ಯಾವ ಜ್ಞಾನವದುವು ತಾಮಸವು ಎನಿಸಿದೆ ॥ ॥೨೨॥ 22

ಸಲುವ ನಿಯತವಾದ ಸಂಗ । ರಹಿತ ರಾಗರಹಿತವಾಗಿ
ನಿಲದೆ ದ್ವೇಷರಹಿತವಾಗಿ ಮಾಡಿದಂಥದು ।
ಫಲದಪೇಕ್ಷೆಯಿಲ್ಲದೇಯೆ । ಗೈದ ಕರ್ಮವಾವುದದುವು
ಸಲುವ ಸಾತ್ವಿಕದ ಕರ್ಮವೆನಿಸಿ ಇರುವುದು ॥ ॥೨೩॥ 23

ತಾನದಾದರಾವ ಕರ್ಮ । ಕಾಮದಿಚ್ಛೆಯಿಂದ ಕೂಡಿ
ತಾನು ಅಹಂಕಾರದಿಂದಲಿರದೆ ಪುನಹವು ।
ತಾನು ಬಹಳದಾಯಾಸ । ದಿಂದ ಮಾಡೆಪಡುವ ಕರ್ಮ
ತಾನೆಯದುವು ರಾಜಸವದೆನಿಸಿ ಇರುವುದು ॥ ॥೨೪॥ 24

ಅದುವೆಯಾನುಬಂಧವನ್ನು । ಕ್ಷಯವದನ್ನು ಹಿಂಸೆಯನ್ನು
ಅದುವೆ ಪೌರುಷವನು ತಾನು ಲಕ್ಷ್ಯ ಮಾಡದೆ ।
ಮದದೆ ಮೋಹದಿಂದಲಾರ । ಭಿಸುವುದಾದ ಕರ್ಮವಾವು
ದದುವು ತಾನು ತಾಮಸವು ಎಂದು ಎನಿಸಿದೆ ॥ ॥೨೫॥ 25

ಸರುವ ಸಂಗ ಮುಕ್ತನಾದ । ಅಹಂಕಾರರಹಿತನಾದ
ಉರುವ ಧೃತಿಯಿನುತ್ಸಾಹದಿಂದ ಕೂಡಿದ ।
ಸರುವ ಸಿದ್ಧಿಯಸಿದ್ಧಿಯಲಿ । ತಾನು ನಿರ್ವಿಕಾರಿಯಾಗಿ
ಇರುವ ಕರ್ತನವನು ಸಾತ್ವಿಕನು ಎನಿಪನು ॥ ॥೨೬॥ 26

ಬರಿದೆ ರಾಗಯುಕ್ತ ಕರ್ಮ । ದಾ ಫಲೇಚ್ಛು ಲುಬ್ಧನಾಗಿ
ಇರುತ ತಾನು ಹಿಂಸಾತ್ಮನಶುಚಿಯಾಗಿಯು ।
ಬರಿದೆ ಹರ್ಷ ಶೋಕದಿಂದ । ಕೂಡಿದವನು ತಾನು ಅಗಿ
ಇರುವ ಕರ್ತ ರಾಜಸನು ಎನಿಸಿ ಇರುವನು ॥ ॥೨೭॥ 27

ತಾನಯುಕ್ತ ಬುದ್ಧಿಹೀನ । ಗರ್ವಿಷ್ಠ ಮೋಸಗಾರ
ತಾನು ನೀಚನವನು ಆಲಸ್ಯವಂತನು ।
ತಾನೆಯಾ ವಿಷಾದಿ ಮತ್ತೆ । ದೀರ್ಘಸೂತ್ರಿಯಾದ ಅವನು
ಹೀನ ಕರ್ತ ತಾನು ತಾಮಸನು ಎನಿಪನು ॥ ॥೨೮॥ 28

ಹೀಗೆ ಬುದ್ಧಿಯದುವೆ ಭೇದ । ಮತ್ತೆ ಧೃತಿಯಭೇದ ಗುಣದೆ
ಆಗಿ ಮೂರು ವಿಧದೊಳಿರುವುದದನು ಕೇಳೆಲೊ ।
ಈಗಲೆನ್ನ ಪೇಳೆಪಡುವ । ದದನಶೇಷದಿಂದ ತಾ ವಿ
ಭಾಗದಿಂದಲೂವೆ ಕೇಳು ನೀ ಧನಂಜಯ ॥ ॥೨೯॥ 29

ಅದುವೆ ತಾ ಪ್ರವೃತ್ತಿ ಮತ್ತೆ । ಯಾ ನಿವೃತ್ತಿಗಳಲಿ ಕಾರ್ಯ
ವದುವಕಾರ್ಯಗಳಲಿ ಭಯಾಭಯಗಳಲ್ಲಿಯು ।
ವಿಧದೆ ಬಂಧವನ್ನು ಮತ್ತೆ । ಮೋಕ್ಷವನ್ನು ಯಾವ ಬುದ್ಧಿ
ಯದುವು ತಿಳಿವುದಿಹುದು ತಾನು ಪಾರ್ಥ ಸಾತ್ವಿಕ ॥ ॥೩೦॥ 30

ಯಾವುದರಿಂ ಧರ್ಮವನ್ನ । ಧರ್ಮವನ್ನು ಮತ್ತೆ ತಾನು
ಯಾವ ಕಾರ್ಯವಾ ಅಕಾರ್ಯವನ್ನು ಮತ್ತೆಯು ।
ತಾ ವಿಚಾರಿಸದೆ ಯಥಾರ್ಥ । ವಿಲ್ಲದೇಯೆ ತಿಳಿವನವನು
ಭಾವಿಸದುವೆ ಬುದ್ಧಿ ತಾನು ಪಾರ್ಥ ರಾಜಸ ॥ ॥೩೧॥ 31

ತಾನಧರ್ಮವನ್ನು ಧರ್ಮ । ವೆಂದು ಯಾವ ಬುದ್ಧಿಯದುವು
ತಾನು ತಿಳಿವುದಾವರಿಸಿಯೆ ತಮಸಿನಿಂದಲಿ ।
ತಾನು ಸರ್ವ ಅರ್ಥವ । ವಿಪರೀತವಾಗಿ ತಿಳಿವ ಬುದ್ಧಿ
ತಾನು ಅದುವು ಪಾರ್ಥ ತಾಮಸೀಯು ಎನಿಪುದು ॥ ॥೩೨॥ 32

ಧೃತಿಯಿನಾವುದರಿಂ ಪುರುಷ । ಧಾರಣೇಯ ಮಾಳ್ಪನವನು
ಗತಿಯ ಮನದ ಪ್ರಾಣದಿಂದ್ರಿಯಗಳ ಕ್ರಿಯೆಗಳ ।
ಮತಿಯೊಳವ್ಯಭಿಚಾರಿಣೀ । ಯೋಗದಿಂದ ಧರಿಸಿದಂಥ
ಧೃತಿಯು ತಾನು ಅದುವು ಇಹುದು ಪಾರ್ಥ ಸಾತ್ವಿಕೀ ॥ ॥೩೩॥ 33

ಯಾವುದರಿಂದಾದರವನು । ಧರ್ಮಕಾಮದರ್ಥಗಳಿಗೆ
ಯಾವ ಧೃತಿಯಿನವನು ಧರಿಪ ತಾನು ಅರ್ಜುನ ।
ಯಾವುವಾ ಪ್ರಸಂಗಗಳಲಿ । ಫಲದ ಕಾಂಕ್ಷಿಯಾಗಿ ಧರಿಪ
ನಾವುದದುವು ಧೃತಿಯು ತಾನು ಪಾರ್ಥ ರಾಜಸೀ ॥ ॥೩೪॥ 34

ಯಾವುದರಿಂದವನು ಪುರುಷ । ಸ್ವಪ್ನ ಶೋಕಭಯಗಳನ್ನು
ಆ ವಿಷಾದ ಮತ್ತೆ ಮದಗಳನ್ನು ಹೀಗೆಯೆ ।
ತಾ ವಿಮೋಚಿಸುವುದು ಇಲ್ಲ । ದುಷ್ಟಬುದ್ಧಿಯುಳ್ಳ ಅವನ
ದಾವ ಧೃತಿಯು ಅದುವು ತಾನು ಪಾರ್ಥ ತಾಮಸೀ ॥ ॥೩೫॥ 35

ಇನ್ನು ಆದರದುವು ಸುಖವು । ಮೂರು ವಿಧಗಳಾಗಿ ಇರುವು
ದನ್ನು ಎನ್ನಿಮೀಗ ಕೇಳು ಭರತಋಷಭನೆ ।
ತನ್ನದದಭ್ಯಾಸದಿಂದ । ಪುರುಷನೇತರಿಂದ ರಮಿಪ
ನಿನ್ನು ಮತ್ತೆ ದುಃಖದಂತವನ್ನು ಸೇರ್ವನು ॥ ॥೩೬॥ 36

ಯಾವುದದುವು ಮೊದಲು ವಿಷದ । ಹಾಗೆ ತೋರಿದರುವೆ ಅಹುದು
ಭಾವಿಸೆ ಪರಿಣಾಮದಲ್ಲಿ ಅಮೃತದಂತೆಯೆ ।
ಆ ವಿಧವು ಆದ ಸುಖವು । ಸಾತ್ವಿಕವದು ಎನಿಸಿ ಇಹುದು
ಯಾವುದಾತ್ಮ ಬುದ್ಧಿಯಾ ಪ್ರಸಾದಜನ್ಯವು ॥ ॥೩೭॥ 37

ಯಾವುದದುವು ವಿಷಯದಿಂದ್ರಿ । ಯಗಳ ಸಂಯೋಗದಿಂದ
ಭಾವಿಸಲುವೆ ಮೊದಲು ಅಮೃತದಂತೆ ಇರುವುದೊ ।
ಯಾವುದು ಪರಿಣಾಮದಲ್ಲಿ । ವಿಷದ ಹಾಗೆ ಆಗುವಂಥ
ದಾ ವಿಧದ ಸುಖವು ರಾಜಸವು ಎನಿಸಿದೆ ॥ ॥೩೮॥ 38

ಯಾವುದದುವು ಮೊದಲು ಮತ್ತೆ । ತಾನದು ಪರಿಣಾಮದಲ್ಲಿ
ತೀವಿ ಮೋಹವನ್ನು ಬಿಡದೆ ಮಾಳ್ಪುದಾತ್ಮಕೆ ।
ಯಾವ ನಿದ್ರೆಯಿನಾಲಸ್ಯ । ವಾ ಪ್ರಮಾದದಿಂದ ಹುಟ್ಟಿ
ದಾವ ಸುಖವು ಅದುವು ತಾಮಸವು ಎನಿಸಿದೆ ॥ ॥೩೯॥ 39

ಯಾವ ವಸ್ತು ಕೂಡ ಇಲ್ಲ । ಪೃಥಿವಿಯಲ್ಲು ಸ್ವರ್ಗದಲ್ಲು
ದೇವತೆಗಳೊಳಲ್ಲಿ ಕೂಡ ಅಥವ ಪುನಹವು ।
ತೀವಿದಿದುವೆ ಪ್ರಕೃತಿಯಿಂದ । ಹುಟ್ಟಿದಂಥ ಸತ್ವವಾದಿ
ಯಾವ ಮೂರು ಗುಣಗಳಿಂದ ಮುಕ್ತವಾದುದು ॥ ॥೪೦॥ 40

ಧರೆಯೊಳಿಲ್ಲಿ ಬ್ರಾಹ್ಮಣರಾ । ಕ್ಷತ್ರಿಯರಾ ವೈಶ್ಯರುಗಳ
ಇರದೆ ಮತ್ತೆ ಶೂದ್ರರುಗಳ ಹೇ ಪರಂತಪ ।
ಮೆರೆವ ಕರ್ಮಗಳವು ತಾ । ವಿಭಕ್ತವಿಹವು ಅವರ ಅವರ
ತರಹದಾ ಸ್ವಭಾವಜನ್ಯ ಗುಣಗಳಿಂದಲಿ ॥ ॥೪೧॥ 41

ಶಮೆಯ ಗುಣವು ತಪದ ಕರ್ಮ । ಶೌಚಕರ್ಮಗಳವು ಮತ್ತೆ
ಸಮದ ಕ್ಷಾಂತಿಭಾವವಾರ್ಜವವು ತಾನದು ।
ವಿಮಲ ಜ್ಞಾನ ಸುವಿಜ್ಞಾನ । ಮತ್ತೆ ಅಸ್ತಿಕ್ಯ ಬುದ್ಧಿ
ಸಮದೆ ಬ್ರಾಹ್ಮಣಸ್ವಭಾವಜನ್ಯಕರ್ಮವು ॥ ॥೪೨॥ 42

ಅದುವೆ ಶೌರ್ಯವದುವು ತೇಜ । ವದುವು ಧೃತಿಯು ದಾಕ್ಷ್ಯ ಮತ್ತೆ
ಯದುವೆ ಯುದ್ಧದಲ್ಲು ಹಿಮ್ಮೆಟ್ಟದಿರುವುದು ।
ವಿಧದ ದಾನವದುವು ಈ । ಶ್ವರನ ಭಾವವದುವು ತಾನು
ಸದಯ ಕ್ಷತ್ರಿಯಸ್ವಭಾವಜನ್ಯ ಕರ್ಮವು ॥ ॥೪೩॥ 43

ವರದ ಕೃಷಿಯು ಗೋವ ರ । ಕ್ಷಣೆಯದು ವಾಣಿಜ್ಯವದುವು
ಇರದೆ ವೈಶ್ಯರಾ ಸ್ವಭಾವಜನ್ಯ ಕರ್ಮವು ।
ಪರಿಚರಿಯಾತ್ಮಕವು ಆದ । ಸೇವೆ ಶುಶ್ರೂಷ ಕಾರ್ಯ
ಸರುವ ಶೂದ್ರರಾ ಸ್ವಭಾವಜನ್ಯ ಕರ್ಮವು ॥ ॥೪೪॥ 44

ತನ್ನ ತನ್ನ ಕರ್ಮಗಳಲಿ । ತಾನು ನಿರತನಾಗಿ ಬಿಡದೆ
ಇನ್ನು ಸಂಸಿದ್ಧಿಯನ್ನು ನರನು ಪಡೆವನು ।
ತನ್ನ ಕರ್ಮದಲ್ಲಿ ನಿರತ । ನಾಗಿ ಸಿದ್ಧಿಯನ್ನು ಅವನು
ಇನ್ನು ಹೇಗೆ ಪಡೆವನೆಂಬುದನ್ನು ಕೇಳೆಲೊ ॥ ॥೪೫॥ 45

ಯಾವನಿಂದ ಭೂತಗಳಾ । ಆ ಪ್ರವೃತ್ತಿಯೊದಗಿ ಬಹುದೊ
ಯಾವನಿಂದ ಸರುವವಿದುವು ವ್ಯಾಪ್ತವಿರುವುದೊ ।
ಓವಿದಾ ಸ್ವಕರ್ಮದಿಂದ । ಲವನ ಬಿಡದೆಯರ್ಚಿಸುತ್ತ
ಲಾ ವಿಧದಲಿ ಸಿದ್ಧಿಯನ್ನು ಮನುಜ ಪಡೆವನು ॥ ॥೪೬॥ 46

ಗುಣದೆ ರಹಿತವಾದರೂ ಸ್ವ । ಧರ್ಮ ಶ್ರೇಯವಾಗಿ ಇಹುದು
ಗುಣವದುಳ್ಳ ಪರರ ಧರ್ಮನಿಷ್ಠೆಗಿಂತಲು ।
ಗುಣಸ್ವಭಾವ ನಿಯತವಾದ । ಕರ್ಮವನ್ನು ಗೈವ ಮನುಜ
ಅಣುವು ಮಾತ್ರ ಕಿಲ್ಬಿಷವನು ಪಡೆವುದಿಲ್ಲವು ॥ ॥೪೭॥ 47

ಸಹಜವಾಗಿ ಇಹುದು ಕರ್ಮ । ಕೌಂತೇಯ ನೀನು ಕೇಳು
ಸಹಿತ ದೋಷವಾದರದನು ತ್ಯಜಿಸಬಾರದು ।
ಇಹವು ಸರ್ವ ಕರ್ಮಗಳುವೆ । ದೋಷದಿಂದ ಕೂಡಿ ತಾವು
ಇಹವೊಲಗ್ನಿ ಧೂಮದಿಂದ ಕೂಡಿ ತಾನದು ॥ ॥೪೮॥ 48

ಸರುವ ಸ್ಥಳಗಳಲ್ಲಸಕ್ತ । ಬುದ್ಧಿಯುಳ್ಳನಾಗಿ ಯಾವ
ನಿರುವನಾ ಜಿತಾತ್ಮ ತಾನು ಸ್ಪೃಹೆಯ ರಹಿತನು ।
ಪರಮವಾದ ನೈಷ್ಕರ್ಮ್ಯ । ಸಿದ್ಧಿಯನ್ನು ಪಡೆವನವನು
ಉರದೆ ತಾನು ಅದುವೆ ಸಂನ್ಯಾಸದಿಂದಲಿ ॥ ॥೪೯॥ 49

ಹೀಗೆ ನೈಷ್ಕರ್ಮ್ಯ ಸಿದ್ಧಿ । ಯನ್ನು ಪಡೆದ ಪುರುಷನವನು
ಹೇಗೆ ಬ್ರಹ್ಮನನ್ನು ಪಡೆವನೆನ್ನಿಮರಿಯೆಲೊ ।
ಹಾಗೆಯಾ ಸಮಾಸದಿಂದ । ಲೇಯೆ ಕೌಂತೇಯ ನೀನು
ಆಗಿ ಇಹುದು ಜ್ಞಾನವದುವೆ ಪರಮ ನಿಷ್ಠೆಯು ॥ ॥೫೦॥ 50

ಆ ವಿಶುದ್ಧವಾದ ಬುದ್ಧಿ । ಯಿಂದ ಯುಕ್ತನಾಗಿ ಮತ್ತೆ
ಯೋವಿ ಧೃತಿಯಿನಾತ್ಮವನ್ನು ನಿಯಮಿಸುತ್ತಲಿ ।
ಈ ವಿಧದಲಿ ಶಬ್ದವಾದಿ । ವಿಷಯಗಳನು ತ್ಯಜಿಸಿ ಮತ್ತೆ
ತಾ ವಿಮುಕ್ತನಾಗಿ ರಾಗದ್ವೇಷದಿಂದಲಿ ॥ ॥೫೧॥ 51

ಅದೇಕಾಂತ ಸ್ಥಳವ ಸೇವಿ । ಸುತ್ತ ಲಘುವದಾಗಿ ಉಂಡು
ಸದಾ ವಶಕೆ ತಂದು ವಾಕ್ಕು ಕಾಯ ಮನಗಳ ।
ಅದೇ ಧ್ಯಾನಯೋಗಪರನು । ಆಗಿಯವನು ನಿತ್ಯವೂವೆ
ವಿಧಾನದಲಿ ವೈರಾಗ್ಯಯುಕ್ತನಾಗುತ ॥ ॥೫೨॥ 52

ತನ್ನ ಅಹಂಕಾರವನ್ನು । ಬಲವದನ್ನು ದರ್ಪವನ್ನು
ಇನ್ನು ಕಾಮ ಕ್ರೋಧವನ್ನು ಪರಿಗ್ರಹವನು ।
ಚೆನ್ನು ಆಗಿ ಬಿಟ್ಟು ನಿರ್ । ಮಮನು ಆಗಿ ಶಾಂತನಾಗಿ
ತಾನು ಬ್ರಹ್ಮನನ್ನು ಪಡೆಯಲರ್ಹನಾಗುವ ॥ ॥೫೩॥ 53

ತಾನು ಬ್ರಹ್ಮಭೂತನಾಗಿ । ಪ್ರಸನ್ನಾತ್ಮನಾದ ಪುರುಷ
ಇನ್ನು ಶೋಚಿಸುವುದು ಕಾಂಕ್ಷಿಸುವುದು ಇಲ್ಲವು ।
ಇನ್ನು ಸರ್ವಭೂತಗಳಲಿ । ತಾ ಸಮಾನಭಾವಿಯಾಗಿ
ನನ್ನ ಪರಮ ಭಕ್ತಿಯನ್ನು ಬಿಡದೆ ಪಡೆವನು ॥ ॥೫೪॥ 54

ನನ್ನೊಳಿಟ್ಟ ಭಕ್ತಿಯಿಂದ । ತಿಳಿವನವನು ಯಾವನೆಂದು
ನನ್ನನೆಂಥವನು ಎಂದು ತತ್ವದಿಂದಲಿ ।
ನನ್ನನಿಂತು ಎಂದು ತತ್ವ । ದಿಂದ ತಿಳಿದು ಅವನು ನಿಜದೆ
ನನ್ನನೇ ಪ್ರವೇಶಿಸುವನು ತಾನನಂತರ ॥ ॥೫೫॥ 55

ಸರುವ ಕರ್ಮಗಳನು ಸದಾ । ಮಾಡುತಿದ್ದರೂವೆ ಅವನು
ಸರುವ ರೀತಿ ನನ್ನನಾಶ್ರಯಿಸಿದ ಪುರುಷನು ।
ಪರಮದೆನ್ನದಾ ಪ್ರಸಾದ । ದಿಂದ ಶಾಶ್ವತವು ಆದ
ಪರಮ ಅವ್ಯಯದ ಪದವ ತಾನು ಪಡೆವನು ॥ ॥೫೬॥ 56

ಸರುವ ಕರ್ಮಗಳನು ಚೇತ । ದೆನ್ನೊಳೇಯೆ ಸಂನ್ಯಸಿಸಿ
ಇರುತ ನೀನು ನನ್ನ ಪರಾಯಣನು ಆಗಿಯೆ ।
ಉರುವ ಬುದ್ಧಿಯೋಗವನ್ನು । ಆಶ್ರಯಿಸುತ ನೀನು ಪಾರ್ಥ
ನಿರುತ ನನ್ನೊಳೇಯೆ ಚಿತ್ತವುಳ್ಳನಾಗೆಲೊ ॥ ॥೫೭॥ 57

ನನ್ನೊಳೇಯೆ ಚಿತ್ತವುಳ್ಳ । ನಾಗಿ ಸರ್ವ ವಿಘ್ನಗಳನು
ನನ್ನದಾ ಪ್ರಸಾದದಿಂದ ನೀನು ದಾಟುವೆ ।
ನಿನ್ನದಹಂಕಾರದಿಂದ । ಒಂದು ವೇಳೆ ನನ್ನ ಮಾತ
ನಿನ್ನು ಕೇಳದಿದ್ದರೂ ವಿನಾಶ ಹೊಂದುವೆ ॥ ॥೫೮॥ 58

ಇನ್ನು ಅಹಂಕಾರವನ್ನು । ಆಶ್ರಯಿಸುತ ನೀನು ಮನದೊ
ಳಿನ್ನು ಯುದ್ಧ ಮಾಡೆನೆನುತ ನಿಶ್ಚಯಿಸಿದರೆ ।
ನಿನ್ನ ನಿಶ್ಚಯವು ಮಿಥ್ಯ । ವೇತಕೆಂದರದುವು ಬಿಡದೆ
ನಿನ್ನ ಪ್ರಕೃತಿಯಾ ಸ್ವಭಾವ ನಿಯೋಜಿಸುವುದು ॥ ॥೫೯॥ 59

ನಿನ್ನದಾ ಸ್ವಭಾವಜನ್ಯ । ವಾದ ಕರ್ಮದಿಂದಲೇಯೆ
ಇನ್ನು ಬಿಡದೆ ಕೌಂತೇಯ ನೀ ನಿಬದ್ಧನು ।
ನಿನ್ನ ಮೋಹದಿಂದ ಏನ । ಮಾಡಲಿಚ್ಛಿಸುವುದು ಇಲ್ಲ
ಇನ್ನು ನೀನು ಅದನೆ ಗೈವೆ ಅವಶನಾಗಿಯೆ ॥ ॥೬೦॥ 60

ಸರುವ ಭೂತಗಳಾ ಹೃದಯ । ದೇಶದಲ್ಲಿ ಈಶ್ವರನು
ಮೆರೆಯುತಲಿಯೆ ತಾನು ನೆಲಸಿ ಇರುವನರ್ಜುನ ।
ಸರುವ ಭೂತಗಳನು ಯಂತ್ರ । ದಲ್ಲಿ ಆರೂಢಗಳನು
ಭರದೆ ಭ್ರಾಮಿಸುತ್ತಲಿಹನು ಮಾಯೆಯಿಂದಲಿ ॥ ॥೬೧॥ 61

ಇರುತಲಿರುವನಿಂತು ಈ । ಶ್ವರನನೇ ಶರಣು ಹೋಗು
ಸರುವ ಭಾವದಿಂದ ನೀನು ಬಿಡದೆ ಭಾರತ ।
ಮೆರೆಯುವವನ ಆ ಪ್ರಸಾದ । ದಿಂದಲೇಯೆ ಪಡೆವೆ ನೀನು
ಪರಮ ಶಾಂತಿಯನ್ನು ಶಾಶ್ವತದ ಸ್ಥಾನವ ॥ ॥೬೨॥62

ಇಂತು ನಿನಗೆ ಜ್ಞಾನವದುವು । ಒರೆಯಪಟ್ಟುದೆನ್ನಿಮೀಗ
ಎಂತು ಗುಹ್ಯಕಿಂತ ಗುಹ್ಯತರವು ಆದುದು ।
ಅಂತು ಇದನು ಬಿಡದೆ ನೀ । ವಿಮರ್ಶೆಗೈದಶೇಷದಿಂದ
ಲೆಂತು ಮಾಡಲಿಚ್ಛಿಸುವೆಯೊ ಅಂತೆ ಮಾಡೆಲೊ ॥ ॥೬೩॥ 63

ಸರುವಕಿಂತ ಗುಹ್ಯತಮವು । ಆದುದನ್ನು ಪುನಹ ನೀನು
ಪರಮವಾದ ನನ್ನ ವಚನವನ್ನು ಕೇಳೆಲೊ ।
ಇರುವೆ ನೀನು ನನಗೆ ಬಹಳ । ಇಷ್ಟನಾಗಿ ಅದರಿನಿಂದ
ಒರೆವೆನದನು ನಾನು ನಿನಗೆ ಹಿತದ ಮಾತನು ॥ ॥೬೪॥ 64

ನನ್ನೊಳೇಯೆ ಮನವನಿರಿಸು । ನನ್ನ ಭಕ್ತನಾಗು ನೀನು
ನನ್ನ ಕುರಿತು ಯಜಿಸು ನನ್ನ ನಮಸ್ಕರಿಸೆಲೊ ।
ನನ್ನನೇ ಪಡೆವೆ ನೀನಿ । ದೆನ್ನ ಸತ್ಯದಾ ಪ್ರತಿಜ್ಞೆ
ಯಿನ್ನು ನೀನು ನನಗೆ ಅತ್ಯಂತ ಪ್ರಿಯನಿಹೆ ॥ ॥೬೫॥ 65

ಸರುವವಾದ ಧರ್ಮಗಳನು । ಪರಿತ್ಯಜಿಸಿ ಪೂರ್ಣವಾಗಿ
ಇರುವ ನನ್ನನೊಬ್ಬನನ್ನೆ ಶರಣು ಪೊಂದೆಲೊ ।
ಸರುವವಾದ ಪಾಪಗ । ಳಿಂದಾನು ನಿನ್ನ ಮುಕ್ತಗೊಳಿಪೆ
ನರಿಯೊ ಇನ್ನು ನೀನು ಮಾಡಬೇಡ ಶೋಕವ ॥ ॥೬೬॥ 66

ಇದನು ಗೀತದೀ ರಹಸ್ಯ । ವನ್ನು ತಪಸು ಇಲ್ಲದವಗೆ
ಅದುವೆ ಭಕ್ತನಲ್ಲದವಗೆ ಎಂದಿಗಾದರು ।
ಇದನು ಕೇಳಲಿಚ್ಛೆಯಿಲ್ಲ । ದಿರುವ ಅವನಿಗೂವೆ ಮತ್ತೆ
ಯದುವೆ ನನ್ನ ದ್ವೇಷಿಸುವಗೆ ಪೇಳಲಾಗದು ॥ ॥೬೭॥ ೬೭

ಪರಮವಾದ ಗುಹ್ಯತತ್ವ । ವನ್ನು ಯಾವನಿದನು ತಾನು
ಸಿರಿಯ ನನ್ನ ಭಕ್ತರಿಂಗೆ ಬಿಡದೆ ಪೇಳ್ವನೊ ।
ಪರಮ ಭಕ್ತಿಯನ್ನು ನನ್ನೊ । ಳೀಯೆ ಮಾಡುತವನು ತಾನು
ಇರದೆ ಪಡೆವನೆನ್ನನೇಯೆ ಇಲ್ಲ ಸಂಶಯ ॥ ॥೬೮॥ 68

ಇರುವುದಿಲ್ಲ ಯಾವನೂವೆ । ಮನುಜರಲ್ಲಿ ಅವನಿಗಿಂತ
ಸರಿಯ ಮಿಗಿಲು ಆದ ಪ್ರಿಯವ ಮಾಳ್ಪ ಶ್ರೇಷ್ಠನು ।
ಇರುವುದಿಲ್ಲ ಮತ್ತೆ ನನಗೆ । ಅವನಿಗಿಂತ ಯಾವನೂವೆ
ಧರೆಯೊಳೆಲ್ಲು ತಾನು ಅಧಿಕನಾದ ಪ್ರಿಯಕರ ॥ ॥೬೯॥ 69

ಅದುವೆ ಯಾವನವನು ಬಿಡದೆ । ಅಧ್ಯಯನವನ್ನು ಮಾಳ್ಪ
ನಿದನು ಧರ್ಮ ಸಂವಾದವೆಮ್ಮ ಇಬ್ಬರ ।
ಅದುವೆ ಜ್ಞಾನಯಜ್ಞದಿಂದ । ಲೇಯೆ ಅವನು ನನ್ನ ಬಿಡದೆ
ವಿಧದೆ ಯಜಿಪನೆಂಬುದಾಗಿ ನನ್ನ ಮತಿಯದು ॥ ॥೭೦॥ 70

ಪರಮ ಶ್ರದ್ಧೆವಂತನಾ ಅ । ಸೂಯೆಯಿಲ್ಲದವನು ಆದ
ನರನು ಯಾವನವನು ಕೇಳಿದರೆಯು ತಾನಿದ ।
ನಿರುತವವನು ಕೂಡ ಮುಕ್ತ । ನಾಗಿ ಪುಣ್ಯವಂತರುಗಳ
ಪರಮ ಶುಭದ ಲೋಕಗಳನು ಬಿಡದೆ ಪಡೆವನು ॥ ॥೭೧॥ 71

ಏನನಾದರಿದನು ಸ್ವಲ್ಪ । ವಾದರೂವೆ ನೀನು ಪಾರ್ಥ
ತಾನದೇಕಾಗ್ರ ಚಿತ್ತದಿಂದ ಕೇಳ್ದೆಯ ।
ಏನದಾದರೂ ನಿನ್ನ । ದದಜ್ಞಾನ ಸಂಮೋಹ
ತಾನು ಪೂರ್ಣ ನಷ್ಟವಾಯಿತೇ ಧನಂಜಯ ॥ ॥೭೨॥ 72

ನನ್ನ ಮೋಹ ನಷ್ಟವಾಯಿ । ತಿನ್ನು ಸ್ಮೃತಿಯು ಲಬ್ಧವಾಯ್ತು
ನಿನ್ನದಾ ಪ್ರಸಾದದಿಂದ ಓಹೊ ಅಚ್ಯುತ ।
ಇನ್ನು ನಾನು ಸಂದೇಹ । ವಿಲ್ಲದಾದೆ ಮಾಳ್ಪೆ ನಾನು
ನಿನ್ನ ವಚನವನ್ನು ಬಿಡದೆ ಎಂದನರ್ಜುನ ॥ ॥೭೩॥ 73

ಹೀಗೆ ರಾಜ! ನಾನು ಯೋಗಿ । ವಾಸುದೇವನವನ ಮತ್ತೆ
ಹಾಗು ಕೂಡ ಆ ಮಹಾತ್ಮನಾದ ಪಾರ್ಥನ ।
ಯೋಗ ಸಂವಾದವದ್ ೧ ಭುತವು ರೋಮಾಂಚಕಾರಿ
ಯೋಗ ಗೀತವಿದನು ಕೇಳ್ದೆನೆಂದ ಸಂಜಯ ॥ ॥೭೪॥ 74

ಪರಮ ಯೋಗಿ ವ್ಯಾಸರಾ । ಪ್ರಸಾದದಿಂದೆ ನಾನು ಬಿಡದೆ
ಪರಮ ಗುಹ್ಯವಾದ ಇದನು ಕೇಳ್ದನಾದೆನು ।
ಪರಮ ಯೋಗವಿದನು ಯೋ । ಗೀಶ್ವರನು ಸಾಕ್ಷಾತ್ತು
ಸಿರಿಯ ಕೃಷ್ಣನಿಂದೆ ಸ್ವಯಂ ಕಥಿತವಾದುದ ॥ ॥೭೫॥ 75

ಓಹೊ ರಾಜ! ನಾನು ಇದನು । ಸ್ಮರಿಸುತಲಿಯೆ ಸ್ಮರಿಸುತಲಿಯೆ
ಆಹ ಸಂವಾದವದ್ಭುತವು ತಾನಿದ ।
ಆಹ ಕೇಶವಾರ್ಜುನರ । ಪುಣ್ಯ ಸಂವಾದವನ್ನು
ಹೋ ಹೊ ಹರ್ಷಿಸುವೆನು ನಾನು ಪುನಹ ಪುನಹವು ॥ ॥೭೬॥ 76

ಆಹ ಮತ್ತೆಯದನು ನಾನು । ಸ್ಮರಿಸುತಲಿಯೆ ಸ್ಮರಿಸುತಲಿಯೆ
ಆ ಹರಿಯ ಅತಿಯದದ್ಭುತದ ರೂಪವ ।
ಓಹೊ ರಾಜ! ನನಗೆ ಮಹಾ । ವಿಸ್ಮಯವದಹುದು ಮತ್ತೆ
ಹೋಹೊ ಹರ್ಷಿಸುವೆನು ನಾನು ಪುನಹ ಪುನಹವು ॥ ॥೭೭॥ 77

ಎಲ್ಲಿ ಯೋಗೀಶ ಕೃಷ್ಣ । ಎಲ್ಲಿ ಧನುರ್ಧರನು ಪಾರ್ಥ
ಎಲ್ಲಿ ಇಬ್ಬರೆಡೆಯಬಿಡದೆ ನೆಲಸಿ ಇರುವರು ।
ಅಲ್ಲಿ ಶ್ರೀಯು ವಿಜಯ ಭೂತಿ । ಪರಮ ಐಸಿರಿಗಳು ತಾವು
ಎಲ್ಲವಚಲವಿರ್ಪುವೆನ್ನ ನೀತಿಮತಿಯೊಳು ॥ ॥೭೮॥ 78

**ಓಂ ತತುಸತಿದುವೆ ಭಗವದ್ । ಗೀತೆಯಲ್ಲಿ ಹತ್ತು ಎಂಟು**
**ಸಾಂತಗೊಂಡ ಮೋಕ್ಷ ಸಂನ್ಯಾಸಯೋಗವು ॥**

**ಹರಿಃ ಓಂ ತತ್ ಸತ್!**
**ಹರಿಃ ಓಂ ತತ್ ಸತ್!!**
**ಹರಿಃ ಓಂ ತತ್ ಸತ್!!!**



ಅಮೃತ ಚನ್ನಶಾಮ
(1916–2007)

# ಕವಿವಾಕ್ಯ

ಗೀತಯೋಗವೆಂಬ ಯೋಗ । ಷಟ್ಪದಿ ಗ್ರಂಥವಿದುವು
ರೀತಿ ಸಂಪೂರ್ಣವಾಗಿ ಮೆರೆಯುವಂಥದು ।
ಪೂತ ಸಹೃದರಿಗೆ ತಾನು । ಪ್ರೀಯಕರವು ಫಲಪ್ರದವು
ಖ್ಯಾತಿಪಡೆಯದಿಹುದೆ ಇಂಪು ನುಡಿಗಳಿಂದಲಿ ॥ ॥ 1 ॥

ಸವಿಯ ಅಮೃತಚನ್ನಶಾಮ । ನೆಂಬ ಕಾವ್ಯನಾಮದಿಂದ
ಕವಿಯು ಕಾಶ್ಯಪರ್ಷಿ ಗೋತ್ರಭವನು ಎನಿಪನು ।
ಬುವಿಯೊಳಮೃತಪುರಿಯ ಚನ್ । ನಪ್ಪಯ್ಯ ಸಾಕಮ್ಮನವರ
ಕುವರ ಧೀಮಂತ ಶಾಮಣ್ಣನೆಂಬೊನು ॥ ॥ 2 ॥

ಏಕಲೂನವಿಂಶತಿಶತ । ಷೋಡಶಾಖ್ಯ ಇಸವಿಯಲ್ಲಿ
ಏಕದಶದ ಮಾಸವಾ ನವಂಬರ್ರೈದಕೆ ।
ಏಕಸಮದ ನಳನ ಅಬ್ಧ । ಕಾರ್ತೀಕ ಶುದ್ಧ ದಶಮಿ
ಮಿಕ್ಕ ಭಾನುವಾರದಂದು ಕವಿಯು ಜನಿಸಿದ ॥ ॥ 3 ॥

ಶಾನುಭೋಗ ಸುಬ್ಬರಾಯ । ಅನ್ನದಾನಿ ಕವಿಯ ತಾತ
ಆನುವಂಶಿ ರಾಮನರಸ ಮುತ್ತಾತನು ।
ಮುನ್ನಿನವನು ಮರಿಯತಾತ । ನಾ ವಕೀಲ ಶಾಮಯ್ಯ
ಮಾನಿ, ಮೂರನೆಯ ಕೃಷ್ಣರಾಜರಡಿಯಲಿ ॥ ॥ 4 ॥

ಮೂಲಪುರುಷ ಚನ್ನಪ್ಪಯ್ಯ । ನಳಿಯನವನೆ ಶಾಮಯ್ಯ
ಕಾಲ ಒಂದು ನೂರ ಐವತ್ತು ವರುಷದೆ ।
ಮೂಲಪುರುಷನಾತ ಮೂ । ರನೆಯ ಕೃಷ್ಣರಾಜರಿಂದ
ಮೇಲದಾದ ಮಾನ ಸಿರಿಯ ಪಡೆದು ಬಾಳ್ದನು ॥ ॥ 5 ॥

ನಾರಸಿಂಹದೇವ ಕೃಪೆಯ । ಬಲದೆ ರಚಿತ ಗೀತವಿದುವು ।
ಸಾರತತ್ವದೃಷ್ಟಿಯನ್ನು ಕವಿಗೆ ಕೊಟ್ಟಿತು ।
ಕೋರುತಿದನು ನಿಯತವಾಗಿ । ನಿತ್ಯಪಠನ ಗೈಯಲದುವು
ಮಾರಪಿತನ ಸೇವೆಯನಿಸಿ ಶಾಂತಿ ನೀಡಿತು ॥ ॥ 6 ॥

ಭದ್ರಂ, ಶುಭಂ, ಮಂಗಳಂ.